ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


20 ಜನವರಿ 2016 ಪುಟ 16 ರೂ. 15/-



ನಿರ್ಗಮಿಸಿದ ಗೋವಿಂದೇ ಗೌಡ

ನಿರಂಜನ್ ಅಮರನಾದ ಕಥೆ





ಬೆನ್ನಿಗೆ ಇರಿದೋರ್ಯಾರು?


ಟಿ ಹತ್ತಿ ತಂದಿಟ್ಟ ಅನಾಹುತ

ಘೋಟನೇಕರ್ ಅನರ್ಹತೆಯ ಅಡ್ಡಕತ್ತರಿಯಲ್ಲಿ



ಅಕ್ರಮ ಪಡಿತರ ಚೀಟಿ: ಅಕ್ರಮ ಯಾರದ್ದು?

ಅಂಚಿನಿಂದ...



ಡಾ.ವಾಸು ಎಚ್.ವಿ.

ಅಂತಿಮವಾಗಿ, ಕರ್ನಾಟಕದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಲಕ್ಷಾಂತರ 'ಅಕ್ರಮ' ಪಡಿತರ ಚೀಟಿಗಳನ್ನು ಕಡಿತಗೊಳಿಸುವಲ್ಲಿ ಯಶಸ್ವಿಯಾಗಿದೆ. ಆ ಮೂಲಕ ಅನ್ನಭಾಗ್ಯ ಯೋಜನೆಗೆ ಸರ್ಕಾರ ಮಾಡಬೇಕಾದ ಖರ್ಚೂ ಸಹ ಸಾಕಷ್ಟು ಕಡಿಮೆಯಾಗಿದೆ. ಇದರಲ್ಲಿ ಹೊಸದೇನಿಲ್ಲ, ಹೆಚ್ಚು ಕಡಿಮೆ ಕಳೆದ 15 ವರ್ಷಗಳಿಂದ ಆಳ್ವಿಕೆ ನಡೆಸಿದ ಎಲ್ಲಾ ಸರ್ಕಾರಗಳೂ ಮಾಡಲೇಬೇಕೆಂದು ಕೊಂಡು ಬಂದಿದ್ದ ಕೆಲಸವನ್ನು ಈಗ ತಂತ್ರಜ್ಞಾನದ ನೆರವಿನಿಂದ ಮಾಡಿ ಮುಗಿಸಲಾಗಿದೆ. ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದರೆ, ಈ ಹಿಂದೆ ನಡೆದ ಕೆಲವು ಘಟನಾವಳಿಗಳನ್ನು ಮೆಲುಕು ಹಾಕಬೇಕಿದೆ.

2009ರ ಆಗಸ್ಟ್‌ನಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರು ಅಕ್ರಮವಾಗಿ ಬಿಪಿಎಲ್ ಪಡಿತರ ಚೀಟಿ ಪಡೆದಿರುವವರ ವಿರುದ್ಧ ತಿಂಗಳೊಳಗೆ ಕಠಿಣ ಕ್ರಮ ಜರುಗಿಸುತ್ತೇವೆಂದು ಹೇಳಿದ್ದರು. ಆಂಧ್ರಪ್ರದೇಶದಲ್ಲೂ ಲೋಕಸಭಾ ಚುನಾವಣೆ ನಡೆದ (ಅಲ್ಲಿ ವಿಧಾನಸಭೆಗೂ ಜೊತೆಯಲ್ಲೇ ಚುನಾವಣೆ ನಡೆದು ರಾಜಶೇಖರ ರೆಡ್ಡಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಮರು ಚುನಾಯಿತವಾಗಿತ್ತು) ತಿಂಗಳೊಳಗೆ ಯಥಾವತ್ ಇದೇ ಆದೇಶ ಹೊರಕ್ಕೆ ಬಂದಿತ್ತು. ಅಲ್ಲಿಗೂ ಇಲ್ಲಿಗೂ ಎರಡು ವ್ಯತ್ಯಾಸಗಳಿದ್ದವು ಅಷ್ಟೆ. ಒಂದು, ಇಲ್ಲಿ ಚುನಾವಣೆ ನಡೆದ ಮೂರನೇ ತಿಂಗಳಿಗೆ 'ಅಕ್ರಮ' ಪಡಿತರ ಚೀಟಿ ರದ್ದು ಮಾಡುವ ಆದೇಶ ಬಂದಿತ್ತು. ಎರಡನೆಯದ್ದು, ಆಂಧ್ರದಲ್ಲಿ 30 ಲಕ್ಷ ಪಡಿತರ ಚೀಟಿಯನ್ನು ರದ್ದುಗೊಳಿಸಿ ಎಂದು ಆದೇಶ ಹೊರಡಿಸಿದರೆ, ಕರ್ನಾಟಕದಲ್ಲಿ ಶೇ.30 ಪಡಿತರ ಚೀಟಿಯನ್ನು ರದ್ದುಗೊಳಿಸಿ ಎಂದು ಸೂಚಿಸಲಾಗಿತ್ತು. ತಮಾಷೆಯೆನ್ನಿಸಬಹುದಾದ ಈ ವ್ಯತ್ಯಾಸಗಳ ಹಿಂದೆಯೂ ಗಂಭೀರ ಕಾರಣಗಳಿದ್ದವು.


ಹಸಿರುಕ್ರಾಂತಿಯ ಸುತ್ತಮುತ್ತಲಲ್ಲಿ ಆರಂಭವಾದ ಪಡಿತರ ವಿತರಣೆ ವ್ಯವಸ್ಥೆಯು ಬಡ ಮತ್ತು ಕೆಳಮಧ್ಯಮ ವರ್ಗದವರ ಬದುಕಿನ ಆಸರೆಯಾಗಿದೆ. ಈಗೊಂದು 25 ವರ್ಷಗಳ ಹಿಂದೆ ಅಕ್ಕಿ, ಗೋಧಿ, ಸಕ್ಕರೆ, ಸೀಮೆಎಣ್ಣೆಯ ಜೊತೆಗೆ ಬೇಳೆ, ಎಣ್ಣೆ, ಸೋಪು, ಬಟ್ಟೆಗಳನ್ನೂ ಪಡಿತರ ವ್ಯವಸ್ಥೆಯ ಮುಖಾಂತರ ಮಾರಲಾಗುತ್ತಿತ್ತು. ಅವೆಲ್ಲವನ್ನೂ ಹಂತಹಂತವಾಗಿ ಕಡಿತ ಮಾಡಿ ಈಗ ಅಕ್ಕಿ ಅಥವಾ ಗೋಧಿ, ಹಿಡಿಯಷ್ಟು ಸಕ್ಕರೆ, ಒಂದೆರಡು ಲೀಟರ್ ಸೀಮೆಎಣ್ಣೆಗೆ ಸೀಮಿತವಾಗಿದೆ. ಈ ಕಡಿತದ ಹಿಂದಿನ ಪ್ರಮುಖ ಕಾರಣ ವಿಶ್ವಬ್ಯಾಂಕ್, ಐಎಂಎಫ್, ಡಬ್ಲ್ಯುಟಿಓ ಪ್ರಣೀತ ಜಾಗತೀಕರಣ ನೀತಿಯೆಂಬುದು ಸರ್ವವಿಧಿತ. ಅಂತಿಮವಾಗಿ '90ರ ದಶಕದಲ್ಲಿ ಪಡಿತರ ವ್ಯವಸ್ಥೆಯಲ್ಲಿ ಎಪಿಎಲ್ ಮತ್ತು ಬಿಪಿಎಲ್ ಎಂಬ ವರ್ಗೀಕರಣವಾಯಿತು. ಈ ದಶಕದಲ್ಲಿ ಬಿಪಿಎಲ್‌ನಲ್ಲೂ (ಬಡತನ ರೇಖೆಯ ಕೆಳಗಿರುವವರು) ಬಡವರು ಮತ್ತು ಕಡುಬಡವರು ಎಂಬ ಒಳಮೀಸಲಾತಿ ಶುರುವಾಯಿತು. ಕಡುಬಡವರ (ಅಂತ್ಯೋದಯ) ಕಾರ್ಡ್ ಪಡೆದವರಿಗೆ ಮಾತ್ರ ಬಿಪಿಎಲ್‌ನ ಸೌಲಭ್ಯ ಸಿಗುವಂತೆ ಮಾಡುವುದು ಇಂತಹ ವರ್ಗೀಕರಣದ ಹಿಂದಿನ ಉದ್ದೇಶವಾಗಿತ್ತು. ಈ ವರ್ಗೀಕರಣಗಳಿಗೆ ಹಲವಾರು ಮಾನದಂಡಗಳನ್ನು ನಿಗದಿ ಮಾಡಿ, ಬಹುತೇಕ ಯಾರಿಗೂ ಕಡುಬಡವರೆಂಬ ಪಟ್ಟ ಸಿಗದಂತೆ ನೋಡಿಕೊಳ್ಳಲಾಯಿತು.

ಹೀಗೆ ಮಾಡಿದ್ದರಿಂದ ಬಿಪಿಎಲ್ ಕಾರ್ಡ್‌ಗಳಿಗೆ ಸಾಕಷ್ಟು ಡಿಮ್ಯಾಂಡ್ ಉಂಟಾಗಿ, ದೊಡ್ಡ ಸಂಖ್ಯೆಯ ಬಡವರಿಗೆ ಬಿಪಿಎಲ್ ಕಾರ್ಡ್ ನಿರಾಕರಿಸಲಾಯಿತು. ಒಂದಷ್ಟು ಉಳ್ಳವರೂ ಬಡವರ ಕಾರ್ಡ್ ಪಡೆದುಕೊಂಡರು. ಬಡ ಮತ್ತು ಮಧ್ಯಮವರ್ಗದ ಮತದಾರ ಬಂಧುಗಳು ಇದರ ಸುತ್ತ ಪ್ರತಿಭಟನೆಗಳನ್ನು ನಡೆಸಿದರು. ಹೀಗಾಗಿ ಚುನಾವಣೆಗಳಲ್ಲೂ ರೇಷನ್ ಕಾರ್ಡ್ ಒಂದು ಪ್ರಮುಖ ಆಶ್ವಾಸನೆಯಾಯಿತು. 2008ರ ವಿಧಾನಸಭಾ ಚುನಾವಣೆಗೂ ಮುನ್ನ ರಾಜ್ಯಾದ್ಯಂತ ಸಾವಿರಾರು ಪ್ರತಿಭಟನೆಗಳು ಪಡಿತರ ಚೀಟಿಗೆ ಮತ್ತು ಹೆಚ್ಚಿನ ಪಡಿತರಕ್ಕೆ ಆಗ್ರಹಿಸಿ ನಡೆದವು. ಎಲ್ಲಾ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳಲ್ಲೂ ಇದರ ಬಗ್ಗೆ ಭರವಸೆಗಳು ಹರಿದವು. ಆದರೆ ವಿಶ್ವಬ್ಯಾಂಕ್‌ನ ಆದೇಶ ಪಡಿತರ ಚೀಟಿಗಳನ್ನು ಮತ್ತಷ್ಟು ಕಡಿತ ಮಾಡುವ, ಪ್ರತೀ ಚೀಟಿಗೂ ಮತ್ತಷ್ಟು ಪಡಿತರವನ್ನು ಕಡಿತ ಮಾಡಬೇಕೆಂಬ ಕಡೆಗೆ ಇತ್ತು.

ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂತು. ಜನರು ಇನ್ನೂ ಹೆಚ್ಚು ಕೇಳುತ್ತಿದ್ದ ಸಂದರ್ಭದಲ್ಲಿ, ಜಾಗತೀಕರಣ ನೀತಿಗಳನ್ನು ಅನುಷ್ಠಾನ ಮಾಡುವ ಬಗ್ಗೆ ಪರಮನಿಷ್ಠೆ ಹೊಂದಿರುವ ಸರ್ಕಾರ ಇನ್ನೂ ಕಡಿಮೆ ಮಾಡಬೇಕೆಂದಿತ್ತು. ಅಷ್ಟರಲ್ಲಿ ಲೋಕಸಭಾ ಚುನಾವಣೆಯೂ ಬಂತು. ಚುನಾವಣಾ ಸಂದರ್ಭದಲ್ಲಾದರೂ ಜನರಿಗೆ ನಿಷ್ಠೆ ತೋರಬೇಡವೇ? ಆದಷ್ಟು ಬೇಗ ಎಲ್ಲರಿಗೂ ಕಾರ್ಡ್‌ಗಳನ್ನು ನೀಡಬೇಕು. ಹೀಗಾಗಿ ಬಿಜೆಪಿ ಸರ್ಕಾರ ಒಂದು ಹುನ್ನಾರ ಮಾಡಿತು. 'ನೆಮ್ಮದಿ ಕೇಂದ್ರ'ಗಳನ್ನು ತೆರೆದು ಅರ್ಜಿ ಕೊಟ್ಟವರಿಗೆಲ್ಲಾ ಕೇಳಿದ ತಾತ್ಕಾಲಿಕ ಕಾರ್ಡ್‌ಅನ್ನು ನೀಡಿತು. ಯಾವ ಮಾನದಂಡಗಳನ್ನೂ ನೋಡಲಿಲ್ಲ. ಜೊತೆಗೆ ಒಂದು ಬಾಂಡ್ ಬರೆಸಿಕೊಂಡರು. 'ನಮ್ಮ ಕುಟುಂಬವು ಸರ್ಕಾರದ ಮಾನದಂಡಗಳ ಪ್ರಕಾರ ಬಿಪಿಎಲ್ ಕಾರ್ಡ್‌ಗೆ ಅರ್ಹ. ಹಾಗಾಗಿ ಕಾರ್ಡ್ ನೀಡಿ. ಒಂದು ವೇಳೆ ಇದು ಸುಳ್ಳೆಂದು ಕಂಡುಬಂದರೆ ನನ್ನ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬಹುದು'. ಈಗಾಗಲೇ ಬಿಪಿಎಲ್ ಕಾರ್ಡ್ ಪಡೆದುಕೊಂಡಿರುವ ಇತರರೊಡನೆ ಹೋಲಿಸಿ ಜನರು ತಮ್ಮ ಮಾನದಂಡಗಳನ್ನು ನಿರ್ಧರಿಸಿದ್ದರು. ಆದರೆ ಸರ್ಕಾರದ ಮಾನದಂಡಗಳ ಪ್ರಕಾರ ಈ ಹಿಂದೆ ಕಾರ್ಡ್ ಪಡೆದುಕೊಂಡಿದ್ದವರಿಂದಲೂ ಕಿತ್ತುಕೊಳ್ಳಬೇಕು. ಚುನಾವಣೆಯ ಸಂದರ್ಭದಲ್ಲಿ ಪ್ರಜೆಗಳೇ ಪ್ರಭುಗಳು ಮತ್ತು ಭಾರತದ ಸಂವಿಧಾನದ ಪ್ರಕಾರ ಆಗ ಈ ದೇಶದಲ್ಲಿ ಪ್ರಜಾಪ್ರಭುತ್ವ ಜಾರಿಯಲ್ಲಿರುತ್ತದೆ. ಹಾಗಾಗಿ ಪ್ರಜೆಗಳ ಮಾನದಂಡದ ಪ್ರಕಾರವೇ ಲಕ್ಷಾಂತರ ಕಾರ್ಡ್‌ಗಳ ವಿತರಣೆಯಾಯಿತು.

ಚುನಾವಣೆ ಮುಗಿಯಿತು. ಆಂಧ್ರದ ರಾಜಶೇಖರ ರೆಡ್ಡಿ ಇಲ್ಲಿನ ಯಡಿಯೂರಪ್ಪನವರು ಇಬ್ಬರೂ ಸೇಫಾದರು. ಮಾನದಂಡ ನಿಗದಿಪಡಿಸುವಲ್ಲಿ ಎರಡು ಪಕ್ಷಗಳಿಗೂ ಯಾವ ವ್ಯತ್ಯಾಸವೂ ಇರಲಿಲ್ಲ. ಈ ಪಕ್ಷಗಳ ಪ್ರಕಾರ ಚುನಾವಣೆಯ ನಂತರ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿರುವುದಿಲ್ಲ. ಹಾಗಾಗಿ ಕಾರ್ಡ್ ಕಿತ್ತುಕೊಳ್ಳುವ ಕೆಲಸ ಆರಂಭವಾಯಿತು. ಯುಪಿಎ ಚುನಾವಣೆಯ ಸಂದರ್ಭದಲ್ಲಿ ಘೋಷಿಸಿದ 3 ರೂ. ದರದಲ್ಲಿ 30 ಕೆ.ಜಿ ಅಕ್ಕಿ ಅಥವಾ ಗೋಧಿಯೂ ಸಹ ಹಳೇ ಕಾರ್ಡ್‌ಗಳಿಗೆ ಮಾತ್ರವೆಂದು ತೀರ್ಮಾನವಾಯಿತು.


ಕರ್ನಾಟಕದಲ್ಲಿ ಚುನಾವಣೆಯ ಭರಾಟೆಯಲ್ಲಿ ವಿತರಿಸಿದ ಕಾರ್ಡ್‌ಗಳೂ ಸೇರಿದರೆ ಒಟ್ಟು 1.06 ಕೋಟಿ ಪಡಿತರ ಚೀಟಿ ವಿತರಿಸಲಾಗಿತ್ತು, ಇದರಲ್ಲಿ ಕನಿಷ್ಠವೆಂದರೂ 30 ಲಕ್ಷ ಕಾರ್ಡ್ ಕಿತ್ತು ಹಾಕಲು ಸೂಚಿಸಲಾಯಿತು. ಆಂಧ್ರದಲ್ಲೂ ಇದೇ ಆಯಿತು. ತಾತ್ಕಾಲಿಕ ಕಾರ್ಡ್‌ನ ಜೊತೆ ನೀಡಿದ ಬಾಂಡ್‌ನ ಅರಿವಾಗಿ ಸರ್ಕಾರಿ ನೌಕರರು ಕ್ರಿಮಿನಲ್ ಕೇಸಿಗೆ ಹೆದರಿ ಕಾರ್ಡ್ ವಾಪಸ್ ಮಾಡಿದರು. ಉಳಿದವರಲ್ಲಿ ನಿಜವಾಗಿಯೂ ಬಡವರಾದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಆದರೆ, ಅವರೆಲ್ಲರನ್ನೂ ಅಕ್ರಮ ಕಾರ್ಡ್‌ದಾರರ ಪಟ್ಟಿಯಲ್ಲಿ ಸೇರಿಸಲಾಯಿತು.




ಅಲ್ಲಿಂದ ಮುಂದೆ ಆಂಧ್ರದಲ್ಲಿ ವೈಎಸ್‌ಆರ್ ತೀರಿಕೊಂಡರು. ಅಲ್ಲಿಂದ ಮುಂದಿನ ಅವಧಿಗೆ ಇಬ್ಬರು ಮುಖ್ಯಮಂತ್ರಿಗಳು ಮತ್ತು ತೆಲಂಗಾಣ ಹೋರಾಟದ ಕಾರಣಕ್ಕೆ ರಾಜಕೀಯ ಅಸ್ಥಿರತೆ ತಲೆದೋರಿತು. ಇಲ್ಲಿ ಯಡಿಯೂರಪ್ಪನವರ ಕಥೆಯೂ ಹಾಗೇ ಆಯಿತು. ಇಬ್ಬರು ಸಿಎಂಗಳು ಮತ್ತು ಅಸ್ಥಿರತೆ. ಹೀಗಾಗಿ ಈ ರಾಜ್ಯಗಳ ಬಹುಸಂಖ್ಯಾತರನ್ನು ಅಕ್ರಮ ಮಾಡುವ ಕೆಲಸ ಯಶಸ್ವಿಯಾಗಲಿಲ್ಲ.

ಕೇಂದ್ರದ ಯುಪಿಎ ಸರ್ಕಾರವೂ ಈ ಅವಧಿಯಲ್ಲಿ ಇಕ್ಕಟ್ಟಿಗೆ ಸಿಕ್ಕಿಕೊಂಡಿತ್ತು, ಮುಂದಿನ ಚುನಾವಣೆಯಲ್ಲಿ ಗೆಲ್ಲುವ ಸಾಧ್ಯತೆ ಕ್ಷೀಣಿಸುತ್ತಿದೆ ಎಂದು ಗೊತ್ತಾಗಿತ್ತು. ಕಾಂಗ್ರೆಸ್‌ನೊಳಗಿನ ಕಾರಣಗಳಿಂದಲೂ 'ಜನಪರ'ವಾದ ಕಾಯ್ದೆ ಹಾಗೂ ಯೋಜನೆಗಳನ್ನು ತರುವ ಅನಿವಾರ್ಯತೆ ಉಂಟಾಗಿತ್ತು. 'ಆಹಾರ ಭದ್ರತೆ ಕಾಯ್ದೆ' ಜಾರಿಗೆ ಬಂದಿತು. ಇದಕ್ಕಿಂತ ಮುಂಚೆಯೇ ಕರ್ನಾಟಕದಲ್ಲಿ ಸಿದ್ದರಾಮಯ್ಯನವರ ಸರ್ಕಾರವು 'ಅನ್ನಭಾಗ್ಯ' ಯೋಜನೆಯನ್ನು ತಂದಿತ್ತು. ಅದರ ಉದ್ಘಾಟನೆಯ ಸಂದರ್ಭದಲ್ಲಿ ಸಿದ್ದರಾಮಯ್ಯನವರು ಒಂದು ಮಾತನ್ನು ಹೇಳಿದ್ದರು. ಅದನ್ನೇ ಆಹಾರ ಸಚಿವ ದಿನೇಶ್ ಗುಂಡೂರಾವ್ ಅವರೂ ಪುನರುಚ್ಚರಿಸಿದ್ದರು. ಅದು ಈ ಸಂದರ್ಭದಲ್ಲಿ ಒಂದು ನಾಗರಿಕ ಸರ್ಕಾರ ಅನುಸರಿಸ ಬೇಕಾಗಿದ್ದ ನೀತಿಗೆ ತಕ್ಕುದಾಗಿತ್ತು. 'ಒಂದು ವೇಳೆ ಕೆಲವು ಅನರ್ಹರಿಗೆ ಈ ಯೋಜನೆಯನ್ವಯ ಕಾರ್ಡು ಸಿಕ್ಕಿದರೂ ಪರವಾಗಿಲ್ಲ, ಆದರೆ, ಒಬ್ಬರೇ ಒಬ್ಬರು ಅರ್ಹರೂ ಇದರಿಂದ ಹೊರಗುಳಿಯಬಾರದು. ಕೆಲವರು ಹೆಚ್ಚು ಅಕ್ಕಿ ಪಡೆದು ಕೊಂಡು ಹೊಟ್ಟೆ ತುಂಬಾ ಉಂಡರೆ ಅಂತಹ ಸಮಸ್ಯೆಯೇನೂ ಆಗುವುದಿಲ್ಲ'. ವಾಸ್ತವದಲ್ಲಿ ಇದಕ್ಕಿಂತ ಬೇರೆ ರೀತಿಯಲ್ಲಿ ಪಡಿತರ ವ್ಯವಸ್ಥೆಯನ್ನು ನಡೆಸು[...] ಅತ್ಯುತ್ತಮ ವಿಧಾನ ಇಲ್ಲ.








ಏಕೆಂದರೆ, ಇಂದು ಸೋರಿಕೆ ಅತ್ಯಂತ ಕಡಿಮೆಯ[...] ಗಿರುವ ರಾಜ್ಯಗಳು ಯಾವುವೆಂದರೆ, ಎಲ್ಲಿ ಸಾರ್ವತ್ರಿ[...] ಪಡಿತರ ವಿತರಕ ವ್ಯವಸ್ಥೆ ಜಾರಿಯಲ್ಲಿದೆಯೋ ಅಲ್ಲಿ ಮಾ[...] ಕರ್ನಾಟಕದ್ದೇ ಉದಾಹರಣೆ ನೋಡುವುದಾದಲ್ಲಿ, ಇಂದ[...] ಕನಿಷ್ಠ ಬೆಂಬಲ ಬೆಲೆಯಡಿ ಸರ್ಕಾರವು ಆಹಾರ ಧಾನ್ಯಗಳ[...] ಖರೀದಿ ಮಾಡುತ್ತಿದೆ ಮತ್ತು ಅದನ್ನು ಅನ್ನಭಾ[...] ಯೋಜನೆಯಡಿ ವಿತರಣೆಯೂ ಮಾಡುತ್ತಿದೆ. [...] ವ್ಯವಹಾರದಲ್ಲಿ ಕೆಳಗಿನಿಂದ ಮೇಲಕ್ಕೆ ನಡೆಯುತ್ತಿರು[...] ಅಕ್ರಮದ ಪ್ರಮಾಣವು, 'ಅಕ್ರಮ' ಪಡಿತರ ಚೀ[...] ಹೊಂದಿರುವವರು ಮಾಡುತ್ತಿರುವ ಅಕ್ರಮಕ್ಕಿಂತ ಸಾಕಷ[...] ಹೆಚ್ಚಾಗಿದೆ. ಹೀಗಿದ್ದರೂ, ಅನ್ನಭಾಗ್ಯ ಯೋಜನೆ ಜಾರಿಯಾ[...] ಕೆಲವು ತಿಂಗಳುಗಳ ನಂತರ ನಿಧಾನವಾಗಿ ಆದ[...] ವ್ಯವಸ್ಥಿತವಾಗಿ 'ಅಕ್ರಮ' ಪಡಿತರ ಚೀಟಿಗಳನ್ನು ಕಿ[...] ಹಾಕುವ ಕೆಲಸಕ್ಕೆ ಚಾಲನೆ ನೀಡಲಾಯಿತು. ಆ ಮೂಲ[...] ಯಡಿಯೂರಪ್ಪನವರು ಯಾವುದನ್ನು ಹೇಳಿ 'ಸಾಧ[...] ಮಾಡಲಾಗಿರಲಿಲ್ಲವೋ ಅದನ್ನು ಸಾಧನೆ ಮಾಡಲಾಯಿತ[...]

ಇದಕ್ಕಾಗಿ ವಿದ್ಯುತ್ ಮೀಟರ್ ಬಿಲ್, ಫೋನ್ ನಂಬರ್, ಬಯೋಮೆಟ್ರಿಕ್, ಫೋಟೋಗಳು ಇತ್ಯಾ[...] ಗಳನ್ನೆಲ್ಲಾ ಬಳಸಿಕೊಳ್ಳಲಾಯಿತು. ಮುಂದಕ್ಕೆ ಬಹು[...] ಆಧಾರ್ ಕಾರ್ಡನ್ನೂ ಸಹ ಇದಕ್ಕೆ ಜೋಡಿಸಲಾಗುತ್ತ[...] ಆ ರೀತಿ ಮಾಡಿದರೆ ತೊಂದರೆ ಏನು ಎಂಬ ಪ್ರ[...] ಬರಬಹುದು. ಅರ್ಹರಿಗೆ (ಎಲ್ಲಾ ಅರ್ಹರನ್[...] ಒಳಗೊಂಡಾಗ) ಪಡಿತರ ಸಿಗುವಂತಾದರೆ, ಅದನ[...] ವ್ಯವಸ್ಥಿತಗೊಳಿಸಿಕೊಳ್ಳಲು ತಂತ್ರಜ್ಞಾನವನ್ನು ಬಳಸಿಕೊಂಡ[...] ಏನು ತಪ್ಪು ಎಂಬುದು ಈ ಪ್ರಶ್ನೆಯ ಹಿಂದಿನ ಉದ್ದೇ[...] ನಮ್ಮ ಸರ್ಕಾರಗಳ ನೀತಿಯೇ ಹೆಚ್ಚೆಚ್ಚು ಸಂಪತ[...] ಶ್ರೀಮಂತರ ಕಡೆಗೆ ಹರಿದು, ಜನಕಲ್ಯಾಣ ಕಾಯ[...] ಕ್ರಮಗಳಿಗೆ ಅನುದಾನ ಕಡಿಮೆ ಮಾಡುವುದಾಗಿ[...] ಹೀಗಿರುವಾಗ ಇಂತಹ ತಂತ್ರಜ್ಞಾನ ಮತ್ತು ವ್ಯವಸ್ಥೆಯಿರುವಾ[...] ಒಂದೇ ಏಟಿನಲ್ಲಿ ಲಕ್ಷಾಂತರ ಕುಟುಂಬಗಳನ್ನು ಯೋಜ[...] ಯಿಂದ ಹೊರಗಿಡಲು ಸಾಧ್ಯ, ಅದನ್ನು ಮಾಡಿಬಿಡಬಹುದ[...] ಎಂಬುದು ಕೇವಲ ಊಹೆಯಲ್ಲ. ಇದುವರೆಗಿ[...] ಬೆಳವಣಿಗೆಗಳಿಂದ ಅದು ಸ್ಪಷ್ಟವಾಗಿದೆ.

ಕಾನೂನುಗಳು ಹೆಚ್ಚಾದಂತೆಲ್ಲಾ ಹೆಚ್ಚೆಚ್ಚು ಜನರನ್[...] ಅಪರಾಧಿಗಳನ್ನಾಗಿ ಮಾಡಲಾಗುತ್ತದೆ ಎಂಬುದು ಎಷ[...] ನಿಜವೋ, ತಂತ್ರಜ್ಞಾನವು ಹೆಚ್ಚೆಚ್ಚು ಬಳಕೆಯಾದಂತೆಲ[...] ಸರ್ಕಾರವು ಜನರನ್ನು 'ಅಧಿಕೃತವಾಗಿ' ಹಕ್ಕುಗಳಿಂದ[...] ವಂಚಿತರನ್ನಾಗಿ ಮಾಡಲು ಸಾಧ್ಯ ಎಂಬುದೂ ನಿಜ. ಅ[...] ಹೆಚ್ಚೆಚ್ಚು ಜನರನ್ನು ಅಮಾನ್ಯರೂ, ಅಕ್ರಮ ಫಲಾನುಭವಿಗಳ[...] ಆಗಿ ಮಾಡುವುದೂ ಸುಲಭ. ಎಲ್ಲಾ ಬಡವರಿಗೆ ಅ[...] ನೀಡುವ ಜವಾಬ್ದಾರಿಯಿಂದ ನುಣುಚಿಕೊಳ್ಳಲು, ಬಡತನ[...] ಮಾನದಂಡವನ್ನೇ ಬದಲಾಯಿಸಿದ ರಾಜಕೀಯ ಪಕ್ಷಗಳದ[...] ಅಕ್ರಮವಲ್ಲವೇ, ಚುನಾವಣೆಗೆ ಮುಂಚೆ ಓಟಗಾಗಿ ಏನನ್[...] ಕೇಳದೆ ಲಕ್ಷಾಂತರ ಕಾರ್ಡ್ ವಿತರಿಸಿದ ಸರ್ಕಾರಗಳ[...] ಮಾಡಿದ್ದು ಅಕ್ರಮವಲ್ಲವೇ ಎಂಬ ಪ್ರಶ್ನೆಗಳು ಬರುತ್ತ[...] ಅದಕ್ಕೆ ಪರ್ಯಾಯ ಮಾರ್ಗವನ್ನು ತಂತ್ರಜ್ಞಾನದ[...] ಮುಖಾಂತರ ಕಂಡುಕೊಳ್ಳುವುದು ಅವರಿಗೆ ಸಾಧ್ಯವಾಗುತ್ತ[...] ಅಧಿಕಾರಸ್ಥರ ನೀತಿಗಳು ಮಾತ್ರ ಅಕ್ರಮ; ಆದರೆ ತಂತ್ರಜ್ಞಾ[...] ಸಕ್ರಮ ಎಂದಾಗುವುದು ಈ ಕಾಲದ ಒಂದು ಹೊ[...] ಹುನ್ನಾರವಾಗಿ ಬಳಕೆಯಾಗಲಿದೆ ಎಂಬುದು ಇದರರ್ಥ[...] ಇಂದು ದಕ್ಷರೂ, ಪ್ರಾಮಾಣಿಕರೂ ಆದ ಅಧಿಕಾರಿಗಳ[...] ಎಂದು ಯಾರನ್ನೆಲ್ಲಾ ಕರೆಯಲಾಗುತ್ತದೆ ಅಂಥವರು ಇಂತಹ[...] ತಂತ್ರಜ್ಞಾನದ ಬಳಕೆಯಲ್ಲೂ ಚುರುಕಾಗಿದ್ದಾರೆ. ಸರ್ಕಾರದ[...] ನೀತಿಗಳೇ ಜನವಿರೋಧಿಯಾಗಿದ್ದಾಗ 'ದಕ್ಷತೆ, ಪ್ರಾಮಾಣಿಕತೆ ಮತ್ತು ತಂತ್ರಜ್ಞಾನವು' ಅಪಾಯಕಾರಿಯಾಗಬಲ್ಲದು.

ಜಾಗತೀಕರಣ ಯುಗದಲ್ಲಿ ಬಡವರಿಗೆ ಅನ್ನ ಸಿಗಬೇಕು ಎಂಬ ಜನಪ್ರತಿನಿಧಿಗಳ ಕಾಳಜಿಯು ವಾಸ್ತವಕ್ಕೆ ಇಳಿಯದೆ ಹೋಗಲು ಇದು ಕಾರಣವಾಗಬಲ್ಲುದು. ಕಾರಣವಾಗಿದೆ

ಮೋದಿ ಮತ್ತು ಉಗ್ರರ ಅಟ್ಟಹಾಸ



ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಪ್ರಧಾನಿ ನರೇಂದ್ರ ಮೋದಿಗೆ ಭಾರತದ ಮುಸಲ್ಮಾನರನ್ನು ಕಂಡರಾಗದಿದ್ದರೂ ಮುಸಲ್ಮಾನ ದೇಶವಾದ ಪಾಕಿಸ್ತಾನದ ಜೊತೆಗಿನ ಸಂಬಂಧವನ್ನು ಸುಧಾರಿಸಲು ಮುಂದಾದದ್ದು ಆತನ ಟೀಕಾಕಾರರನ್ನು ಮಾತ್ರವಲ್ಲ, ಅವನದೇ ಚೆಡ್ಡಿ ಬಳಗಕ್ಕೂ ಅಚ್ಚರಿಯನ್ನುಂಟು ಮಾಡಿರಲಿಕ್ಕೂ ಸಾಕು. ಆದರೆ ಎರಡು ದೇಶಗಳ ನಡುವಿನ ಸಂಬಂಧ ವೃದ್ಧಿಸುವುದು ಒಂದು ದೇಶದ ಪ್ರಧಾನಿ ಇದ್ದಕ್ಕಿದ್ದಂತೆ ಇನ್ನೊಂದು ದೇಶಕ್ಕೆ ಭೇಟಿ ಕೊಟ್ಟು ಅಲ್ಲಿನ ಪ್ರಧಾನಿಗೆ 'ಹ್ಯಾಪಿ ಬರ್ತ್‌ಡೇ' ಎಂದು ಹೇಳುವ ಮೂಲಕ ಅಲ್ಲ, ಬದಲಾಗಿ ಅದರ ಹಿಂದೆ ಹಲವಾರು ಸುತ್ತಿನ ಮಾತುಕತೆಗಳು ನಡೆಯುತ್ತವೆ; ಒಪ್ಪಂದಗಳು, ಷರತ್ತುಗಳು ಚರ್ಚೆ ಆಗಿರುತ್ತವೆ; ಸೂಕ್ತವಾದ ಎಚ್ಚರ ಮತ್ತು ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತದೆ. ಅದ್ಯಾವುದನ್ನೂ ಮಾಡದೆ ಕೇವಲ ಶೋಕಿಗಾಗಿ, ಫೋಟೋಗಾಗಿ, ಪ್ರಚಾರಕ್ಕಾಗಿ ಓಡೋಡಿ ಹೋಗಿ ಅಲ್ಲಿನ ಪ್ರಧಾನಿಯನ್ನು ಅಪ್ಪಿಕೊಂಡು, ಕೈಕೈ ಹಿಡಿದು ನಗೆ ಬೀರಿದರೆ ಎಂತಹ ಅನಾಹುತ ಸಂಭವಿಸಿತ್ತೋ ಅಂಥದ್ದೇ ಅನಾಹುತ ಈಗ ಆಗಿದೆ.

ಹೋಗಲಿ, ಡಿಸೆಂಬರ್ 25ರಂದು ನಿಜವಾಗಲೂ ಮೋದಿಗೆ ಪಾಕಿಸ್ತಾನದ ಪ್ರಧಾನಿ ನವಾಜ್ ಶರೀಫರಿಗೆ ಹುಟ್ಟುಹಬ್ಬದ ಶುಭಾಶಯವನ್ನು ಹೇಳಬೇಕು ಎಂದು ಅನ್ನಿಸಿತು ಎಂದೇ ಇಟ್ಟುಕೊಳ್ಳೋಣ. ಜೊತೆಗೆ ಹಾಗೆ ಮಾಡುವ ಮೂಲಕ ಉಭಯ ದೇಶಗಳ ನಡುವೆ ಶಾಂತಿ ಮತ್ತು ಸಹಬಾಳ್ವೆ ಸಾಧ್ಯ ಎಂದು ಮೋದಿಗೆ ಪ್ರಾಮಾಣಿಕವಾಗಿಯೇ ಅನ್ನಿಸಿತ್ತು ಅಂತಲೂ ಇಟ್ಟುಕೊಳ್ಳೋಣ. ಆದರೆ ಅಂತಹ ಒಂದು ಹೆಜ್ಜೆ ಕಿಡಿಗೇಡಿಗಳಿಗೆ ಎಂತಹ ಸಂದೇಶ ರವಾನಿಸುತ್ತದೆ? ಅವರು ಅದಕ್ಕೆ ಹೇಗೆ ಪ್ರತಿಕ್ರಿಯಿಸುತ್ತಾರೆ? ಎಂಬೆಲ್ಲ ಅರಿವು ಮತ್ತು ಲೆಕ್ಕಾಚಾರಗಳು ಅವರ ಸಲಹೆಗಾರರಿಗೆ ಗೊತ್ತಿರಬೇಕಲ್ಲವೆ? ಆದರೂ ಅವರೆಲ್ಲ ಎಡವಿದ್ದು ಎಲ್ಲಿ?

ಇದನ್ನೆಲ್ಲ ಯಾಕೆ ಹೇಳುತ್ತಿದ್ದೇನೆಂದರೆ ಈ ಹಿಂದೆ ಇದೇ ತರಹ ವಾಜಪೇಯಿ ಕೂಡ ಪಾಕಿಸ್ತಾನದೊಂದಿಗಿನ ಸಂಬಂಧವನ್ನು ಸುಧಾರಿಸಲು ಬಸ್ ಒಂದರಲ್ಲಿ ಲಾಹೋರಿಗೆ ಹೋಗಿದ್ದರು. ಆಗಲೂ ಪಾಕಿಸ್ತಾನದ ಪ್ರಧಾನಿ ಆಗಿದ್ದ ಶರೀಫರು ವಾಜಪೇಯಿ ಅವರನ್ನು ಪ್ರೀತಿಯಿಂದಲೇ ಸ್ವಾಗತಿಸಿದ್ದರು. ಅದಾದನಂತರ ಪಾಕ್-ಭಾರತದ ನಡುವೆ ಸಂಜೋತಾ ರೈಲಿಗೆ ಚಾಲನೆಯನ್ನೂ ನೀಡಲಾಗಿತ್ತು.

ಇದಕ್ಕೆಲ್ಲ ಪಾಕಿಸ್ತಾನದ ಮತ್ತು ಭಾರತದ ಉಗ್ರರು ಹೇಗೆ ಪ್ರತಿಕ್ರಿಯಿಸಿದ್ದರು? ಅತ್ತ ಪಾಕಿಸ್ತಾನದಲ್ಲಿ ಪ್ರಜಾಸತ್ತಾತ್ಮಕ ಸರ್ಕಾರಕ್ಕಿಂತಲೂ ಪ್ರಭಾವಿ ಆಗಿರುವ ಪಾಕ್ ಸೈನ್ಯ ಕಾರ್ಗಿಲ್ ಮೇಲೆ ದಾಳಿ ಮಾಡಿತ್ತು, ಇತ್ತ ಬಿಜೆಪಿಗಿಂತಲೂ ಪ್ರಭಾವಿ ಆಗಿರುವ ಆರೆಸ್ಸೆಸ್‌ನ ಕೇಸರಿ ಭಯೋತ್ಪಾದಕರು ಸಂಜೋತಾ ರೈಲಿನಲ್ಲಿ ಬಾಂಬ್‌ಗಳನ್ನು ಸ್ಫೋಟಿಸಿ ನೂರಾರು ಜನರ ಸಾವಿಗೆ ಕಾರಣರಾಗಿದ್ದರು. ಯಾಕೆಂದರೆ ಪಾಕಿಸ್ತಾನ ಮತ್ತು ಭಾರತ ಎರಡೂ ಕಡೆ ಇರುವ ಉಗ್ರರಿಗೆ ಎಂದೂ ಈ ಉಭಯ ದೇಶಗಳ ನಡುವೆ ಶಾಂತಿ ನೆಲೆಸುವುದು ಬೇಕಿಲ್ಲ, ಯಾಕೆಂದರೆ ಎರಡೂ ಕಡೆ ಶಾಂತಿ ಇದ್ದರೆ ಅವರ ಬೇಳೆ ಬೇಯುವುದಿಲ್ಲ.

ಮೋದಿ ಪಾಕಿಸ್ತಾನಕ್ಕೆ ಹೋಗಿ ಒಂದು ವಾರವಾಗುತ್ತಿದ್ದಂತೆ ಪಾಕಿಸ್ತಾನದ ಉಗ್ರರು ಭಾರತದ ಪ್ರಮುಖ ವಾಯುನೆಲೆ ಪಠಾಣ್‌ಕೋಟ್ ಮೇಲೆ ದಾಳಿ ಮಾಡಿದ್ದಾರೆ. ಈಗ ತಜ್ಞರು ಹೇಳುತ್ತಿರುವಂತೆ ಈ ದಾಳಿ ಇದ್ದಕ್ಕಿದ್ದಂತೆ ಆಗಿರುವಂತದ್ದಲ್ಲ. ಸತತ 80 ಗಂಟೆಗಳ ಕಾಲ ಭಾರತದ ಸೇನೆಯನ್ನು ದಿಕ್ಕೆಡಿಸಿದ ಈ ದಾಳಿಗೆ ಏನಿಲ್ಲವೆಂದರೂ ವಾರಗಟ್ಟಲೆ ತಯಾರಿ ನಡೆಸಲಾಗಿದೆ. ಆದರ ಅರ್ಥ ಯಾವಾಗ ಮೋದಿ ಪಾಕಿಸ್ತಾನದಲ್ಲಿ ನವಾಜ್ ಶರೀಫರ ಕೈ ಹಿಡಿದು ಹಲ್ಲು ಕಿಸಿಯುತ್ತಿದ್ದನೋ ಆಗಲೇ ಈ ದಾಳಿಗೆ ಸಿದ್ಧತೆಗಳು ನಡೆಯುತ್ತಿದ್ದವು. ಅಷ್ಟೇ ಮುಖ್ಯವಾದ ಇನ್ನೊಂದು ಸಂಗತಿ ಯಾವುದೆಂದರೆ ಈ ದಾಳಿಯಲ್ಲಿ ಭಾಗಿ ಆದವರು ಯಾವುದೋ ಉಗ್ರ ಸಂಘಟನೆಯ ಸದಸ್ಯರು ಮಾತ್ರವಲ್ಲ; ಅವರಿಗೆ ಸೇನಾ ತರಬೇತಿ ಇದ್ದುದ್ದರಿಂದಲೇ ಅವರು ಹಲವು ದಿನಗಳ ಕಾಲ ಪಠಾಣ್‌ಕೋಟ್ ವಾಯುನೆಲೆಯನ್ನು ಯುದ್ಧಭೂಮಿಯಾಗಿ ಪರಿವರ್ತಿಸಲು ಸಾಧ್ಯವಾಗಿದ್ದು.

ಸದಾ ದೇಶ ರಕ್ಷಣೆ, ದೇಶ ಪ್ರೇಮ ಎಂದೆಲ್ಲ ಬೊಗಳುವ ಮೋದಿ ಮತ್ತಾತನ ತಂಡವು ಈ ದಾಳಿಗೆ ಹೇಗೆ ಪ್ರತಿಕ್ರಿಯಿಸಿತು ಎಂದು ನೋಡಿದರೆ ಅಚ್ಚರಿ ಆಗುತ್ತದೆ. ಮೋದಿಗೆ ಆಪ್ತನೂ, ಮಂತ್ರಿಮಂಡಲಕ್ಕಿಂತ ಪ್ರಮುಖನೂ, ರಾಷ್ಟ್ರೀಯ ಭದ್ರತಾ ಸಲಹೆಗಾರನೂ ಆಗಿರುವವನು ಅಜಿತ್ ದೋವಲ್ ಎಂಬ ಚೆಡ್ಡಿವಾಲಾ ಹೇಳುವಂತೆ ಆತ ಏಳು ವರ್ಷಗಳ ಕಾಲ ಪಾಕಿಸ್ತಾನದಲ್ಲಿ ಯಾರಿಗೂ ಪತ್ತೆಯಾಗದಂತೆ ಅಜ್ಞಾತವಾಸದಲ್ಲಿದ್ದನಂತೆ. ಆಮೇಲೆ ಗೋಲ್ಡನ್ ಟೆಂಪಲ್ ಮೇಲೆ ಸೈನ್ಯ ಆಪರೇಶನ್ ಬ್ಲೂಸ್ಟಾರ್ ಕೈಗೊಳ್ಳುವ ಕೆಲ ನಿಮಿಷಗಳ ಮುನ್ನ ಆತ ಆ ಪ್ರಾರ್ಥನಾ ಮಂದಿರದಿಂದ ಹೊರಬಂದನಂತೆ. ಅದಾದ ಮೇಲೆ ಈಶಾನ್ಯ ಪ್ರದೇಶದಲ್ಲಿ ಮಿಜೋ ಬಂಡಾಯ ಎದ್ದಾಗ ಈತ ಮಿಜೋ ಬಂಡಾಯಕೋರರ ಸೇನೆಗೆ ನುಸುಳಿ ಮಾಹಿತಿಯನ್ನು ಸಂಗ್ರಹಿಸಿದನಂತೆ. ಹೀಗೆ, ಮಾಧ್ಯಮಗಳಲ್ಲಿ ತಾನು ಭಾರತದ ಜೇಮ್ಸ್ ಬಾಂಡ್ ಎಂಬಂತೆ ಪೋಸು ಕೊಡುವ ದೋವಲ್ ಪಠಾಣ್‌ಕೋಟ್ ಮೇಲಿನ ದಾಳಿಯನ್ನು ನಿಗ್ರಹಿಸುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದ್ದಾನೆ. ಅಂದಹಾಗೆ, ನಿವೃತ್ತ ಐಪಿಎಸ್ ಅಧಿಕಾರಿ ಆಗಿರುವ ದೋವಲ್ ಹಿಂದಿನಿಂದಲೂ ತನ್ನ 'ಹೀರೋಗಿರಿ' ಬಗ್ಗೆ ಮಾಧ್ಯಮಗಳಿಗೆ ರೋಚಕ ಕತೆಗಳನ್ನು ಬಿತ್ತುತ್ತಾ ಬಂದಿರುವ ವ್ಯಕ್ತಿ. ಉಗ್ರರು ಸದ್ಯದಲ್ಲೇ ಭಾರತದ ಮೇಲೆ ದಾಳಿ ಮಾಡಲಿದ್ದಾರೆಂದೂ, ಅದೂ ನಿರ್ದಿಷ್ಟವಾಗಿ ಪಠಾಣ್‌ಕೋಟ್ ವಾಯುನೆಲೆಯನ್ನು ಗುರಿಯಾಗಿಟ್ಟುಕೊಂಡಿದ್ದಾರೆಂದೂ ಮುಂಚಿತವಾಗಿಯೇ ಗೊತ್ತಾಗಿದ್ದರೂ ಈ ಚೆಡ್ಡಿ ಬಾಂಡ್ ಏನನ್ನೂ ಮಾಡಲಿಲ್ಲ. ಉಗ್ರರು ಪಂಜಾಬ್ ರಾಜ್ಯವನ್ನು ಪ್ರವೇಶಿಸಿ ಹಲವಾರು ಗಂಟೆಗಳು ಉರುಳಿದ ನಂತರವೂ ಈ ರಾಷ್ಟ್ರೀಯ ಭದ್ರತಾ ಸಲಹೆಗಾರ ಎಚ್ಚೆತ್ತುಕೊಳ್ಳಲಿಲ್ಲ. ಅಷ್ಟೇ ಅಲ್ಲ, ಕಾರ್ಯಾಚರಣೆ ಇನ್ನೂ ಮುಂದುವರಿಯುತ್ತಿದ್ದರೂ ಈತ "ಉಗ್ರರ ದಾಳಿಯನ್ನು ಯಶಸ್ವಿಯಾಗಿ ನಿಗ್ರಹಿಸಲಾಗಿದೆ" ಎಂದು ಗೃಹ ಮಂತ್ರಿಗೆ ಹೇಳಿದ. ಈತನನ್ನು ನಂಬಿ ಪತ್ರಿಕಾಹೇಳಿಕೆ ಕೊಟ್ಟ ರಾಜನಾಥ್ ಸಿಂಗ್ ಇಂಗು ತಿಂದ ಮಂಗನಂತಾದ. ಇನ್ನು ಮೋದಿ ಮಹಾಶಯ ಮಾಡಿದ್ದೇನು? ನಮ್ಮ ಯೋಧರು ಇನ್ನೂ ಹೋರಾಡುತ್ತಿದ್ದಾಗ, ಹಲವರು ತಮ್ಮ ಪ್ರಾಣಗಳನ್ನೇ ಕಳೆದುಕೊಳ್ಳುತ್ತಿದ್ದಾಗ ಮೋದಿ ಸಾಹೇಬ ಪಠಾಣ್‌ಕೋಟ್ ಮೇಲಿನ ದಾಳಿಯನ್ನು ಮರೆತು ಯೋಗ ಕುರಿತು ಟ್ವೀಟ್ ಮಾಡುತ್ತಿದ್ದ.

ಇನ್ನು ಈ ದಾಳಿಯ ಸುತ್ತ ಹಲವಾರು ಪ್ರಶ್ನೆಗಳು ಉದ್ಭವಿಸಿವೆ. ಮೊದಲನೆಯದಾಗಿ ಎಸ್‌ಪಿ ತರಹದ ಹಿರಿಯ ಅಧಿಕಾರಿಯ ವಾಹನವನ್ನು ವಶಪಡಿಸಿಕೊಂಡ ಉಗ್ರರು ಯಾಕೆ ಆತನನ್ನು ಬಿಡುಗಡೆಗೊಳಿಸಿದರು ಮತ್ತು ಉಗ್ರರು ದಾಳಿ ಮಾಡಲು ಬಂದಿದ್ದಾರೆಂದು ಎಸ್‌ಪಿ ಹೇಳಿದ ನಂತರವೂ ಯಾರೂ ಯಾಕೆ ಆತನ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ?

ಎರಡನೆಯದಾಗಿ ಸಶಸ್ತ್ರಗಳನ್ನು ಹೊಂದಿದ್ದ ಉಗ್ರರು ವಾಯುನೆಲೆಯನ್ನು ಪ್ರವೇಶಿಸಿ ಇಪ್ಪತ್ತು ಗಂಟೆಗಳಾಗಿದ್ದರೂ ಅದು ಯಾರ ಗಮನಕ್ಕೂ ಬಾರದೆ ಹೋದದ್ದು ಹೇಗೆ?


ಮೂರನೆಯದಾಗಿ, ವಾಯುನೆಲೆಯಲ್ಲಿ ನ್ಯಾಷನಲ್ ಸೆಕ್ಯೂರಿಟಿ ಗಾರ್ಡ್ ಮತ್ತು ಏರ್‌ಫೋರ್ಸಿನ ಕಮಾಂಡೋಗಳಿದ್ದರೂ ಯಾಕೆ ಡಿಫೆನ್ಸ್ ಸೆಕ್ಯೂರಿಟಿ ಕೋರ್ ಎಂಬ ನಿವೃತ್ತ ಸೇನಾ ಸಿಬ್ಬಂದಿಯನ್ನು ಉಗ್ರರ ವಿರುದ್ಧದ ಹೋರಾಟಕ್ಕೆ ಕಳುಹಿಸಲಾಯಿತು?

ಕೊನೆಯದಾಗಿ ಯಾಕೆ ಉಗ್ರರ ಶವಗಳನ್ನು ವಶಪಡಿಸಿಕೊಳ್ಳುವಾಗ ಸೂಕ್ತ ರಕ್ಷಣಾ ವ್ಯವಸ್ಥೆಗಳನ್ನು ಮಾಡಿಕೊಳ್ಳಲಿಲ್ಲ? ಎಲ್ಲರಿಗೂ ಗೊತ್ತಿರುವಂತೆ ಉಗ್ರರು ತಾವು ಮಡಿದ ನಂತರವೂ ಹೆಚ್ಚಿನ ಸಂಖ್ಯೆಯಲ್ಲಿ ಬಲಿಗಳನ್ನು ಪಡೆಯಲು ತಮ್ಮ ದೇಹಗಳಿಗೆ ಬಾಂಬ್‌ಗಳನ್ನು ಅಳವಡಿಸಿಕೊಂಡಿರುತ್ತಾರೆ. ಆ ಕಾರಣಕ್ಕೇ ಅವರ ಶವಗಳ ಮೇಲಿರುವ ಬಾಂಬ್‌ಗಳನ್ನು ನಿಷ್ಕ್ರಿಯಗೊಳಿಸಲು ಆಧುನಿಕ ತಂತ್ರಜ್ಞಾನವನ್ನು ಮತ್ತು ರೋಬೋಗಳನ್ನು ಉಪಯೋಗಿಸಲಾಗುತ್ತದೆ. ಆದರೆ ಲೆಫ್ಟಿನೆಂಟ್ ಕರ್ನಲ್ ನಿರಂಜನ್ ಅವರ ನೇತೃತ್ವದ ಬಾಂಬ್ ನಿಷ್ಕ್ರಿಯ ದಳದೊಂದಿಗೆ ಅಂತಹ ತಂತ್ರಜ್ಞಾನವನ್ನು ಯಾಕೆ ಕಳುಹಿಸಲಿಲ್ಲ? ಅಂತಹ ತಂತ್ರಜ್ಞಾನದ ಸಲಕರಣೆಗಳಿರಲಿಲ್ಲವಾದ್ದರಿಂದ ನಿರಂಜನ್ ಅವರು ಸ್ವತಃ ತಮ್ಮ ಕೈಯಿಂದಲೇ ಉಗ್ರನ ಮೇಲಿದ್ದ ಬಾಂಬ್ ಅನ್ನು ಬಿಡಿಸಲು ಹೋಗಿ ತಮ್ಮ ಪ್ರಾಣವನ್ನೇ ಕಳೆದುಕೊಂಡರೆ? ಅದು ನಿಜವಾದರೆ ನಿರಂಜನ್ ಸಾವಿಗೆ ಪಾಕ್ ಉಗ್ರರಿಗಿಂತಲೂ ಮೋದಿ ಮತ್ತು ದೋವಲ್ ಹೆಚ್ಚು ಕಾರಣರಾಗುತ್ತಾರಲ್ಲವೆ?

ಮೋದಿ ಎಂಬ ನಯವಂಚಕ ಆಕಾಶದೆತ್ತರದ ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದು ಒಂದೂವರೆ ವರ್ಷಗಳಾದವು. ಈ ಅವಧಿಯಲ್ಲಿ ಆತ ಕೊಟ್ಟ ಯಾವ ಮಾತೂ ಈಡೇರಿಲ್ಲ. ವಿದೇಶಗಳಿಂದ ಕಪ್ಪು ಹಣ ತರುವ 'ಜುಮ್ಲಾ' ಮಾತುಗಳೆಲ್ಲ ಬದಿಗಿರಲಿ; ಜನರ ಬದುಕನ್ನು ತಾಗುವ ಯಾವ ವಿಷಯದಲ್ಲೂ ಸುಧಾರಣೆ ಆಗಿಲ್ಲ, ಬೆಲೆ ಏರಿಕೆ ಕಡಿಮೆ ಆಗಿಲ್ಲ, ರಫ್ತು ಮತ್ತು ಕೈಗಾರಿಕೆಗಳು ಹೆಚ್ಚಾಗಿಲ್ಲ, ಈತನನ್ನು ಗೆಲ್ಲಿಸಲು ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡಿದ ಉದ್ಯಮಿಗಳು ಈಗ "ನಾವು ನಿರೀಕ್ಷಿಸಿದ್ದ ಒಂದಂಶವೂ ಈಡೇರಿಲ್ಲ" ಎನ್ನುತ್ತಿದ್ದಾರೆ. ಹೋಗಲಿ ಉದ್ಯಮಿಗಳಿಗೆ ನಿರಾಶೆ ಆಗಿರುವುದಕ್ಕೆ ಕಾರಣ ಮೋದಿ ಬಡವರಿಗೆ ತೋರಿದ ಕಾಳಜಿ ಎನ್ನುವಂತೆಯೂ ಇಲ್ಲ, ಯಾಕೆಂದರೆ ಆತ ಬಡವರ ನೆರವಿಗೆಂದೇ ಇರುವ ಹಲವಾರು ಯೋಜನೆಗಳಿಗೆ ಕತ್ತರಿ ಹಾಕಿದ್ದಾನೆ. ಸೇನೆ, ವಾಯುದಳ ಮತ್ತು ನೌಕಾಪಡೆಗಳಿಗೆ ನೀಡುತ್ತಿದ್ದ ಮೂಲಧನದಲ್ಲೂ ಕಡಿತ ಮಾಡಿದ್ದಾನೆ. ಈತನ ಅಧಿಕಾರಾವಧಿಯಲ್ಲಿ ಹಿಂದೂತ್ವವಾದಿಗಳ ಅಟ್ಟಹಾಸ ಹೆಚ್ಚಾಗಿದ್ದು ದೇಶದಾದ್ಯಂತ ಲೇಖಕರು, ನಟರು, ವಿಜ್ಞಾನಿಗಳು, ಇತಿಹಾಸಕಾರರು, ಕಲಾವಿದರು, ಇನ್ನೂ ಬೇರೆ ಬೇರೆ ವಲಯದವರು 'ಅಸಹಿಷ್ಣುತೆ ಹೆಚ್ಚಾಗುತ್ತಿದೆ' ಎಂದು ಆತಂಕಗೊಂಡಿದ್ದಾರೆ.

ವಿವಿಧ ವೇಷಭೂಷಣಗಳನ್ನು ಧರಿಸಿ, ವಿದೇಶಗಳಲ್ಲಿ ನೆಲೆಸಿರುವ ಭಾರತೀಯ ಮೂಲದವರಿಂದ ಜೈಕಾರ ಹಾಕಿಸಿಕೊಳ್ಳುತ್ತಾ ಜಗತ್ತನ್ನು ಸುತ್ತುತ್ತಿರುವ ಮೋದಿ ವಿದೇಶಾಂಗ ನೀತಿಯಲ್ಲೂ ಯಾವುದೇ ಯಶಸ್ಸನ್ನು ಕಂಡಿಲ್ಲ. ಉದಾಹರಣೆಗೆ ನೇಪಾಳದಲ್ಲಿ ಮೋದಿ ಮತ್ತಾತನ ಸರ್ಕಾರ ಮಾದೇಶಿಗಳ ಪರವಹಿಸಿ ಆ ದೇಶದ ಸಂವಿಧಾನದಲ್ಲಿ ಮೂಗು ತೂರಿಸಿದ್ದರಿಂದ ಇವತ್ತು ಆ ದೇಶದಲ್ಲಿ ಮೋದಿಯ ಪ್ರತಿಕೃತಿಗಳನ್ನು ದಹಿಸಲಾಗುತ್ತಿದೆ. ಹಾಗೆಯೇ ಈಗ ಪಾಕಿಸ್ತಾನದೊಂದಿಗಿನ ಸಂಬಂಧವನ್ನು ವೃದ್ಧಿಸಲು ಯಾವುದೇ ಮುಂಜಾಗ್ರತೆ ತೆಗೆದುಕೊಳ್ಳದೆ ಹಾರಿ ಹೋಗಿದ್ದರಿಂದ ಅಲ್ಲಿನ ಉಗ್ರರ ಮತ್ತು ಐಎಸ್‌ಐನಂತಹ ಸಂಸ್ಥೆಗಳ ಕೆಂಗಣ್ಣಿಗೆ ತುತ್ತಾಗಿ ಭಾರತದ ವಾಯುನೆಲೆಯ ಮೇಲೆ ದಾಳಿ ಆಗುವಂತೆ ಮೋದಿ ಮಹಾಶಯ ಮಾಡಿದ್ದಾನೆ. ಈತನಿಂದ ಭಾರತಕ್ಕೆ ಇನ್ನೂ ಎಂತೆಂತಹ ಅನಾಹುತಗಳು ಕಾದಿವೆಯೋ, ಭಾರತ ಮಾತೆಯೇ ಬಲ್ಲಳು. ●

'ಮಲೆನಾಡ ಗಾಂಧಿ' ಗೋವಿಂದೇ ಗೌಡ



'ಮಲೆನಾಡ ಗಾಂಧಿ' ಎಂದೇ ಹೆಸರು ಪಡೆದಿದ್ದ ಎಚ್.ಜಿ.ಗೋವಿಂದೇ ಗೌಡರು ನಿರ್ಗಮಿಸಿದ್ದಾರೆ.

ರಾಜಕಾರಣದಲ್ಲಿದ್ದು, ಮಂತ್ರಿಯಾಗಿದ್ದು ಪ್ರಾಮಾಣಿಕತೆ ಮತ್ತು ಶುದ್ಧ ಹಸ್ತ ಎಂದರೆ ಏನು ಎಂದು ತೋರಿಸಿಕೊಟ್ಟವರು ಗೌಡರು.

ಗೌಡರಲ್ಲಿ ಪ್ರಾಮಾಣಿಕತೆ, ದಕ್ಷತೆ ಮತ್ತು ಶುದ್ಧಹಸ್ತ ಈ ಮೂರು ಗುಣಗಳು ಮೇಳೈಸಿದ್ದವು. ಈ ಗುಣಗಳನ್ನೇ ಕೆಲವರು ಮೆಚ್ಚಿಕೊಂಡು 'ಮಲೆನಾಡ ಗಾಂಧಿ' ಎಂದು ಬಿರುದು ನೀಡಿದ್ದರು.

ಗೌಡರು ಗಾಂಧಿ ಕಾಲದ ಆದರ್ಶಗಳಲ್ಲಿ ಬದುಕಿದ್ದವರು. ಪಿ.ಲಂಕೇಶರು ಒಮ್ಮೆ ಪತ್ರಿಕೆ ಮುಖಪುಟದಲ್ಲಿ ಗೌಡರ ಫೋಟೋ ಹಾಕಿ 'ಶುದ್ಧಹಸ್ತದ ಪ್ರಾಮಾಣಿಕ ಮಂತ್ರಿ ಗೋವಿಂದೇ ಗೌಡರು' ಎಂಬ ಲೇಖನ ಹಾಕಿದ್ದರು. ಇದನ್ನು ಒಂದು ದಾಖಲೆ ಎನ್ನಬಹುದು. ಯಾಕೆಂದರೆ ಲಂಕೇಶರು ಹಾಗೆ ಮೆಚ್ಚಿಕೊಂಡ ಹೆಚ್ಚಿನ ಸಂಖ್ಯೆಯಲ್ಲಿಲ್ಲ.

ಕಡಿದಾಳ್ ಮಂಜಪ್ಪನವರ ಹಿಂಬಾಲಕರಾಗಿದ್ದ ಗೌಡರು ಅವರ ಚುನಾವಣಾ ಜಮಾ ಖರ್ಚಿನ ಜವಾಬ್ದಾರಿಯನ್ನು ಹೊತ್ತುಕೊಂಡು ಅದನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದರು. ಕಡಿದಾಳ್ ಮಂಜಪ್ಪನವರು ಮೊದಲು ಕಂದಾಯ ಮಂತ್ರಿ ಮತ್ತು ಅನಂತರ ಮುಖ್ಯಮಂತ್ರಿಯಾಗಿದ್ದವರು. ಆದರೂ ಲಾಯರ್‌ಗಿರಿ ಮಾಡಿ ಬದುಕು ಸವೆಸಿದ್ದವರು. ಹಾಗೆಯೇ ಗೋವಿಂದೇ ಗೌಡರು ಎರಡು ಬಾರಿ ಮಂತ್ರಿಯಾಗಿದ್ದರೂ ಯಾವ ಲಂಚಕ್ಕೂ ಕೈಚಾಚದೆ ಮಂತ್ರಿಗಿರಿಯ ಭತ್ಯೆ ಮತ್ತು ಮತ್ತಿತರ ಸವಲತ್ತಿನಲ್ಲೇ ತಮ್ಮ ಕರ್ತವ್ಯ ನಿರ್ವಹಿಸಿ ನಿರ್ಗಮಿಸಿದರು.

ಗೌಡರು ರಾಮಕೃಷ್ಣ ಹೆಗಡೆ, ದೇವೇಗೌಡ ಮತ್ತು ಜೆ.ಎಚ್.ಪಟೇಲರ ಸಂಪುಟಗಳಲ್ಲಿ ಸಚಿವರಾಗಿದ್ದರು. ಹೆಗಡೆ ಮತ್ತು ದೇವೇಗೌಡರ ಜಗಳದಿಂದ ಗೋವಿಂದೇ ಗೌಡರು ತುಂಬಾ ನೊಂದಿದ್ದರು. ಪಟೇಲರ ಅವಧಿಯಲ್ಲಿ ಜಗಳ ತಾರಕಕ್ಕೇರಿ ಜನತಾ ಪಕ್ಷ ಹೋಳಾದಾಗ ಬೇಸತ್ತ ಗೌಡರು ಸಕ್ರಿಯ ರಾಜಕಾರಣದಿಂದಲೇ ನಿರ್ಗಮಿಸಿದರು. ಆದರೂ ಅಲ್ಲಿ ಇಲ್ಲಿ ಕಾರ್ಯಕ್ರಮಗಳಿಗೆ ಹೋದಾಗ ಅವರಿಂದ ನೌಕರಿ ಪಡೆದವರು ಬಂದು ಕಾಲಿಗೆ ನಮಸ್ಕಾರ ಮಾಡುತ್ತಿದ್ದದ್ದು ಸಾಮಾನ್ಯವಾಗಿತ್ತು. ಬಹುಶಃ ಇಂತಹ ಗೌರವಕ್ಕೆ ಭಾಜನರಾದ ರಾಜಕಾರಣಿ ಗೋವಿಂದೇಗೌಡರು ಒಬ್ಬರೆ.

ಎಲ್ಲಾ ಪಕ್ಷದವರು ಗೌರವಿಸುವ ವ್ಯಕ್ತಿತ್ವ ಅವರಲ್ಲಿತ್ತು. ಭ್ರಷ್ಟ ರಾಜಕಾರಣದ ನಡುವೆಯೂ ಶುದ್ಧಹಸ್ತರಾಗಿದ್ದರು. ಸರ್ಕಾರ ಹೇಗಾದರೂ ಇರಲಿ ನನ್ನ ಹಸ್ತ ಶುದ್ಧವಾಗಿರಬೇಕೆಂದು ಹೇಳುತ್ತಿದ್ದರು. ಅವರ ಮಗ, ಅಳಿಯಂದಿರು ಮತ್ತು ಹೆಣ್ಣು ಮಕ್ಕಳೆಲ್ಲಾ ಗೌಡರು ತೋರಿದ ಆದರ್ಶದಲ್ಲೇ ಬದುಕಿದವರು. ಸರಳವಾಗಿ, ನೇರವಾಗಿದ್ದ ಗೌಡರು ತಮಗೆ ಸಿಕ್ಕ ಖಾತೆಗಳ ನಿರ್ವಹಣೆಯಲ್ಲಿ ಎಷ್ಟು ಪ್ರಾಮಾಣಿಕರಾಗಿದ್ದರೋ ಅಷ್ಟೇ ಕಠಿಣವಾಗಿದ್ದರು.


ಗೋವಿಂದೇಗೌಡರಿಗೆ ತುಂಬಾ ಸಮೀಪದವರೇ ಆದ ಕಿಮ್ಮನೆ ರತ್ನಾಕರ್ ಇವತ್ತು ಗೌಡರು ನಿರ್ವಹಿಸಿದ್ದ ಖಾತೆಯನ್ನೇ ನಿರ್ವಹಿಸುತ್ತಾ ಗೌಡರ ಶುದ್ಧಹಸ್ತದ ಆದರ್ಶವನ್ನು ಮುಂದುವರೆಸುತ್ತಿರುವುದು ವಿಶೇಷ. ●





ಬಿಟಿ ಹತ್ತಿ ಬೆಳೆದು ಕಂಗಾಲಾದ ರೈತರು....

ಬಿಟಿ ಹತ್ತಿ ಬೆಳೆದು ಬೀದಿಗೆ ಬಿದ್ದ ಅನ್ನದಾತ...



ಮಂಜುನಾಥ್

ರಾಯಚೂರು ಜಿಲ್ಲೆಯ ಕಡಗಂದೊಡ್ಡಿ ಹಳ್ಳಿಯ ಚಂದಾಸಾಬ್ ಎಂಬ ಬಡ ರೈತ ಈ ವರ್ಷ ಹದಿನೈದು ಎಕರೆ ಜಮೀನನ್ನು ಗುತ್ತಿಗೆ ಪಡೆದು ಅದರಲ್ಲಿ ಬಿಟಿ ಹತ್ತಿ ಬಿತ್ತಿದ. ಭೂಮಿ ಹಸನು ಮಾಡಲು, ಹತ್ತಿ ಬೀಜ ಮತ್ತು ಗೊಬ್ಬರ ಕೊಳ್ಳಲು, ಅದಕ್ಕೆ ಇದಕ್ಕೆ ಅಂತ ಒಟ್ಟು ಸುಮಾರು ಎರಡು ಲಕ್ಷ ರೂಪಾಯಿ ಸಾಲ ಮಾಡಿದ. ಕಾಲಕಾಲಕ್ಕೆ ನೀರು, ಗೊಬ್ಬರ, ಕ್ರಿಮಿನಾಶಕ ಹಾಕಿ ಹತ್ತಿ ಗಿಡಗಳನ್ನು ತುಂಬಾ ಮುತುವರ್ಜಿಯಿಂದ ಬೆಳೆಸಿದ. ಬೆಳೆ ನಳನಳಿಸುತ್ತಾ ಬೆಳೆಯುತ್ತಿದ್ದುದನ್ನು ಕಂಡು ಬಹಳ ಉಲ್ಲಸಿತನಾಗಿದ್ದ. ಹತ್ತಿ ಗಿಡದ ತುಂಬ ಕಾಯಿಗಳು ಗೊಂಚಲುಗೊಂಚಲಾಗಿ ಇಳಿಬಿದ್ದಾಗಲಂತೂ ಆತನ ಸಂತೋಷಕ್ಕೆ ಪಾರವೇ ಇರಲಿಲ್ಲ. ಈ ವರ್ಷದ ಸಾಲ, ಹಿಂದಿನ ವರ್ಷದ ಸಾಲ ಎಲ್ಲಾ ತೀರಿಸಬಹುದು ಎಂಬ ಉತ್ಸಾಹದಲ್ಲಿದ್ದ. ಆದರೆ, ಯಾವಾಗ ಹತ್ತಿಕಾಯಿ ಒಡೆಯಿತೋ ಅವನ ಕನಸೆಲ್ಲಾ ನುಚ್ಚು ನೂರಾಯಿತು. ಕಾಯಿ ಸರಿಯಾಗಿ ಒಡೆದು ಹತ್ತಿ ಅರಳದೇ ಕರ್ರಗಾಗಿ ಮುದುಡಿಕೊಂಡುಬಿಟ್ಟಿತು. ಸೂಕ್ಷ್ಮವಾಗಿ ಗಮನಿಸಿದಾಗ ಕಂಡಿದ್ದು ಗುಲಾಬಿ ಕಾಯಿಕೊರಕ ಹುಳ.

"ಹತ್ತಿ ಹೂಬಿಟ್ಟಾಗ ಹೂವಿನ ಪಕಳೆಗಳ ಮೇಲೆ ಈ ಹುಳ ತತ್ತಿ ಇಟ್ಟಿರುತ್ತದೆ. ಹೂವು ಕಾಯಿಯಾಗಿ ಬೆಳೆಯುತ್ತಿದ್ದಂತೆ ಒಳಗಿದ್ದ ಮೊಟ್ಟೆ ಮರಿಯಾಗಿಬಿಡುತ್ತದೆ. ಹೊರಗೆ ನಮಗೆ ಹತ್ತಿ ಕಾಯಿ ಒಂದು ಚೂರೂ ಚುಕ್ಕೆಯಿಲ್ಲದಂತೆ ಬಹಳ ಚೆಂದವಾಗಿ ಕಾಣುತ್ತದೆ. ಆದರೆ, ಕಾಯಿಯ ಒಳಗೆ ಮೊದಲೇ ಸೇರಿಕೊಂಡಿದ್ದ ಮೊಟ್ಟೆ ಮರಿಯಾಗಿ ಹತ್ತಿಯ ಬೀಜಗಳನ್ನು ತಿನ್ನುತ್ತದೆ. ಹುಳ ಕಾಯಿಯ ಒಳಗೆ ಇರುವುದರಿಂದ ನಾವು ಮೇಲೆ ಎಷ್ಟು ಕ್ರಿಮಿನಾಶಕ ಹೊಡೆದರೂ ಅದಕ್ಕೆ ತಟ್ಟುವುದಿಲ್ಲ" ಎಂದು ಚಂದಾಸಾಬನೇ ಈ ವರದಿಗಾರನಿಗೆ ತನ್ನ ಹತ್ತಿ ಹೊಲದಲ್ಲಿ ನಿಂತು ಭಾರದ ಹೃದಯದಿಂದ ವಿವರಿಸಿದ. ಇಡೀ ಹದಿನೈದು ಎಕರೆ ಹೊಲದಲ್ಲಿ ಎಷ್ಟು ಹತ್ತಿ ಗಿಡಗಳಿವೆಯೋ, ಆ ಗಿಡಗಳಲ್ಲಿ ಎಷ್ಟು ಕಾಯಿಗಳಿವೆಯೋ ಆ ಎಲ್ಲಾ ಕಾಯಿಗಳಲ್ಲಿ ಕನಿಷ್ಠ ಒಂದೊಂದು ಗುಲಾಬಿ ಕಾಯಿಕೊರಕ ಹುಳ ಇದೆ ಎಂದು ಬಹಳ ಖಾತರಿಯಿಂದ ಹೇಳಿದ. ಸುಮ್ಮನೇ ಪರೀಕ್ಷೆ ಮಾಡೋಣ ಎಂದು ಅಲ್ಲಲ್ಲಿ ಅತ್ಯಂತ ಚೆನ್ನಾಗಿರುವ, ಯಾವ ರೋಗಬಾಧೆಯೂ ಇಲ್ಲವೆಂಬಂತೆ ಆರೋಗ್ಯಕರವಾಗಿ ಬೆಳೆದ ಹತ್ತಿ ಗಿಡದ ಅತ್ಯುತ್ತಮ ಕಾಯಿಗಳನ್ನು ಹರಿದು ಒಂದೊಂದಾಗಿ ಒಡೆದು ತೋರಿಸಿದ. ಆತ ಹೇಳಿದ್ದು ನಿಜವಾಗಿತ್ತು, ಪ್ರತೀ ಕಾಯಿಯಲ್ಲೂ ಕನಿಷ್ಠ ಒಂದು ಗುಲಾಬಿ ಕಾಯಿಕೊರಕ ಹುಳ ಇತ್ತು!

"ಇಷ್ಟು ಸಾಲ ಹೆಗಲೇರೇತಿ. ನಾನು ಏನ್ಮಾಡ್ಲಿ ಹೇಳಿ ಸಾರ್" ಅಂತ ಚಂದಾಸಾಬ್ ಪ್ರಶ್ನಿಸುತ್ತಿದ್ದ.

ಅದೇ ಊರಿನ ಇನ್ನಿಬ್ಬರು ರೈತರು ತಮ್ಮ ಹೊಲಗಳಿಗೆ ಕರೆದುಕೊಂಡು ಹೋಗಿ ಗುಲಾಬಿ ಕಾಯಿಕೊರಕ ಹುಳ ಮಾಡಿದ ನಷ್ಟವನ್ನು ತೋರಿಸಿದರು.

ಇದು ಕಡಗಂದೊಡ್ಡಿಯ ಒಬ್ಬಿಬ್ಬರ ರೈತರ ಕತೆಯಲ್ಲ, ರಾಯಚೂರು ಜಿಲ್ಲೆಯ ಪ್ರತಿಯೊಬ್ಬ ಹತ್ತಿ ಬೆಳೆಗಾರನ ದಾರುಣ ಕತೆ. ರಾಯಚೂರು ನಗರದಿಂದ ಹಳ್ಳಿಗಾಡಿಗೆ ಹೊರಟರೆ ಕಣ್ಣಿಗೆ ಕಾಣುವಷ್ಟು ದೂರ ಹತ್ತಿ ಹೊಲಗಳೇ ಮೈಚಾಚಿ ಮಲಗಿವೆ. ಯಾವುದೇ ಹೊಲಕ್ಕೆ ಹೋಗಿ ನೋಡಿದರೂ ಅರಳಬೇಕಿದ್ದ ಹತ್ತಿ ಮುದುಡಿಕೊಂಡು ನಾಶವಾಗಿದೆ. ಅದನ್ನು ಬಿಡಿಸುವುದಕ್ಕೆ ಹೋದರೆ ಬಿಡಿಸಿದ ಖರ್ಚೂ ಹುಟ್ಟುವುದಿಲ್ಲ. ಯಾವುದು ಆಗಬಾರದು ಎಂದು ರೈತ ನಾಯಕ ಪ್ರೊ. ಎಂ.ಡಿ.ನಂಜುಂಡಸ್ವಾಮಿಯವರು ಕೊನೆಯ ತನಕ ಹೋರಾಡಿದರೋ ಕೊನೆಗೂ ಅದು ಆಗಿಯೇಬಿಟ್ಟಿದೆ.

ನಿಮಗೆಲ್ಲಾ ನೆನಪಿರಬಹುದು. ಈ ಪ್ರಪಂಚ ಎರಡನೇ ಸಹಸ್ರಮಾನದಿಂದ ಮೂರನೇ ಸಹಸ್ರಮಾನಕ್ಕೆ ಮಗ್ಗುಲು ತಿರುವಿ ಹಾಕುತ್ತಿದ್ದಾಗ ಈ ದೇಶದ ಕೃಷಿ ಕ್ಷೇತ್ರದಲ್ಲಿ ಬಿಟಿ ಹತ್ತಿಯ ಸಾಧಕಬಾಧಕಗಳ ಬಗ್ಗೆ ಭಾರೀ ಚರ್ಚೆ ನಡೆಯುತ್ತಿತ್ತು. ಬಿಟಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ಬಿಟಿ ಹತ್ತಿ ಬೀಜಗಳನ್ನು ವಿಶ್ವ ಮಾರುಕಟ್ಟೆಯಲ್ಲಿ ಮಾರುತ್ತಿದ್ದ ಮಾನ್ಸಾಂಟೋ ಎಂಬ ದೈತ್ಯ ಕೃಷಿ ಕಾರ್ಪೊರೇಟ್ ಕಂಪನಿ ಮತ್ತು ಅದರ ಬಾಲಬಡಿಯುವ ನಮ್ಮ ದೇಶದ ಕೃಷಿ ವಿಜ್ಞಾನಿಗಳು ಬಿಟಿ ಹತ್ತಿಯ ಅನುಕೂಲತೆಗಳ ಬಗ್ಗೆ ಮುಂಖಾನುಮುಂಖವಾಗಿ ಮಾತಾಡಿದರು, ಬರೆದರು, ಪ್ರಚಾರ ಮಾಡಿದರು. ಬಿಟಿ ಹತ್ತಿಗೆ ರೋಗವೇ ಬರುವುದಿಲ್ಲ ಎಂದರು. ಬಿಟಿ ಹತ್ತಿ ಬೆಳೆ ಉತ್ಪಾದಿಸುವ ವಿಷಕಾರಿ ಅಂಶಗಳು ಹತ್ತಿಬೆಳೆಯನ್ನು ತಿನ್ನುವ ಹುಳಹುಪ್ಪಟೆ ಕೀಟಗಳನ್ನು ನಾಶಮಾಡಿ ಹತ್ತಿ ಬೆಳೆಯನ್ನು ರಕ್ಷಿಸುತ್ತದೆ ಎಂದರು. ಕೀಟನಾಶಕ, ಕ್ರಿಮಿನಾಶಕ ಹೊಡೆಯುವ ಪ್ರಮೇಯವೇ ಬರುವುದಿಲ್ಲವಾದ್ದರಿಂದ ಅವುಗಳಿಗೆ ಮಾಡಬೇಕಾದ ಖರ್ಚು ಉಳಿಯುತ್ತದೆ ಎಂದರು. ಹತ್ತಿ ಬೆಳೆಯುವುದಕ್ಕೆ ಮಾಡಿದ ಖರ್ಚೂ ಹುಟ್ಟದೇ ಸಾಲದ ಮೂಟೆಯನ್ನು ಹೊತ್ತು ಆತ್ಮಹತ್ಯೆಯ ದಾರಿ ಹಿಡಿದಿದ್ದ ಹತ್ತಿಬೆಳೆಗಾರರ ಬದುಕನ್ನು ಬಂಗಾರವನ್ನಾಗಿಸುತ್ತದೆ ಎಂದು ನಯವಾಗಿ ಮಾತಾಡಿ ರೈತರನ್ನು ನಂಬಿಸಿದರು.

ಇನ್ನೊಂದೆಡೆ ಕರ್ನಾಟಕ ರಾಜ್ಯ ರೈತಸಂಘದ ನೇತೃತ್ವ ವಹಿಸಿದ್ದ ನಂಜುಂಡಸ್ವಾಮಿಯವರು ಮಾನ್ಸಾಂಟೋದ ಮೋಸವನ್ನು, ಆ ಮೋಸಕ್ಕೆ ಬೆಂಬಲವಾಗಿ ನಿಂತಿದ್ದ ನಮ್ಮದೇ ದೇಶದ ಕೃಷಿ ವಿಜ್ಞಾನಿಗಳ ದೇಶದ್ರೋಹಿ ಕೃತ್ಯವನ್ನು ಜನರೆದುರು ಬಯಲುಗೊಳಿಸುವುದಕ್ಕೆ ದೊಡ್ಡ ಆಂದೋಲನವನ್ನೇ ಶುರು ಮಾಡಿದರು. ಬಿಟಿ ಹತ್ತಿಗೆ ಹುಳು ಹಿಡಿಯುವುದಿಲ್ಲ, ಕೀಟ ತಾಗುವುದಿಲ್ಲ ಎಂಬಂತ ವಾದಗಳನ್ನು ಅಂತರರಾಷ್ಟ್ರೀಯ ಅನುಭವಗಳನ್ನು ಮುಂದಿಟ್ಟು ತರ್ಕಬದ್ಧವಾಗಿ ಅಲ್ಲಗಳೆದರು.

ಎಲ್ಲಕ್ಕಿಂತ ಅವರು ಮುಂದಿಟ್ಟ ಅತೀ ಮಹತ್ವಪೂರ್ಣವಾದ ರೈತ ಬೀಜ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದು. ಬಿಟಿ ಹತ್ತಿ ಬೀಜ ಮಾರಾಟ ಮಾಡಲು ಸರ್ಕಾರಗಳು ಅವಕಾಶ ಕೊಟ್ಟರೆ ಈ ಕಂಪನಿಗಳು, ದೇಶದ್ರೋಹಿ ಕೃಷಿ ವಿಜ್ಞಾನಿಗಳು ಸೇರಿಕೊಂಡು ರೈತರ ನಡುವೆ ಇದನ್ನು ಬಹಳ ವ್ಯಾಪಕವಾಗಿ ಪ್ರಚಾರ ಮಾಡಿ ಕೇವಲ ಬಿಟಿ ಹತ್ತಿಯನ್ನೇ ಬೆಳೆಯುವಂತೆ ಮಾಡುತ್ತಾರೆ; ಆಮೇಲೆ ಇಡೀ ದೇಶ ಬಿಟಿ ಹತ್ತಿಯ ನಾಡಾಗಿ, ನಮ್ಮ ಸ್ಥಳೀಯ ಹತ್ತಿ ಬೀಜಗಳು ಕಣ್ಮರೆಯಾಗುತ್ತವೆ. ಆಗ ನಮ್ಮ ರೈತರು ತಮಗಿದ್ದ ಬೀಜ ಸ್ವಾತಂತ್ರ್ಯವನ್ನು ಕಳೆದುಕೊಂಡು ಹತ್ತಿ ಬೀಜಕ್ಕಾಗಿ ಮಾನ್ಸಾಂಟೋ ರೀತಿಯ ಬಹುರಾಷ್ಟ್ರೀಯ ಕಂಪನಿಗಳನ್ನೇ ನೆಚ್ಚಿಕೊಳ್ಳಬೇಕಾಗುತ್ತದೆ. ಅವರು ಮಾರುವ ದುಬಾರಿ ಬೆಲೆಗೆ ಬೀಜ ಕೊಂಡುಕೊಂಡು ದಿವಾಳಿಯಾಗಬೇಕಾಗುತ್ತದೆ ಎಂದು ನಂಜುಂಡಸ್ವಾಮಿಯವರು ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ವಿಶ್ವ ಮಟ್ಟದಲ್ಲಿ ಬಹಳ ದೊಡ್ಡ ಮಟ್ಟದ ಪ್ರಚಾರಾಂದೋಲನ ನಡೆಸಿದ್ದರು. ಅದರಲ್ಲೂ ಕರ್ನಾಟಕದಲ್ಲಿ ಬಿಟಿ ಹತ್ತಿ ಬೆಳೆದ ಹೊಲಗಳಿಗೆ ರೈತರ ದಂಡು ಕಟ್ಟಿಕೊಂಡು ನುಗ್ಗಿ ಕಿತ್ತು ಹಾಕುವ ಆಂದೋಲನವನ್ನೂ ಅವರು ಪ್ರಾರಂಭಿಸಿದ್ದರು.

ಆದರೆ ಅವರ ಪ್ರಯತ್ನ ಯಶಸ್ವಿಯಾಗಲಿಲ್ಲ, ಮಾನ್ಸಾಂಟೋ ಕಂಪನಿಯ ಎಂಜಲು ತಿಂದ ನಮ್ಮ ಕೃಷಿ ವಿಜ್ಞಾನಿಗಳು, ಸರ್ಕಾರಗಳು ಬಿಟಿ ಹತ್ತಿ ಬೀಜ ಮಾರಾಟಕ್ಕೆ, ಬೆಳೆಯುವುದಕ್ಕೆ ಅನುಮತಿ ನೀಡಿದವು.

ಈಗ ರಾಯಚೂರಿಗೆ ಬನ್ನಿ. ನಂಜುಂಡಸ್ವಾಮಿ ಏನೇನು ಭವಿಷ್ಯ ನುಡಿದಿದ್ದರೋ ಅದೆಲ್ಲಾ ಅಕ್ಷರಶಃ ಸತ್ಯವಾಗಿದೆ. ಬಿಟಿ ಹತ್ತಿ ಬೆಳೆದ ರೈತನ ಬದುಕು ಮಾನ್ಸಾಂಟೋ ಹೇಳಿದಂತೆ ಬಂಗಾರವಾಗಲಿಲ್ಲ; ನಂಜುಂಡಸ್ವಾಮಿ ಹೇಳಿದಂತೆ ದಿವಾಳಿ ಎದ್ದಿದೆ. ಬಿಟಿ ಹತ್ತಿ ಬೆಳೆಗೆ ಗುಲಾಬಿ ಕಾಯಿಕೊರಕ ಹುಳ ಹಿಡಿದು ಇಡೀ ಹತ್ತಿ ಹೊಲಗಳೇ ನಾಶವಾಗಿವೆ.

ಕರ್ನಾಟಕದಲ್ಲಿ ಈ ವರ್ಷ ಹೆಚ್ಚೂಕಡಿಮೆ 17 ಲಕ್ಷ ಎಕರೆ ಭೂಮಿಯಲ್ಲಿ ಹತ್ತಿ ಬೆಳೆ ಬೆಳೆಯಲಾಗಿದೆ. ಅದರಲ್ಲಿ ಶೇಕಡಾ 99ರಷ್ಟು ಬಿಟಿ ಹತ್ತಿಯೇ ಇದೆ. ಅಂದರೆ, ನಂಜುಂಡಸ್ವಾಮಿ ಹೇಳಿದಂತೆ ರೈತ ಬೀಜ ಸಾರ್ವಭೌಮತೆಯನ್ನು ಕಳೆದುಕೊಂಡು ಮಾನ್ಸಾಂಟೋ ಮತ್ತಿತರ ಬೃಹತ್ ಕಂಪನಿಗಳ ಎದುರು ಬೀಜಕ್ಕಾಗಿ ಕೈಯೊಡ್ಡಿ ನಿಲ್ಲಬೇಕಾಗಿದೆ.

ರಾಜ್ಯದ ಹತ್ತಿ ಬೆಳೆಯುವ ಪ್ರಮುಖ ಜಿಲ್ಲೆಗಳಲ್ಲಿ ರಾಯಚೂರು ಕೂಡ ಒಂದು. ಒಂದು ಕಾಲದಲ್ಲಿ ಅದು ಇಡೀ ಏಶಿಯಾದ ಎರಡನೇ ಅತಿದೊಡ್ಡ ಹತ್ತಿ ಮಾರುಕಟ್ಟೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿತ್ತು, ತುಂಗಭದ್ರಾ ಎಡದಂಡೆ ಕಾಲುವೆಯ ವ್ಯಾಪ್ತಿಯಲ್ಲಿ ನೀರಾವರಿ ಶುರುವಾದ ಮೇಲೆ, ಜನ ಭತ್ತಕ್ಕೆ ಮುಗಿಬಿದ್ದು ಈಗ ಹತ್ತಿ ಬೆಳೆ ಸ್ವಲ್ಪ ಕಡಿಮೆ ಆಗಿದೆ. ಆದರೂ ರಾಜ್ಯದ ಪ್ರಮುಖ ಹತ್ತಿ ಬೆಳೆಯುವ ಜಿಲ್ಲೆಯಾಗಿ ಇಂದಿಗೂ ಮುಂದುವರಿದಿದೆ. ಹತ್ತಿ ಬೆಳೆಗೆ ಯೋಗ್ಯವಾಗಿರುವ ಕಪ್ಪು ಮಣ್ಣಿನ ಭೂಮಿ ಇಲ್ಲಿ ಹೇರಳವಾಗಿರುವುದೇ ಅದಕ್ಕೆ ಪ್ರಮುಖ ಕಾರಣ. ಈ ವರ್ಷ ಇಡೀ ರಾಜ್ಯಾದ್ಯಂತ ಸುಮಾರು ಹದಿನೇಳು ಲಕ್ಷ ಎಕರೆ ಪ್ರದೇಶದಲ್ಲಿ ಹತ್ತಿ ಬೆಳೆ ಇದ್ದು ಅದರಲ್ಲಿ ಸುಮಾರು ಎರಡು ಲಕ್ಷ ಎಕರೆ ರಾಯಚೂರು ಜಿಲ್ಲೆಯದೇ ಇದೆ. ಆದರೆ ದುರಂತ ಎಂದರೆ ಅದರಲ್ಲಿ ಶೇಕಡ 90 ರಷ್ಟು ಬೆಳೆ ಗುಲಾಬಿ ಕಾಯಿಕೊರಕ ಹುಳುವಿನ ದಾಳಿಗೆ ಸಿಕ್ಕು ಧ್ವಂಸವಾಗಿದೆ. ಲಕ್ಷಾಂತರ ರೂಪಾಯಿ ಸಾಲ ಮಾಡಿ ಬಿಟಿ



ಬಿಟಿ ಹತ್ತಿ ಒಂದು ಪರಿಚಯ


ಬ್ಯಾಸಿಲಸ್ ಥುರಿಂಗಿಯೆನ್ಸಿಸ್ (Bacillus thuringiensis) ಎಂಬ ಬ್ಯಾಕ್ಟೀರಿಯದ ಜೀನುಗಳನ್ನು ಬಳಸಿ, ಅಭಿವೃದ್ಧಿಪಡಿಸಲಾದ ಹತ್ತಿ ತಳಿಗೆ ಬಿಟಿ ಹತ್ತಿ ಎಂದು ಕರೆಯಲಾಗುತ್ತದೆ. ಇದೊಂದು ಕುಲಾಂತರಿ ತಳಿ. ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದವರ ಪ್ರಕಾರ ಈ ಹತ್ತಿ ಬೆಳೆಯಲ್ಲಿರುವ ಬ್ಯಾಕ್ಟೀರಿಯಾವು ಸುಮಾರು ಇನ್ನೂರು ಬಗೆಯ ವಿಷಕಾರಿ ಅಂಶಗಳನ್ನು ಉತ್ಪಾದಿಸುತ್ತದೆ. ಈ ವಿಷಕಾರಿ ಅಂಶಗಳು ಹತ್ತಿಬೆಳೆಯನ್ನು ತಿನ್ನುವ ಕ್ರಿಮಿ, ಕೀಟಗಳನ್ನು ಕೊಲ್ಲುತ್ತವೆ. ಆದ್ದರಿಂದ ಹತ್ತಿ ಬೆಳೆಗೆ ಈ ಯಾವ ಕ್ರಿಮಿ, ಕೀಟ, ಹುಳುಗಳು ಹಿಡಿಯುವುದಿಲ್ಲ ಎಂಬುದು ಅವರ ವಾದ.

ಕೃಷಿ ಪರಿಸರದಲ್ಲಿ ರೈತನಿಗೆ ನೆರವಾಗುವ ಹಲವು ಕ್ರಿಮಿ, ಕೀಟಗಳೂ ಇವೆ. ರೈತನ ಬೆಳೆಗಳನ್ನು ತಿಂದು ನಾಶ ಮಾಡುವ ಕ್ರಿಮಿಕೀಟಗಳನ್ನು ತಿನ್ನುವ ಮೂಲಕ ಈ ಕ್ರಿಮಿಕೀಟಗಳು ರೈತನಿಗೆ ನೆರವಾಗುತ್ತವೆ. ಬಿಟಿ ಹತ್ತಿ ಉತ್ಪಾದಿಸುವ ವಿಷಕಾರಿ ಅಂಶಗಳು ಇಂತಹ ರೈತಸ್ನೇಹಿ ಕ್ರಿಮಿಕೀಟಗಳಿಗೆ ಹಾನಿ ಮಾಡುವುದಿಲ್ಲ ಎಂದು ಇವರು ವಾದಿಸುತ್ತಾರೆ.

ಆದರೆ, ಬಿಟಿ ತಂತ್ರಜ್ಞಾನವನ್ನು ವಿರೋಧಿಸುವ ಜನ ಈ ವಾದಗಳನ್ನು ಒಪ್ಪುವುದಿಲ್ಲ. ಬಿಟಿ ಹತ್ತಿ ಉತ್ಪಾದಿಸುವ ವಿಷ ವಸ್ತುಗಳು ಗಿಡಗಳಿಗೆ, ರೈತಸ್ನೇಹಿ ಹುಳಹುಪ್ಪಟೆಗಳಿಗೆ, ಮನುಷ್ಯರಿಗೆ ಹಾನಿಕಾರಕ ಎಂಬುದು ಇವರ ವಾದ. ಜೊತೆಗೆ, ಬಿಟಿ ಹತ್ತಿ ಕೆಲವೊಂದು ಹುಳುಗಳ ವಿಷಯದಲ್ಲಿ ಮಾತ್ರ - ಅದೂ ಕೆಲವು ಸಮಯ ಮಾತ್ರ - ಪರಿಣಾಮಕಾರಿಯಾಗಿ ಕೆಲಸ ಮಾಡಬಹುದೇ ಹೊರತು ಎಲ್ಲಾ ಹುಳುಗಳಿಗೆ ಅಲ್ಲ ಎಂಬುದು ಇವರ ವಾದ. ಹತ್ತಿಗೆ ಹಿಡಿಯುವ ಹುಳುಗಳು ಆರಂಭದಲ್ಲಿ ಈ ವಿಷವನ್ನು ತಿಂದು ಸಾಯಬಹುದು. ಆದರೆ, ನಿಧಾನವಾಗಿ ಇದೇ ಹುಳುಗಳು ತನ್ನ ಪ್ರತಿರೋಧ ಶಕ್ತಿಯನ್ನು ವೃದ್ಧಿಸಿಕೊಂಡು ಆ ವಿಷವನ್ನೂ ತಿಂದು ಬದುಕುವ ಸಾಮರ್ಥ್ಯ ಪಡೆಯುತ್ತವೆ. ಆಗ ಅವುಗಳಿಗೆ ಯಾವ ಔಷಧಿ ಹೊಡೆದರೂ ನಾಶವಾಗದೇ ರೈತನ ಹೊಲಗಳನ್ನು ನಾಶಮಾಡುತ್ತವೆ ಎಂದು ಇವರು ವಾದಿಸುತ್ತಾರೆ. ಅದು ಈಗ ನಮ್ಮ ಕಣ್ಣ ಮುಂದೆ ಕಾಣುತ್ತಿದೆ.

ಇದಲ್ಲದೇ ಬಿಟಿ ಹತ್ತಿ ನಮ್ಮ ಸ್ಥಳೀಯ ಹತ್ತಿ ತಳಿಗಳಿಗೆ ಹೋಲಿಸಿದರೆ ತುಂಬಾ ದುರ್ಬಲ. ಅದಕ್ಕೆ ಹವಾಮಾನ ವೈಪರೀತ್ಯವನ್ನೂ ತಾಳಿಕೊಳ್ಳುವ ಶಕ್ತಿಯಿಲ್ಲ. ಬಿತ್ತನೆಯ ಸಮಯದಲ್ಲಿ ಕೊಂಚ ಬದಲಾವಣೆಯಾದರೂ ಸಹಿಸಿಕೊಳ್ಳುವ ತಾಳ್ಮೆಯಿಲ್ಲ. ಸಣ್ಣ ವ್ಯತ್ಯಾಸವಾದರೂ ಅದು ನಾಶವಾಗುತ್ತದೆ.

ಹತ್ತಿ ಬೆಳೆಗಾರರ ಸಮಾವೇಶ


ಹಫೀಜ್ ಉಲ್ಲಾ


ಮಾಲಿಪಾಟೀಲ್

'ಲಂಕೇಶ್' ಜೊತೆ ಮಾತಾಡಿದ ಕರ್ನಾಟಕ ರಾಜ್ಯ ರೈತಸಂಘದ ರಾಜ್ಯಾಧ್ಯಕ್ಷ ಚಾಮರಸ ಮಾಲಿ ಪಾಟೀಲ್ ಬಿಟಿ ಹತ್ತಿ ಬೆಳೆಗಾರರಿಗೆ ಪರಿಹಾರಕ್ಕಾಗಿ ಒತ್ತಾಯಿಸಿ ಇದೇ ಜನವರಿ 24ಕ್ಕೆ ರಾಯಚೂರಿನಲ್ಲಿ ಹತ್ತಿ ಬೆಳೆಗಾರರ ರಾಜ್ಯ ಮಟ್ಟದ ಸಮಾವೇಶ ಏರ್ಪಡಿಸುವುದಾಗಿ ಹೇಳಿದ್ದಾರೆ. ರಾಜ್ಯದ ಎಲ್ಲಾ ಹತ್ತಿ ಬೆಳೆಗಾರರು ಅಂದು ಸಾವಿರಾರು ಸಂಖ್ಯೆಯಲ್ಲಿ ನೆರೆದು ಹತ್ತಿ ಬೆಳೆ ನಾಶಕ್ಕೆ ಬೀಜ ತಯಾರಿಸಿದ ಕಂಪನಿಗಳನ್ನೇ ಹೊಣೆಗಾರರನ್ನಾಗಿಸಿ ಅವರಿಂದಲೇ ಪರಿಹಾರ ಕೊಡಿಸಬೇಕೆಂದು ಒತ್ತಾಯಿಸಲಿದ್ದಾರೆ.

"ಇದು ಬಿಟಿ ಹತ್ತಿ ಕಂಪನಿಗಳು ಮಾಡಿದ ಮಹಾದ್ರೋಹ. ಗುಲಾಬಿ ಕಾಯಿಕೊರಕ ಹುಳು ಹಿಡಿಯಲ್ಲ ಅಂತ ಹೇಳಿದ್ದು. ಈಗ ಅದೇ ಹುಳ ಬಿಟಿ ಹತ್ತಿಯನ್ನು ಧ್ವಂಸ ಮಾಡಿದೆ. ಹಾಗಾಗಿ, ಕಂಪನಿಗಳೇ ಪರಿಹಾರ ಕೊಡಬೇಕು. ಅವರಿಂದ ಪರಿಹಾರ ಕೊಡಿಸುವುದು ಸರ್ಕಾರದ ಜವಾಬ್ದಾರಿ" ಎಂದು ಮಾಲಿಪಾಟೀಲ್ ಒತ್ತಾಯಿಸುತ್ತಾರೆ.

ಇನ್ನೊಂದೆಡೆಗೆ, ಹಫೀಜ್ ಉಲ್ಲಾ ರೀತಿಯ ಕೆಲವು ಸಾಮಾಜಿಕ ಕಾರ್ಯಕರ್ತರು ಹಾಗೂ ಲಕ್ಷ್ಮಣಗೌಡ ಕಡಗಂದೊಡ್ಡಿಯಂತಹ ಕೆಲವು ರೈತ ಮುಖಂಡರು ಬಿಟಿ ಹತ್ತಿ ಬೀಜ ಮಾರಿದ ಕಂಪನಿಗಳ ವಿರುದ್ಧ ಕೋರ್ಟ್ ಮೆಟ್ಟಿಲೇರುವುದಕ್ಕೆ ಸಿದ್ಧತೆ ಮಾಡಿಕೊಂಡಿದ್ದಾರೆ. ಆದರೆ, ಸರ್ಕಾರ ಮಾತ್ರ ಇದುವರೆಗೂ ಬಾಯಿಬಿಡದಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ.



ಹತ್ತಿ ಬೆಳೆದ ರೈತರೀಗ ಕಂಗಾಲಾಗಿ ತಲೆ ಮೇಲೆ ಕೈಯಿಟ್ಟು ಕುಳಿತಿದ್ದಾರೆ.

ಹೇಳಿದ್ದೇನು, ಆಗಿದ್ದೇನು?


ಬಿಟಿ ಹತ್ತಿಗೆ ಹುಳಾನೇ ಹಿಡಿಯೋದಿಲ್ಲ ಅಂತ ಬಹಳ ವಿಸ್ತೃತವಾಗಿ ತೇಲಿಸಿ ಹೇಳೋದು ಒಂದು ಕಡೆ ಇರಲಿ. ಆದರೆ, ಇಂತಿಂತಹ ಹುಳ ಬರೋದಿಲ್ಲ ಅಂತ ನಿಖರವಾಗಿ ಆಶ್ವಾಸನೆಯನ್ನು ಬೀಜ ಮಾರುವ ಕಂಪನಿಗಳು ಕೊಟ್ಟಿವೆ. ರಾಯಚೂರಿನ ರೈತರು ಕೊಂಡುಕೊಂಡ ಬಿಟಿ ಹತ್ತಿ ಬೀಜಗಳ ಪ್ಯಾಕೆಟ್ ಜೊತೆ ಸೂಚನೆಗಳ ಒಂದು ಪುಟ್ಟ ಕರಪತ್ರವನ್ನೂ ನೀಡಲಾಗಿದೆ. ಅದರಲ್ಲಿ ಬೋಲ್‌ಗಾರ್ಡ್-2, ಅಮೆರಿಕನ್ ಕಾಯಿಕೊರಕ, ಚುಕ್ಕೆ ಕಾಯಿಕೊರಕ ಮತ್ತು ಗುಲಾಬಿ ಕಾಯಿಕೊರಕಗಳಿಂದ ಸಂಪೂರ್ಣ ರಕ್ಷಣೆ ಕೊಡುತ್ತದೆ ಎಂದು ಹೇಳಿಕೊಂಡಿದ್ದಾರೆ. ವಾಸ್ತವದಲ್ಲಿ ರಾಯಚೂರು, ಬಳ್ಳಾರಿ, ಯಾದಗಿರಿ, ಕೊಪ್ಪಳ, ಧಾರವಾಡ, ದಾವಣಗೆರೆಗಳನ್ನೂ ಒಳಗೊಂಡಂತೆ ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶಗಳಲ್ಲಿ ಇಡೀ ಬಿಟಿ ಹತ್ತಿಯನ್ನು ಸರ್ವನಾಶ ಮಾಡಿದ್ದು ಇದೇ ಗುಲಾಬಿ ಕಾಯಿಕೊರಕ ಹುಳ.

ಪರಿಸರತಜ್ಞ ಮಂಜುನಾಥ ಹೊಳಲು ಹೇಳುವ ಪ್ರಕಾರ ಇದು ಕಲಬೆರಕೆ ಅಥವಾ ಕಳಪೆ ಗುಣಮಟ್ಟದ ಬೀಜಗಳ ಸಮಸ್ಯೆ ಅಲ್ಲವೇ ಅಲ್ಲ, ಬದಲಿಗೆ ಬಿಟಿ ತಂತ್ರಜ್ಞಾನದ ವೈಫಲ್ಯ.

"ಬೋಲ್‌ಗಾರ್ಡ್ - 1 ಬಿಟಿ ಹತ್ತಿಗೆ ಗುಲಾಬಿ ಕಾಯಿಕೊರಕ ಹುಳದಿಂದ ರಕ್ಷಿಸಿಕೊಳ್ಳುವ ಶಕ್ತಿ ಇರಲಿಲ್ಲ. ಆದ್ದರಿಂದ ಬೋಲ್‌ಗಾರ್ಡ್-2 ಬಿಟಿ ಹತ್ತಿಯನ್ನು ಅಭಿವೃದ್ಧಿಪಡಿಸಲಾಯಿತು. ಇದರ ಮೂಲ ಉದ್ದೇಶವೇ ಗುಲಾಬಿ ಕಾಯಿಕೊರಕ ಹುಳದಿಂದ ರಕ್ಷಣೆ ಪಡೆಯುವುದು. ಆದರೆ ಅದರಲ್ಲೂ ಅದು ವಿಫಲವಾಗಿದೆ ಎಂದರೆ ಅದು ಬಿಟಿ ತಂತ್ರಜ್ಞಾನದ ವೈಫಲ್ಯ" ಎನ್ನುತ್ತಾರೆ ಹೊಳಲು ಅವರು.

ಹಿಂದೆ ಒಮ್ಮೆ ಆಂಧ್ರಪ್ರದೇಶದಲ್ಲಿ ಬಿಳಿ ನೊಣ ಬಿಟಿ ಹತ್ತಿಯನ್ನು ನಾಶ ಮಾಡಿತ್ತು, ಎರಡು ವರ್ಷಗಳ ಹಿಂದೆ ಮಿರಿಡ್ ಬಗ್ ಎಂಬ ಹುಳು ಹಾವೇರಿ ಮತ್ತಿತರ ಭಾಗಗಳಲ್ಲಿ ಬಿಟಿ ಹತ್ತಿಯನ್ನು ನಾಶ ಮಾಡಿತ್ತು, ಈಗ ಗುಲಾಬಿ ಕಾಯಿಕೊರಕ ನಾಶ ಮಾಡಿದೆ. ಇನ್ನು ಮುಂದೆ ಅಮೆರಿಕನ್ ಕಾಯಿಕೊರಕ ಹುಳದಿಂದಲೂ ಬಿಟಿ ಹತ್ತಿಯನ್ನು ನಾನು ರಕ್ಷಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಬಹುದು ಎಂಬುದು ಹೊಳಲು ಅವರ ಆತಂಕ.

"ಗುಲಾಬಿ ಕಾಯಿಕೊರಕ ಹುಳ ಕೇವಲ ಹತ್ತಿಯನ್ನಷ್ಟೇ ನಾಶ ಮಾಡುತ್ತದೆ. ಆದರೆ, ಅಮೆರಿಕನ್ ಕಾಯಿಕೊರಕ ಬೇರೆ ಬೆಳೆಗಳನ್ನೂ ತಿನ್ನುತ್ತದೆ. ಹಾಗಾಗಿ, ಈ ಹುಳದ ಬಾಧೆ ಏನಾದರೂ ಕಂಡುಬಂದರೆ ಅದು ಕೇವಲ ಹತ್ತಿಬೆಳೆಗಾರರಿಗೆ ಮಾತ್ರವಲ್ಲ, ಇತರ ಬೆಳೆ ಬೆಳೆಯುವ ರೈತರಿಗೂ ಭಾರಿ ನಷ್ಟ ತಂದೊಡ್ಡಲಿದೆ" ಎಂದು ಹೊಳಲು ಅವರು ಆತಂಕ ವ್ಯಕ್ತಪಡಿಸುತ್ತಾರೆ.




ಬೀಜ ಕಾಯ್ದೆ ಮತ್ತು ಪರಿಹಾರ

1996ರ ಬೀಜ ಕಾಯ್ದೆಯಲ್ಲಿ ಬೀಜಗಳ ಭೌತಿಕ ಶುದ್ಧತೆ ಮತ್ತು ಮೊಳಕೆಯಂತಹ ವಿಷಯಗಳನ್ನು ಸೇರಿಸಲಾಗಿದೆ. ಆದರೆ, ತಳಿಶುದ್ಧತೆಯ ವಿಷಯದ ಬಗ್ಗೆ ಈ ಕಾಯ್ದೆಯಲ್ಲಿ ಏನೂ ಹೇಳಲಾಗಿಲ್ಲ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಬೀಜ ಕಂಪನಿಗಳು ತಳಿಶುದ್ಧತೆ ಶೇಕಡ 98ರಷ್ಟು ಇದೆ ಎಂದು ಸುಳ್ಳು ಹೇಳಿಕೊಂಡು ರೈತರನ್ನು ಸುಲಿಯುತ್ತಿವೆ. ಆದ್ದರಿಂದ ಈ ಕಾಯ್ದೆಗೆ ತಿದ್ದುಪಡಿ ತಂದು ತಳಿಶುದ್ಧತೆಯ ವಿಷಯವನ್ನೂ ಇದರಲ್ಲಿ ಸೇರಿಸಿ, ಕಂಪನಿಗಳು ಹೇಳಿದಷ್ಟು ತಳಿಶುದ್ಧತೆ ಇಲ್ಲದಿದ್ದರೆ ಅಥವಾ ತಳಿಶುದ್ಧತೆಯ ಕಾರಣಕ್ಕಾಗಿ ಬೆಳೆ ನಷ್ಟವಾದರೆ ಅದಕ್ಕೆ ಕಂಪನಿಗಳನ್ನೇ ಹೊಣೆಗಾರ ಆಗಿಸುವ ಕೆಲಸ ಆಗಬೇಕಿದೆ.

ಬರ, ಪ್ರವಾಹಗಳಂತಹ ಪ್ರಾಕೃತಿಕ ವಿಕೋಪಗಳಿಂದ ಬೆಳೆ ನಾಶವಾದರೆ ಚುನಾಯಿತ ಸರ್ಕಾರಗಳು ಪರಿಹಾರ ನೀಡುತ್ತವೆ. ಆದರೆ, ಈಗ ಆಗಿರುವ ನಾಶ ಪ್ರಕೃತಿ ವಿಕೋಪದಿಂದ ಆದದ್ದಲ್ಲ. ಬದಲಿಗೆ, ಬೀಜ ತಯಾರಿಸುವ ಲಾಭಕೋರ ಕಂಪನಿಗಳ ಮೋಸದಿಂದ ಆಗಿದ್ದು. ಈ ಕಂಪನಿಗಳೇ ನಷ್ಟದ ಹೊರೆ ಹೊತ್ತು ರೈತರಿಗೆ ಪರಿಹಾರ ಕಲ್ಪಿಸಬೇಕಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೃಷಿ ಸಚಿವ ಕೃಷ್ಣ ಭೈರೇಗೌಡ ಕೂಡಲೇ ಕಾರ್ಯಪ್ರವೃತ್ತರಾಗಬೇಕಿದೆ. ಇಲ್ಲದಿದ್ದರೆ, ಹತ್ತಿ ಬೆಳೆದ ರೈತರು ಒಬ್ಬೊಬ್ಬರಾಗಿ ನೇಣಿಗೆ ಕೊರಳೊಡ್ಡಲಾರಂಭಿಸುತ್ತಾರೆ. ಆಗ ಇದೇ ಮಂತ್ರಿ ಮಹೋದಯರು ಆತ್ಮಹತ್ಯೆ ಮಾಡಿಕೊಂಡ ರೈತರ ಮನೆಗೆ ಹೋಗಿ ಆತ್ಮಹತ್ಯೆ ಪರಿಹಾರದ ಚೆಕ್ಕುಗಳನ್ನು ವಿತರಿಸಬೇಕಾಗುತ್ತದೆ. ಹಾಗಾಗುವ ಮೊದಲೇ ಆತ್ಮಹತ್ಯೆಗಳು ನಡೆಯದಂತೆ ತಡೆಯುವ ಕೆಲಸಕ್ಕೆ ಸರ್ಕಾರ ಮುಂದಾಗಬೇಕು.

ಕೃಷಿ ವಿವಿ ಮಲಗಿದೆಯೆ?

ಯಾವ ರಾಯಚೂರಿನಲ್ಲಿ ಹತ್ತಿ ಬೆಳೆ ಸರ್ವನಾಶವಾಗಿ ರೈತರು ಪಡಿಪಾಟಲು ಬಿದ್ದಿದ್ದಾರೋ ಅದೇ ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯವಿದೆ. ಎಲ್ಲಾ ಜಿಲ್ಲೆಯಂತೆ ಇಲ್ಲಿಯೂ ಕೃಷಿ ಇಲಾಖೆಯ ಉಪನಿರ್ದೇಶಕರ ಕಚೇರಿ ಇದೆ. ಆದರೆ ರೈತರು ಕಂಗಾಲಾಗಿ ಪರದಾಡುತ್ತಿದ್ದಾಗ ಅವೆರಡೂ ಗಾಢನಿದ್ದೆಯಲ್ಲಿದ್ದವು. ಯಾವಾಗ ಮಾಧ್ಯಮಗಳು ಹತ್ತಿ ಬೆಳೆ ನಾಶದ ಕುರಿತು ಪುಣಗಟ್ಟಲೇ ಬರೆಯಲಾರಂಭಿಸಿದವೋ, ಯಾವಾಗ ರೈತರು ತಮ್ಮ ಹತ್ತಿಗಿಡಗಳನ್ನು ಕಿತ್ತುಕೊಂಡು ಬಂದು ಕೃಷಿ ಇಲಾಖೆಯ ಉಪನಿರ್ದೇಶಕರ ಕಚೇರಿ ಬಳಿ ಧರಣಿಗೆ ಕುಳಿತರೋ ಆವಾಗ ಅವುಗಳಿಗೆ ಎಚ್ಚರವಾಯಿತು. ಜಂಟಿ ನಿರ್ದೇಶಕರು ವಿಶ್ವವಿದ್ಯಾಲಯಕ್ಕೆ ಒಂದು ಪತ್ರ ಬರೆದರು, ವಿಶ್ವವಿದ್ಯಾಲಯವು ನಾಲ್ಕಾರು ತಜ್ಞರನ್ನು ಸೇರಿಸಿ ಒಂದು ತಂಡವನ್ನು ರಚಿಸಿ ಒಂದಿಷ್ಟು ರೈತರ ಹೊಲಗಳಿಗೆ ಕಾಟಾಚಾರಕ್ಕೆ ಹೋಗಿ ಬಂದರು. ಆಮೇಲೆ ಇಂತಹ ಗಂಭೀರ ವಿಷಯದ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಸುದೀರ್ಘ ವರದಿ ಸಲ್ಲಿಸಬೇಕಿದ್ದ ಈ ತಜ್ಞರ ತಂಡ ಕೇವಲ ಒಂದು ಪುಟದ ವರದಿಯನ್ನು ಜಂಟಿ ನಿರ್ದೇಶಕರ ಕಚೇರಿಗೆ ಸಲ್ಲಿಸಿತು! ಒಂದೇ ಪುಟದ ವರದಿ!! ಯಾವ ಹಳ್ಳಿಗಳಿಗೆ ಹೋಗಿದ್ದೇವೆ, ಯಾವ ರೈತರನ್ನು ಮಾತಾಡಿಸಿದ್ದೇವೆ, ಯಾವ ಹೊಲಕ್ಕೆ ಭೇಟಿ ನೀಡಿದ್ದೇವೆ, ಆ ಹೊಲದಲ್ಲಿ ಬಿತ್ತಿದ ಬೀಜ ಯಾವುದು, ಯಾವ ಕಂಪನಿಯದು, ಯಾವಾಗ ಬಿತ್ತನೆ ಮಾಡಲಾಗಿದೆ ಎಂಬಿತ್ಯಾದಿ ಯಾವ ವಿವರಗಳೂ ಅದರಲ್ಲಿಲ್ಲ. ಮಳೆಯಾಶ್ರಿತ ಪ್ರದೇಶದಲ್ಲಿ ಶೇಕಡ 40ರಿಂದ 50 ಹಾಗೂ ನೀರಾವರಿ ಪ್ರದೇಶದಲ್ಲಿ ಶೇಕಡ 60 - 70 ರಷ್ಟು ಹತ್ತಿ ಬೆಳೆ ನಾಶವಾಗಿದೆ ಎಂದು ವರದಿಯಲ್ಲಿ ನಮೂದಿಸಿ ಕೈತೊಳೆದುಕೊಂಡಿದ್ದಾರೆ ಅಷ್ಟೆ.



ಬೀಜದ ಪ್ಯಾಕೆಟ್ ಮೇಲೆ ಕ್ರಿಮಿಕೀಟಗಳಿಂದ ರಕ್ಷಣೆ ಕೊಡುತ್ತದೆಯೆಂದು ಕಂಪನಿ ಸುಳ್ಳು ಹೇಳಿರುವ ಕರಪತ್ರ

ಆದರೆ, ಇದಾದ ಕೆಲವೇ ದಿನಗಳಲ್ಲಿ ನಾಗರಿಕ ಸಮಾಜದ ಹತ್ತಿ ತಜ್ಞರ ಸ್ವತಂತ್ರ ತಂಡವೊಂದು ರಾಯಚೂರಿನ ಹತ್ತಿ ಹೊಲಗಳಿಗೆ ಭೇಟಿ ನೀಡಿತು. ಮಂಜುನಾಥ ಹೊಳಲು, ಪಿ. ಶ್ರೀನಿವಾಸವಾಸು, ವೆಂಕಟೇಶ್ ಪಟೇಲ್, ಹಫೀಜ್ ಉಲ್ಲಾ ಮುಂತಾದವರಿದ್ದ ಈ ತಂಡದ ನೇತೃತ್ವವನ್ನು ಕೃಷಿ ಇಲಾಖೆಯ ನಿವೃತ್ತ ಹೆಚ್ಚುವರಿ ನಿರ್ದೇಶಕ ಡಾ.ಎಚ್.ಆರ್.ಪ್ರಕಾಶ ವಹಿಸಿದ್ದರು. ಹತ್ತಿ ಹೊಲಗಳಲ್ಲಿ ಸುತ್ತಿಬಂದ ಈ ತಂಡ ರಾಯಚೂರು ಕೃಷಿ ವಿಶ್ವವಿದ್ಯಾಲಯದ ತಜ್ಞರ ತಂಡ ನೀಡಿದ ವರದಿಯನ್ನು ಸಂಪೂರ್ಣವಾಗಿ ಅಲ್ಲಗಳೆಯಿತು. "ಮಳೆಯಾಶ್ರಿತ ಮತ್ತು ನೀರಾವರಿ ಎರಡೂ ಪ್ರದೇಶಗಳಲ್ಲಿ ಬಿಟಿ ಹತ್ತಿ ಶೇಕಡ 80 ಕ್ಕಿಂತ ಜಾಸ್ತಿ ನಾಶವಾಗಿದೆ! ಇನ್ನೊಮ್ಮೆ ನಿಮ್ಮ ತಜ್ಞರ ತಂಡವನ್ನು ಹೊಲಗಳಿಗೆ ಕಳಿಸಿ" ಎಂದು ಆ ತಂಡ ಹೇಳಿತು. ಈ ತಂಡ ಸದ್ಯದಲ್ಲೇ ತಮ್ಮ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮತ್ತು ಕೃಷಿ ಸಚಿವ ಕೃಷ್ಣ ಭೈರೇಗೌಡರಿಗೆ ನೀಡಿ ಬಾಧಿತ ರೈತರಿಗೆ ಪರಿಹಾರವನ್ನು ಬಿಟಿ ಹತ್ತಿ ಬೀಜ ಮಾರಿದ ಕಂಪನಿಗಳಿಂದ ಕೊಡಿಸಬೇಕೆಂದು ಒತ್ತಾಯ ಮಾಡುವುದಾಗಿ ಹೇಳಿದೆ.

ಕೃಷಿ ವಿಜ್ಞಾನಿಗಳ ಕೆಲಸ ಏನು?


ಬೆಳೆ ನಷ್ಟವನ್ನು ಅಂದಾಜಿಸುವುದು ಕೃಷಿ ವಿಶ್ವವಿದ್ಯಾಲಯದ ಮತ್ತು ಕೃಷಿ ವಿಜ್ಞಾನಿಗಳ ಕೆಲಸ ಅಲ್ಲ, ನಾಲ್ಕು ಜನ ತಜ್ಞರ ತಂಡವೊಂದು ಇಡೀ ರಾಜ್ಯದ ಎಲ್ಲಾ ಹತ್ತಿ ಹೊಲಗಳಿಗೆ ಹೋಗಿ ಎಷ್ಟು ನಷ್ಟವಾಗಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ, ಅದು ಅವರ ಕೆಲಸವೂ ಅಲ್ಲ. ಅದು ಕೃಷಿ ಮತ್ತು ಕಂದಾಯ ಇಲಾಖೆಗಳ ಕೆಲಸ. ಈ ಇಲಾಖೆಗಳಿಗೆ ತಾಲೂಕು ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ, ಹಳ್ಳಿ ಮಟ್ಟದಲ್ಲಿ ಸಂಘಟನಾ ಸಂರಚನೆಗಳಿರುತ್ತವೆ. ಎರಡೂ ಇಲಾಖೆಗಳು ಸೇರಿ ಸಮೀಕ್ಷೆ ಮಾಡಿದರೆ ಕರಾರುವಕ್ಕಾದ ನಷ್ಟ ಕಂಡುಬರುತ್ತದೆ.

ಕೃಷಿ ವಿಶ್ವವಿದ್ಯಾಲಯಕ್ಕೆ, ಅಲ್ಲಿ ಕೆಲಸ ಮಾಡುವ ವಿಜ್ಞಾನಿಗಳಿಗೆ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಗಳಂತಹ ಬೇರೆಯದ್ದೇ ಕೆಲಸಗಳಿರುತ್ತವೆ. ಹತ್ತಿ ಬೆಳೆ ನಾಶವಾಗಿದೆ ಎಂಬ ಸುದ್ದಿ ಕಿವಿಗೆ ಮುಟ್ಟಿದಾಗ ಅವರು ಅದಕ್ಕೆ ಕಾರಣ ಏನು, ಪರಿಹಾರಗಳೇನು, ಬಿತ್ತಿದ ಬೀಜಗಳ ತಳಿಶುದ್ಧತೆ ಎಷ್ಟರಮಟ್ಟಿಗೆ ಇದೆ ಎಂಬುದರ ಕಡೆಗೆ ಅಧ್ಯಯನ, ಸಂಶೋಧನೆ ಮಾಡಬೇಕು. ಹುಳಾನೇ ಹಿಡಿಯುವುದಿಲ್ಲ ಎಂದು ಬಿಂಬಿಸಿದ್ದ ಬಿಟಿ ಹತ್ತಿಗೆ ಹುಳ ಯಾಕೆ ಹಿಡಿಯಿತು ಎಂಬುದನ್ನು ಸಂಶೋಧನೆ ಮಾಡಿ ಕಂಡುಕೊಳ್ಳಬೇಕು. ಬೀಜ ಮಾರಿದ ಬಹುರಾಷ್ಟ್ರೀಯ ಕಂಪನಿಗಳನ್ನು ಹೊಣೆಗಾರರನ್ನಾಗಿಸಿ ಸರ್ಕಾರಕ್ಕೆ ವರದಿ ಕೊಡಬೇಕು. ಅದನ್ನೆಲ್ಲಾ ಬಿಟ್ಟು ಎಷ್ಟು ಲಾಸು ಆಗಿದೆ ಅಂತ ಸರ್ವೆ ಮಾಡೋಕೆ ಹೋಗಿದ್ದರು ರಾಯಚೂರು ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳ ತಂಡ.


ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕು. ಗುಜರಾತಿನಲ್ಲಿ ಕೆಲವು ವರ್ಷಗಳ ಹಿಂದೆ ಬಿಟಿ ಹತ್ತಿ ಇದೇ ರೀತಿಯಲ್ಲಿ ಸರ್ವನಾಶ ಆಗಿ ಅಲ್ಲಿನ ಬಹುತೇಕ ರೈತರು ಕ್ರಿಮಿನಾಶಕ ಕುಡಿದು ಆತ್ಮಹತ್ಯೆ ಮಾಡಿಕೊಂಡರು. ಆಗ ಕೇಂದ್ರ ಹತ್ತಿ ಸಂಶೋಧನಾ ಸಂಸ್ಥೆ (ಸಿಐಸಿಆರ್) ಒಂದು ಅಧ್ಯಯನ ಮಾಡಿ ಮಳೆಯಾಶ್ರಿತ ಪ್ರದೇಶಕ್ಕೆ ಬಿಟಿ ಹತ್ತಿ ಸರಿಹೊಂದುವುದಿಲ್ಲ ಎಂದು ವರದಿ ಕೊಟ್ಟಿತ್ತು. ಈ ಶಿಫಾರಸ್ಸು ನಮ್ಮ ಕಣ್ಣ ಮುಂದಿದ್ದರೂ ರಾಯಚೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾಲಯಗಳು ತಮ್ಮ ಪ್ಯಾಕೇಜ್ ಆಫ್ ಪ್ರಾಕ್ಟೀಸ್ ವರದಿಯಲ್ಲಿ ಮಳೆಯಾಶ್ರಿತ ಪ್ರದೇಶದಲ್ಲೂ ಬಿಟಿ ಹತ್ತಿಯನ್ನು ಬೆಳೆಯಬಹುದು ಎಂದು ಶಿಫಾರಸ್ಸು ಮಾಡುವ ಮೂಲಕ ರೈತರನ್ನು ಹಾದಿ ತಪ್ಪಿಸಿದೆ.

"ದೇಶದ ಬಹುತೇಕ ಕೃಷಿ ವಿಶ್ವವಿದ್ಯಾಲಯಗಳು, ಅಲ್ಲಿ ಕೆಲಸ ಮಾಡುವ ಕೃಷಿ ವಿಜ್ಞಾನಿಗಳು ಮಾನ್ಸಾಂಟೋ ರೀತಿಯ ಬೃಹತ್ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಶಾಮೀಲಾಗಿ ಅನ್ನ ನೀಡುವ ರೈತರಿಗೆ ಅನ್ಯಾಯ ಮಾಡುವ ದೇಶದ್ರೋಹದ ಕೆಲಸ ಮಾಡುತ್ತಿವೆ" ಎಂದು ಜನ ಸಂಗ್ರಾಮ ಪರಿಷತ್ತಿನ ರಾಜ್ಯ ಕಾರ್ಯನಿರ್ವಾಹಕ ಅಧ್ಯಕ್ಷ ರಾಘವೇಂದ್ರ ಕುಷ್ಟಗಿ ಅವರ ಆರೋಪದಲ್ಲಿ ಸತ್ಯ ಇಲ್ಲದಿಲ್ಲ.

■ ಕೆ.ಎನ್. ವಿನೋದ್



ಉತ್ತರ ಕನ್ನಡ: ಅನರ್ಹತೆಯ ಅಡಕತ್ತರಿಯಲ್ಲಿ ಎಮ್ಮೆಲ್ಸಿ ಘೋಟನೇಕರ್!


ದೇಶಪಾಂಡೆ

ಉತ್ತರ ಕನ್ನಡ ವಿಧಾನ ಪರಿಷತ್ ಅಖಾಡದಲ್ಲಿ ಎದುಸಿರುಬಿಡುತ್ತಲೇ ಬಚಾವಾದ ಕಾಂಗ್ರೆಸ್ಸಿನ ಗಂಡಾಗುಂಡಿ ಪುಢಾರಿ ಎಸ್.ಎಲ್. ಘೋಟನೇಕರ್ ಮುಖದಲ್ಲಿ ಗೆಲುವಿನ ಕಳೆಯೇ ಕಾಣದಾಗಿದೆ! ಕೋಟಿ-ಕೋಟಿ ಕಾಸು ಸುರಿಸಿ ಪಡೆದಿರುವ ಎಮ್ಮೆಲ್ಸಿ ಸ್ಥಾನ ಕಾಪಾಡಿಕೊಳ್ಳಲು ಆತ ತಿಪ್ಪರಲಾಗ ಹಾಕಬೇಕಾಗಿ ಬಂದಿರುವುದು ಮೋಜಾಗಿದೆ! ಬಡಿದು-ಬೈದು ಸರ್ಕಾರಿ ನೌಕರನೊಬ್ಬನ ಪಳಗಿಸಲು ಘೋಟನೇಕರ್ ಮಾಡಿದ ಪಾತಕ ಆತನ ಎಮ್ಮೆಲ್ಸಿಗಿರಿಗೆ ಸಂಚಕಾರ ತಂದೊಡ್ಡಿದೆ! ಹಳಿಯಾಳದಲ್ಲಿ ಡಾನ್ ದೇಶಪಾಂಡೆಯ ದಾದಾಗಿರಿ ಗ್ಯಾಂಗಿನ ಸೇನಾಧಿಪತಿ ಎಂದೇ ಇವತ್ತಿಗೂ ಗುರುತಿಸಲ್ಪಡುವ ಈತ ಎಮ್ಮೆಲ್ಸಿಯಂಥ ದೊಡ್ಡ ಪೀಠಕ್ಕೇರಿದ ನಂತರವೂ ಪೂರ್ವಾಶ್ರಮದ ಕೀಳು ಕರಾಮತ್ತು ಮಾತ್ರ ಬಿಡಲೇ ಇಲ್ಲ!!!

ಒಂದು ಕಾಲದಲ್ಲಿ ಜೀವನ ಸಾಗಿಸಲಾಗದೇ ಅಂಡಲೆಯುತ್ತಿದ್ದ ಘೋಟನೇಕರ್ ಇವತ್ತು ಬರೋಬ್ಬರಿ 17.90 ಕೋಟಿಗೆ ತೂಗುತ್ತಾರೆ. ಅನಧಿಕೃತವಾಗಿ ಅಂದಾಜಿಸಿದರೆ ಆತ ಈ ಸುಳ್ಳು ಲೆಕ್ಕಾಚಾರಕ್ಕಿಂತ ಎಂಟ್ಹತ್ತು ಪಟ್ಟಾದರೂ ಹೆಚ್ಚು ಸ್ಥಿತಿವಂತ! ನಾಲ್ಕೈದು ಎಕರೆ ಜಮೀನಿನ ಸಾಮಾನ್ಯ ಕೃಷಿ ಕುಟುಂಬ ಘೋಟನೇಕರ್ ಒಡೆತನದಲ್ಲೀಗ 55 ಎಕರೆಗಿಂತಲೂ ಜಾಸ್ತಿ ಭೂಮಿಯಿದೆ. ದೊರೆ ದೇಶಪಾಂಡೆಯ ದಯೆಯಿಂದ ಘೋಟನೇಕರ್ ಭರ್ಜರಿ ಉದ್ಯಮಪತಿಯಾಗಿ ರೂಪಾಂತರಗೊಂಡಿರುವುದೇ ಒಂದು ರೋಚಕ ಕತೆ. ದೇಶಪಾಂಡೆ ಜನತಾದಳ ಪರ್ವದಲ್ಲಿ ಬೃಹತ್ ಕೈಗಾರಿಕಾ ಮಂತ್ರಿಯಾಗಿದ್ದಾಗ ಒಂದೆರಡು ಲಾರಿ ಖರೀದಿಸಿ ಮೈಸೂರು ಮಿನರಲ್ಸ್‌ನ ಕಬ್ಬಿಣದ ಅದಿರು ಸಾಗಾಟ ಶುರುಹಚ್ಚಿಕೊಂಡಿದ್ದ ಈತ ಎಂಟ್ಹತ್ತು ಮಜಬೂತ್ ಲಾರಿ-ಹ್ಯಾವಿ ವೆಹಿಕಲ್ಸ್‌ನ ಟ್ರಾನ್ಸ್‌ಪೋರ್ಟ್ ಕಿಂಗ್ ಆಗಿ ಅವತರಿಸಿದ್ದಾನೆ.


ಜಿಲ್ಲಾ ಮಧ್ಯವರ್ತಿ ಬ್ಯಾಂಕ್ (ಕೆಡಿಸಿಸಿ) ನಿರ್ದೇಶಕನಾಗಿ ಘೋಟನೇಕರ್ ಆಯ್ಕೆಯಾಗುತ್ತಲೇ ಆತನ ರಾಜಕೀಯ-ಆರ್ಥಿಕ ದೆಸೆಯೇ ಬದಲಾಗಿಬಿಟ್ಟಿತು. ಕೃಷಿ ಪ್ರಧಾನ ಪ್ರದೇಶವಾದ ಹಳಿಯಾಳದ ರೈತರ ಅಸಹಾಯಕತೆ ದೃಷ್ಟಿಯಲ್ಲಿಟ್ಟುಕೊಂಡು ಟ್ರ್ಯಾಕ್ಟರ್ ಏಜೆನ್ಸಿ ಪಡೆದಿದ್ದ ಘೋಟನೇಕರ್ 'ಟ್ರ್ಯಾಕ್ಟರ್ ಸಾಲ' ಕೊಡಲೆಂದೇ ಒಂದು ದೋಖಾ ಫೈನಾನ್ಸ್ ತೆರೆದಿದ್ದಾನೆ! ಕೆಡಿಸಿಸಿ ಬ್ಯಾಂಕಿನ ಅಧ್ಯಕ್ಷನೂ ಆಗಿರುವ ಈತ ಆ ಬಲದಿಂದ ತನ್ನ ಫೈನಾನ್ಸ್‌ನ ಹಣಕಾಸು ಸ್ಥಿತಿಗತಿ 'ಗ್ರಾಫ್' ಕೆಳಗಿಳಿಯದಂತೆ ಆಟ ಆಡುತ್ತಲೇ ಬಂದಿದ್ದಾನೆ.

ಚುನಾವಣಾ ಆಯೋಗಕ್ಕೆ ಘೋಟನೇಕರ್ ಸಲ್ಲಿಸಿರುವ ಅನುಮಾನಾಸ್ಪದ ಅಫಿಡವಿತ್‌ನಲ್ಲಿ ನಮೂದಾಗಿರುವ ಪ್ರಕಾರ ಬೆಳಗಾವಿ, ಹಳಿಯಾಳದಲ್ಲಿ ಆತನ ಮತ್ತಾತನ ಹೆಂಡತಿ ಹೆಸರಿನಲ್ಲಿ ಕೃಷಿ-ಕೃಷಿಯೇತರ ಜಮೀನಿದೆ. ಮೂರು ಕಡೆ ವಾಣಿಜ್ಯ ಕಟ್ಟಡಗಳಿವೆ. ಇದರಲ್ಲಿ ಒಂದು ಹಳಿಯಾಳದ ಮಧ್ಯವರ್ತಿ ಜಾಗದಲ್ಲಿರುವ 'ಲಕ್ಷ್ಮಣ ಪ್ಯಾಲೇಸ್'. ಈ ಬಿಲ್ಡಿಂಗ್‌ನಲ್ಲಿ ಎಮ್ಮೆಲ್ಸಿ ಸಾಹೇಬರು ಬಾರ್ ಅಂಡ್ ರೆಸ್ಟೋರೆಂಟ್ ನಡೆಸುತ್ತಾರೆ. ಬಾರ್ ಪಕ್ಕಾ ಅಕ್ರಮ ಆದರೂ ದಿನಕ್ಕೆ ಮೂರರಿಂದ ನಾಲ್ಕು ಲಕ್ಷದ ಹೆಂಡೋದ್ಯಮ ಈ ಬಾರಲ್ಲಿ ನಡೆಯುತ್ತದೆ. ಎಮ್ಮೆಲ್ಸಿ ಸಾಹೇಬರ ಬಾರ್ ಇದೆಂಬ ಕಾರಣಕ್ಕೆ ಅಧಿಕಾರಿಗಳು ಕಣ್ಮುಚ್ಚಿ ಕುಂತಿದ್ದಾರೆ; ಬಲಾಢ್ಯ ಮಂತ್ರಿ ದೇಶಪಾಂಡೆಯ ಆಪ್ತಾಪ್ತ ಸಖ ಬೇರೆ.

ಹಳಿಯಾಳದ ಸರ್ಕಾರಿ ಕಾಮಗಾರಿಗಳಿಗೂ ಎಮ್ಮೆಲ್ಸಿ ಘೋಟನೇಕರ್ ಬೇನಾಮಿ ಗುತ್ತಿಗೆದಾರ. ಮಗನ ಹೆಸರಲ್ಲೂ ಕಂಟ್ರಾಕ್ಟರಿಕೆ ನಡೆಯುತ್ತಿದೆ. ಗ್ರಾಮ ಪಂಚಾಯ್ತಿ ಸದಸ್ಯನಾಗುವ ಕನಿಷ್ಠ ಯೋಗ್ಯತೆಯೂ ಇಲ್ಲದ ಈ ಜಗಗಂಟ ಪುಂಡ ಎಮ್ಮೆಲ್ಸಿ ಆಗುತ್ತಿದ್ದಂತೆಯೇ ಮಾಡಿರುವ ಆಸ್ತಿ ವಿವರ ಆಘಾತಕಾರಿಯಾಗಿದೆ. ಈತನ ಬಳಿ ಇರುವ ಕಾರುಗಳ ಮೊತ್ತವೇ 3 ಕೋಟಿ 83 ಲಕ್ಷ!! 9 ಕೋಟಿ 83 ಲಕ್ಷದ ಬಂಗ್ಲೆ, ವಾಣಿಜ್ಯ ಬಿಲ್ಡಿಂಗ್, ಜಮೀನಿದೆ.

ಘೋಟನೇಕರ್‌ನ ಧರ್ಮಪತ್ನಿ 57.89 ಲಕ್ಷದ ಚರಾಸ್ತಿ 3.67 ಕೋಟಿಯ ಸ್ಥಿರಾಸ್ತಿಯ ಒಡತಿ. ಅಷ್ಟೇ ಅಲ್ಲ, ಈ ದಂಪತಿಗಳು ಗಣಿ ಧಣಿಗಳಿಗೆ ಫೈನಾನ್ಷಿಯರ್‌ಗಳು! ಯಲ್ಲಾಪುರದ ಶಾಸಕ ಶಿವರಾಮ ಹೆಬ್ಬಾರ್‌ಗೆ ಗಂಡ-ಹೆಂಡತಿ ಬರೋಬ್ಬರಿ 1,89,74,808 ರೂ. ಸಾಲ ನೀಡಿದ್ದಾರೆ. ಹೇಗಿದ್ದ ಘೋಟನೇಕರ್ ಹೇಗಾಗಿ ಹೋದ ಮಾರಾಯ್ರೆ ಅಂತಿದ್ದಾರೆ ಹಳಿಯಾಳದ ಜನರು....


ದೇಶಪಾಂಡೆಗೆ ಬ್ಲ್ಯಾಕ್‌ಮೇಲ್ ಮಾಡಿಯೇ ಕಾಂಗ್ರೆಸ್ ಟಿಕೆಟ್ ಪಡೆದು ಗೆದ್ದ ಘೋಟನೇಕರ್ ಒಂದರ್ಥದಲ್ಲಿ ಲಕ್ಕೀ. ಪ್ರತಿಷ್ಠೆ ಉಳಿಸಿಕೊಳ್ಳಲು ದೇಶಪಾಂಡೆ ಕೈಗಾರಿಕೋದ್ಯಮಿಗಳಿಂದ ಹಣ ತಂದು, ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಜಿಲ್ಲೆಯಾದ್ಯಂತ ಓಡಾಡಿ ಪ್ರಚಾರ ಮಾಡಿ ಘೋಟನೇಕರ್‌ನ ಗೆಲ್ಲಿಸಿಕೊಂಡಿದ್ದೂ ಆಗಿದೆ. ಆದರೆ ಅನಾಯಾಸವಾಗಿ ದಕ್ಕಿರುವ ಎಮ್ಮೆಲ್ಸಿ ಸ್ಥಾನ ಉಳಿಸಿಕೊಳ್ಳುವುದೇ ಘೋಟನೇಕರ್‌ಗೆ ಸಮಸ್ಯೆಯಾಗಿದೆ. ನಾಮಪತ್ರ ಸಲ್ಲಿಸುವಾಗ ತನ್ನ ಮೇಲಿದ್ದ ಕ್ರಿಮಿನಲ್ ಕೇಸ್


ಶಿವರಾಮ ಹೆಬ್ಬಾರ್

ಬುದ್ಧಿಪೂರ್ವಕವಾಗೇ ಚುನಾವಣಾ ಆಯೋಗಕ್ಕೆ ತಿಳಿಸದೇ ಆತ ಕಷ್ಟಕ್ಕೆ ಬಿದ್ದಿದ್ದಾನೆ.


2013ರಲ್ಲಿ ಶಾಸಕ ಘೋಟನೇಕರ್ ವಿರುದ್ಧ ಜೋಯಿಡಾದ ತಹಸೀಲ್ದಾರ್ ಚಿಕ್ಕಮಠ ಎಂಬಾತ ಕ್ರಿಮಿನಲ್ ದೂರು ದಾಖಲಿಸಿದ್ದರು. ತನ್ನ ಮೇಲೆ ಶಾಸಕ ಘೋಟನೇಕರ್ ಹಲ್ಲೆ ಮಾಡಿ ಬೆದರಿಸಿದ್ದಾರೆಂದು ಚಿಕ್ಕ ಮಠ ಪೊಲೀಸ್ ಕಂಪ್ಲೇಂಟಿನಲ್ಲಿ ಹೇಳಿದ್ದಾರೆ. ತಾನು ಮತ್ತು ತನ್ನ ಚೇಲಾಗಳು ಹೇಳಿದಂತೆ ಕೇಳುವಂತೆ ಘೋಟನೇಕರ್ ಚಿಕ್ಕಮಠಗೆ ಆಗಾಗ ಒತ್ತಡ ಹಾಕುತ್ತಲೇ ಇದ್ದ; ಕಾನೂನು ಧಿಕ್ಕರಿಸಿ ತಾನು ಹೇಳಿದ ಪಾತಕ ಕಾರ್ಯ ಮಾಡುವಂತೆ ಕಾಡುತ್ತಿದ್ದ. ಆದರೆ ಇದಕ್ಕೆ ಚಿಕ್ಕಮಠ ಬಗ್ಗಲಿಲ್ಲ, ಅಕ್ರಮ ಕೆಲಸ ತನ್ನಿಂದಾಗದೆಂದು ಖಡಾಖಂಡಿತ ಹೇಳಿದ್ದಾರೆ. ಇದರಿಂದ ಕೆರಳಿದ ಘೋಟನೇಕರ್ ತೋಳೇರಿಸಿ ಆ ಅಧಿಕಾರಿ ಮೇಲೆ ಬಿದ್ದಿದ್ದಾನೆ. ಹೊಡೆದು-ಬೈದು ಬೊಬ್ಬೆ ಹಾಕಿದ್ದಾನೆ. ಜತೆಯಲ್ಲಿದ್ದ ಘೋಟನೇಕರ್‌ನ ರೌಡಿ ಪಡೆಯು ಚಿಕ್ಕಮಠ ಮೇಲೆ ಮುಗಿಬಿದ್ದು ಹಲ್ಲೆ ಮಾಡಿದೆ.

ಕಂಗಾಲಾದ ಪಾಪದ ಸರ್ಕಾರಿ ನೌಕರ ಚಿಕ್ಕಮಠ ಬೇರೆ ದಾರಿಯೇ ಇಲ್ಲದೆ ನೇರೆ ಜೋಯಿಡಾ ಪೊಲೀಸ್ ಠಾಣೆಗೆ ಹೋಗಿ ಶಾಸಕ ಘೋಟನೇಕರ್ ಅಂಡ್ ಗೂಂಡಾ ಗ್ಯಾಂಗ್ ಮೇಲೆ ಕಂಪ್ಲೇಂಟು ಕೊಟ್ಟಿದ್ದಾರೆ. ರಾಜಿಗೆ ಹವಣಿಸಿದ ಖಾಕಿಗಳು ವಿಫಲರಾಗಿದ್ದಾರೆ; ಅನಿವಾರ್ಯವಾಗಿ ಶಾಸಕ ಮತ್ತವರ ಪಡೆ ಮೇಲೆ ಎಫ್‌ಐಆರ್ ದಾಖಲಿಸಿದ್ದಾರೆ. ಈ ಎಫ್‌ಐಆರ್ ರದ್ದು ಮಾಡಬೇಕೆಂದು ಎಮ್ಮೆಲ್ಸಿ ಘೋಟನೇಕರ್ ಹೈಕೋರ್ಟ್‌ಗೆ ಹೋಗಿದ್ದರು. ತಾನು ಸಾರ್ವಜನಿಕ ಸೇವಕನಾದ್ದರಿಂದ ತನ್ನ ಮೇಲೆ ಪೊಲೀಸ್ ದೂರು ದಾಖಲಿಸುವ ಮೊದಲು ಅಧಿಕಾರಿ ಸಕ್ಷಮ ಪ್ರಾಧಿಕಾರದಿಂದ ಪರವಾನಗಿ ಪಡೆಯಬೇಕಿತ್ತೆಂಬುದು ಘೋಟನೇಕರ್‌ನ ವಾದವಾಗಿತ್ತು, ಆದರೆ ಘೋಟನೇಕರ್‌ನ ವಾದ ಹೈಕೋರ್ಟ್ ತಿರಸ್ಕರಿಸಿತು; ಎಫ್‌ಐಆರ್ ರದ್ಧತಿಗೆ ಸಮ್ಮತಿಸಲಿಲ್ಲ ಹೈಕೋರ್ಟ್. ಈ ಕೇಸ್ ಘೋಟನೇಕರ್‌ಗೆ ಮಗ್ಗಲು ಮುಳ್ಳಾಗಿ ಕಾಡತೊಡಗಿತ್ತು, ನಾಮಪತ್ರ ಕೊಡುವ ಹೊತ್ತಲ್ಲಿ ಈ ಕ್ರಿಮಿನಲ್ ಕೇಸ್ ಬಗ್ಗೆ ಅಫಿಡವಿತ್ ಸಲ್ಲಿಸಿದರೆ


ಸುನೀಲ್ ಹೆಗಡೆ

ಗಂಡಾಂತರ ಎದುರಾಗಬಹುದೆಂಬ ಭಯ ಆತನ ಬಾಧಿಸತೊಡಗಿತ್ತು. ವಿರೋಧಿಗಳಿಗೆ ಕಾಂಗ್ರೆಸ್ ಕ್ಯಾಂಡಿಡೇಟ್ ಕ್ರಿಮಿನಲ್ ಎಂದು ಮೂದಲಿಸಲು ಅವಕಾಶವಾಗುತ್ತದೆಂಬ ಕಾರಣಕ್ಕೇ ಘೋಟನೇಕರ್ ಸದ್ರಿ ಪ್ರಕರಣ ಪ್ರಜ್ಞಾಪೂರ್ವಕವಾಗಿ ಆಯೋಗದಿಂದ ಮರೆಮಾಚಿದ್ದ.

ಆದರೆ ಜಗದೀಶ್ ಬಿರ್ಕೋಡಿಕರ್ ಎಂಬ ಚಿಡ್ಡಿ ನ್ಯಾಯವಾದಿ ಘೋಟನೇಕರ್‌ನ ಜೋಯಿಡಾ ಕ್ರಿಮಿನಲ್ ಕೇಸ್ ಎತ್ತಿಯಾಡಿಬಿಟ್ಟರು. ಆಗ ಕಂಗಾಲಾದ ಘೋಟನೇಕರ್ ತನಗದು ಗೊತ್ತೇ ಇರಲಿಲ್ಲ, ಮರೆತೇಹೋಗಿತ್ತೆಂದು ನಾಟಕ ನಡೆಸಿದರು. ಈ ಕೇಸನ್ನು ಸಿಆರ್‌ಪಿಸಿ 197ರ ಅಡಿಯಲ್ಲಿ ರದ್ದು ಮಾಡುವಂತೆ ಹೈಕೋರ್ಟಿಗೆ ಹೋಗಿ ಸೋತುಬಂದಿದ್ದ ಘೋಟನೇಕರ್‌ಗೆ ಕೇಸಿನ ನೆನಪಿಲ್ಲವೆಂದರೆ ನಂಬಲು ಸಾಧ್ಯವಾ? ಇಲ್ಲೂ ಎಡವಿದ ಆತ "ನಾನು ಮೂರನೇ ಆರೋಪಿ... ಹಾಂಗಾಗಿ ಅಷ್ಟು ಸೀರಿಯಸ್ ಪ್ರಕರಣ ಅಲ್ಲ..." ಎಂದು ಸಬೂಬು ಹೇಳತೊಡಗಿದ. ಇಲ್ಲಿ ಎಷ್ಟನೇ ಆರೋಪಿ ಎಂಬುದು ಮುಖ್ಯ ಅಲ್ಲವೇ ಅಲ್ಲ; ಕ್ರಿಮಿನಲ್ ಕೇಸ್ ಸರದಾರ ಎಂಬುದಷ್ಟೇ ಮಹತ್ವದ್ದು!!


ಘೋಟನೇಕರ್

ಇದನ್ನೇ ಜಿಲ್ಲಾಧಿಕಾರಿ ಕಂ ಚುನಾವಣಾಧಿಕಾರಿ ಉಜ್ವಲ್‌ಕುಮಾರ್ ಘೋಷ್ ಎದುರು ಬಿರ್ಕೋಡಿಕರ್ ಮಂಡಿಸಿದ್ದರು. ಘೋಟನೇಕರ್ ಸುಳ್ಳು ಅಫಿಡವಿತ್ ಕೊಟ್ಟಿದುದರಿಂದ ಆತನ ನಾಮಪತ್ರ ತಿರಸ್ಕರಿಸಬೇಕೆಂದು ಬೇಡಿಕೆ ಇಟ್ಟಿದ್ದರು. ಆದರೆ ಕಾನೂನಿಷ್ಠ ಅಧಿಕಾರಿ ಎಂದು ಪೋಸು ಕೊಡುವ ಡಿಸಿ ಸಾಹೇಬರಿಗೆ ಘೋಟನೇಕರ್‌ನ ಪಾತಕ ಗಂಭೀರ ಅಪರಾಧವಾಗಿ ಕಾಣಲೇ ಇಲ್ಲ, ಕೊನೆಗೆ ಘೋಟನೇಕರ್‌ನ ಆಯ್ಕೆಯನ್ನಾದರೂ ತಡೆಹಿಡಿಯುವಂತೆ ಬಿರ್ಕೋಡಿಕರ್ ಬೇಡಿಕೊಂಡಿದ್ದರು. ಯಾವುದೂ ಆಗಿಲ್ಲ, ಈಗಾತ ಹೈಕೋರ್ಟ್ ಮೊರೆ ಹೋಗುವ ಸಿದ್ಧತೆಯಲ್ಲಿದ್ದಾರೆ. ಸೋತ ಕ್ಯಾಂಡಿಡೇಟ್‌ಗಳಲ್ಲಿ ಒಬ್ಬ ಪೇಪರ್ ಟೈಗರ್ ಅಂತೂ ಈ ಕೇಸ್ ಹಿಡಿದುಕೊಂಡು ಘೋಟನೇಕರ್ ಮತ್ತವನ ಬಾಸ್ ದೇಶಪಾಂಡೆಗೆ ಮಣ್ಣು ಮುಕ್ಕಿಸಲು ಸ್ಕೆಚ್ ಹಾಕುತ್ತಿದ್ದಾರೆ. ನ್ಯಾಯಾಂಗ ವಲಯದಲ್ಲಿ ತರತರದ ಸಖ್ಯ ಹೊಂದಿರುವ ಈ ನ್ಯಾಯವಾದಿ ಘೋಟನೇಕರ್‌ನ ನಿದ್ದೆಗೆಡಿಸುತ್ತಿದ್ದಾರೆ. ಕಡು ಶತ್ರು ಘೋಟನೇಕರ್‌ನನ್ನು ಈ ಬಾರಿಯಾದರೂ ಹಣಿಯಲೇಬೇಕೆಂದು ಮಾಜಿ ಶಾಸಕ ಸುನೀಲ್ ಹೆಗಡೆ ಹಠಕ್ಕೆ ಬಿದ್ದು ಅನರ್ಹತೆ ಅಸ್ತ್ರ ಎತ್ತಿಕೊಂಡಿದ್ದಾನೆ. ದೂರುದಾರ ಬಿರ್ಕೋಡಿಕರ್ ಹಿಂದಿರುವ ಶಕ್ತಿ ಇದೇ ಸುನೀಲ ಹೆಗಡೆ.

ಘೋಟನೇಕರ್ ಏನೋ ಮಾಡಲು ಹೋಗಿ ಇನ್ನೇನೋ ಮಾಡಿದ್ದಾರೆ. ಶಾಸಕತ್ವಕ್ಕೇ ಸಂಚಕಾರ ತರುವಂಥ ಭಾನ್ಗಡಿ ಆತ ಮಾಡಿರುವುದಂತೂ ಖರೆ. ಸುಳ್ಳು ಅಫಿಡವಿತ್ ಚುನಾವಣಾ ಆಯೋಗಕ್ಕೆ ಸಲ್ಲಿಸುವುದು ಅಕ್ಷಮ್ಯ. ಹೈಕೋರ್ಟ್‌ಗೆ ಕೇಸ್ ಹೋದರೆ ಘೋಟನೇಕರ್‌ಗೆ ಗಂಡಾಂತರ ಖಂಡಿತ ಎಂದು ರಾಜಕೀಯ ವಿಶ್ಲೇಷಕರು ವ್ಯಾಖ್ಯಾನಿಸುತ್ತಿದ್ದಾರೆ. ಕ್ರಿಮಿನಲ್ ರಾಜಕಾರಣವನ್ನೇ ದಂಧೆ ಮಾಡಿಕೊಂಡಿರುವ ಘೋಟನೇಕರ್‌ಗೆ ಗೆದ್ದರೂ ಖುಷಿ, ಸಂಭ್ರಮ ಪಡದಂತಾಗಿದೆ, ಪಾಪ!


ಮಾಡಿದ್ದುಣ್ಣೋ ಮಹರಾಯ!!


■ ನಹುಷ

ಧಾರವಾಡ: ಪಂಚಾಯತಿ ಫೈಟಿಗೆ ರಂಗತಾಲೀಮು

ಧಾರವಾಡದ ಎಂಎಲ್ಸಿ ಚುನಾವಣೆ ಮಟ್ಟಿಗೆ ಎಲ್ಲರೂ ನಿರೀಕ್ಷಿಸಿದ ಫಲಿತಾಂಶವೇ ಹೊರಬಿದ್ದಿದೆ. ಯಾವಾಗ ಬಿಜೆಪಿಯ ಜಗದೀಶ್ ಶೆಟ್ಟರ್ ತನ್ನ ತಮ್ಮ ಪ್ರದೀಪ್ ಶೆಟ್ಟರ್‌ನ ಗೆಲುವಿಗೋಸ್ಕರ ಜೆಡಿಎಸ್ ಹೊರಟ್ಟಿಯೊಂದಿಗೆ ಒಳಒಪ್ಪಂದ ಮಾಡಿಕೊಂಡು ವಾಗೀಶ್ ಪ್ರಸಾದ್‌ನಂತಹ ಡಮ್ಮಿ ಕ್ಯಾಂಡಿಡೇಟನ್ನು ಹಾಕಿಸಿಕೊಂಡನೊ, ಯಾವಾಗ ಕಾಂಗ್ರೆಸ್ ಪಾರ್ಟಿಯವರು ತಾವೇ ಅಧಿಕೃತವಾಗಿ ಬಿ-ಫಾರಂ ಕೊಟ್ಟಿದ್ದ ನಾಗರಾಜ್ ಛಬ್ಬಿಯನ್ನೇ ಕಣದಿಂದ ನಿವೃತ್ತಿಗೊಳಿಸಿದರೋ ಆಗಲೇ ಎಲ್ಲರಿಗೂ ಸ್ಪಷ್ಟವಾಗಿ ಹೋಗಿತ್ತು, ಎರಡು ಸ್ಥಾನದಲ್ಲಿ ಮೊದಲನೆಯದ್ದನ್ನು ಕಾಂಗ್ರೆಸ್ ಗೆದ್ದುಕೊಂಡರೆ, ಎರಡನೆಯದು ಪ್ರದೀಪ್ ಶೆಟ್ಟರ್ ಪಾಲಾಗುತ್ತದೆ ಅಂತ. ಆದರೆ ಶೆಟ್ಟರ್‌ಗೆ ಬಿಸಿ ಮುಟ್ಟಿಸಲೆಂದು ಯಡ್ಡಿ ಬಂಡಾಯ ಅಭ್ಯರ್ಥಿಗಳನ್ನು ಹೇರಿದ್ದರಿಂದ ಮತ್ತು ರೈತಸಂಘದಿಂದ ಕಳಸಾ-ಬಂಡೂರಿ ಹೋರಾಟದ ಸಿದ್ದು ತೇಜಿ ಒಂಚೂರು ಪ್ರತಿರೋಧ ಒಡ್ಡಿದ್ದರಿಂದ ಕೊನೇ ಘಳಿಗೆಯಲ್ಲಿ ತುಸು ಆತಂಕ ಮನೆ ಮಾಡಿದ್ದನ್ನು ಬಿಟ್ಟರೆ ಎಲ್ಲವೂ ಪೂರ್ವನಿಗದಿಯಂತೆಯೇ ನಡೆದಿದೆ. ಧಾರವಾಡದ ಮತ ಎಣಿಕೆಯಲ್ಲಿ ಅಚ್ಚರಿ ಪಡುವಂತದ್ದು ಏನಾದರು ಇದ್ದರೆ ಅದು ಅಭ್ಯರ್ಥಿಗಳು ಗಳಿಸಿದ ಮತಗಳ ಸಂಖ್ಯೆಯಲ್ಲಿ ಅಲ್ಲ, ತಿರಸ್ಕೃತಗೊಂಡ ಮತಗಳ ಸಂಖ್ಯೆಯಲ್ಲಿ! ಹೌದು, ಧಾರವಾಡ ಕ್ಷೇತ್ರದಿಂದ ಬರೋಬ್ಬರಿ 750 ಮತಗಳು ತಿರಸ್ಕೃತಗೊಂಡಿವೆ. ಇನ್ನೂ ಸೋಜಿಗದ ಸಂಗತಿಯೆಂದರೆ ಈ ಸಂಖ್ಯೆ ಜೆಡಿಎಸ್‌ನ ವಾಗೀಶ್ ಪ್ರಸಾದ್ ಗಳಿಸಿದ ಒಟ್ಟಾರೆ (224) ಮತಗಳಿಗಿಂತ ಮೂರುಪಟ್ಟು ಜಾಸ್ತಿ!!

ಇಲ್ಲಿ ಯೋಚಿಸಬೇಕಿರುವುದು ಜೆಡಿಎಸ್‌ನ


ಜಗದೀಶ್ ಶೆಟ್ಟರ್


ಬಸವರಾಜ ಹೊರಟ್ಟಿ


ಹೀನಾಯಸ್ಥಿತಿಯನ್ನಲ್ಲ, ನಮ್ಮ ರಾಜಕಾರಣದ ತಳಮಟ್ಟದ ಜನಪ್ರತಿನಿಧಿಗಳಲ್ಲಿ ಇರುವ ಕಾಮನ್‌ಸೆನ್ಸನ್ನು. ವೋಟ್ ಮಾಡುವುದು ಹೇಗೆ ಎಂಬ ಕನಿಷ್ಠ ಜ್ಞಾನವೂ ಇಲ್ಲದವರನ್ನು ನಾವು ಜನಪ್ರತಿನಿಧಿಗಳನ್ನಾಗಿ ಹೊಂದಿದ್ದೇವೆ ಎಂಬುದು ನಿಜಕ್ಕೂ ಅವಮಾನಕರ ಸಂಗತಿ. ಇದು ಕೇವಲ ತಳಮಟ್ಟದ ರಾಜಕಾರಣಿಗಳಲ್ಲಿ ಮಾತ್ರವಲ್ಲ, ನಮ್ಮ ಘಟಾನುಘಟಿ ರಾಜಕಾರಣಿಗಳ ಜನರಲ್ ನಾಲೆಡ್ಜ್ ಇದಕ್ಕಿಂತ ಅದ್ಭುತವಾಗೇನೂ ಇಲ್ಲ.

ಹಣ ಕೊಟ್ಟವರ ಋಣ ತೀರಿಸಲು ಮೊದಲನೇ ಪ್ರಾಶಸ್ತ್ಯದ ಮತವನ್ನೇ ಇಬ್ಬರಿಗೆ ಒತ್ತಿರೋದು, ನಾನು ನಿಮಗೇ ಮತ ಹಾಕಿದ್ದೇನೆ ಎಂದು ಸಾಬೀತು ಮಾಡಲು ಮೊಬೈಲ್‌ನಲ್ಲಿ ಸೆರೆ ಹಿಡಿಯೋದು, ಗುಪ್ತಮತದಾನದ ಅರಿವೂ ಇಲ್ಲದೇ ಬಹಿರಂಗವಾಗಿ ಮತ ಪ್ರದರ್ಶಿಸುವುದು ಇಂತಹ ಹಲವು ಪ್ರಕರಣಗಳಿಗೆ ಈ ಚುನಾವಣೆ ಸಾಕ್ಷಿಯಾಯಿತು.

ತಾಪಂ ತಾಲೀಮು ಶುರು

ಈಗಷ್ಟೇ ಚುನಾವಣೆ ಫಲಿತಾಂಶ ಹೊರಬಿದ್ದಿದೆ. ಆದರೆ ರಾಜಕಾರಣಿಗಳು ಆದಾಗಲೇ ಲೋಕಲ್ ಕದನದ ತಯಾರಿಯಲ್ಲಿ ತೊಡಗಿಕೊಂಡಿದ್ದಾರೆ. ಇನ್ನೇನು ಕೆಲವೇ ದಿನಗಳಲ್ಲಿ ಎದುರಾಗಲಿರುವ ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳ ತಾಲೀಮು ಧಾರವಾಡದಲ್ಲಿ ರಂಗೇರಲು ಶುರುವಾಗಿದೆ. ಧಾರವಾಡ ಜಿಲ್ಲೆಯಲ್ಲಿ 22 ಜಿಲ್ಲಾ ಪಂಚಾಯತಿ ಸ್ಥಾನಗಳಿವೆ ಹಾಗೂ 82 ತಾಲೂಕು ಪಂಚಾಯತಿ ಸದಸ್ಯರಿದ್ದಾರೆ. ಕುಂದಗೋಳ-15, ಧಾರವಾಡ-24, ಕಲಘಟಗಿ 14, ಹುಬ್ಬಳ್ಳಿ 15, ನವಲಗುಂದ 14 ಹೀಗೆ 5 ತಾಲೂಕುಗಳಿಂದ 82 ತಾ.ಪಂ. ಸದಸ್ಯರು ಆಯ್ಕೆಗೊಳ್ಳಬೇಕಾಗಿದೆ. 221 ಹಳ್ಳಿಗಳು ಈ ವ್ಯಾಪ್ತಿಗೆ ಬರುತ್ತವೆ.

ಕಲಘಟಗಿ ಕ್ಷೇತ್ರದಿಂದ ಸಂತೋಷ್ ಲಾಡ್, ಕುಂದಗೋಳ ಕ್ಷೇತ್ರದಿಂದ ಸಿ.ಎಸ್. ಶಿವಳ್ಳಿ, ಧಾರವಾಡ ಗ್ರಾಮೀಣ ಕ್ಷೇತ್ರದಿಂದ ವಿನಯ ಕುಲಕರ್ಣಿ, ಹುಬ್ಬಳ್ಳಿ-ಧಾರವಾಡ ಪೂರ್ವ (ಮೀಸಲು) ಪ್ರಸಾದ ಅಬ್ಬಯ್ಯ ಕಾಂಗ್ರೆಸಿನಿಂದ ಆಯ್ಕೆಯಾದ ನಾಲ್ವರು ಶಾಸಕರಿದ್ದರೆ, ನವಲಗುಂದ ಕ್ಷೇತ್ರದಿಂದ ಜೆಡಿಎಸ್‌ನ ಎನ್.ಎಚ್.ಕೋನರೆಡ್ಡಿ ಆಯ್ಕೆಯಾಗಿದ್ದಾರೆ. ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ಕ್ಷೇತ್ರದಿಂದ ಜಗದೀಶ್ ಶೆಟ್ಟರ್, ಹು-ಧಾ ಪಶ್ಚಿಮ ಕ್ಷೇತ್ರದಿಂದ ಅರವಿಂದ ಬೆಲ್ಲದ ಶಾಸಕರಾಗಿ ಬಿಜೆಪಿಯನ್ನು ಪ್ರತಿನಿಧಿಸುತ್ತಿದ್ದಾರೆ. ಇನ್ನು ಐದು ಎಂಎಲ್‌ಸಿಗಳ ಪೈಕಿ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್‌ನ ಬಸವರಾಜ ಹೊರಟ್ಟಿ ಪದವೀಧರ ಕ್ಷೇತ್ರದಿಂದ ಬಿಜೆಪಿಯ ಪ್ರೊ. ಸಂಕನೂರು



ಹೀರೋಗಳೆಂದರೆ ನಮ್ಮ ವೀಕ್ಷಕರಿಗೆ ದೇವಮಾನವರು. ತಮ್ಮನ್ನು ನಂಬಿದವರಿಗಾಗಿ-ಸಂಬಂಧಿಕರಿಗಾಗಿ ಏನೆಲ್ಲವನ್ನೂ ತ್ಯಾಗ ಮಾಡುವವರು. ಆದರೆ ನಿಜಜೀವನದಲ್ಲಿ? ಅರಿತೊ, ಅರಿಯದೆಯೋ ಕೆಲವೊಂದು 'ಚಿಲ್ರೆ ತಪ್ಪು'ಗಳನ್ನು ಮಾಡಿಬಿಡುತ್ತಾರೆ ಇಲ್ಲವೇ ತಮ್ಮ ರಕ್ತಸಂಬಂಧಿಗಳು ಮಾಡುವ ತಪ್ಪುಗಳನ್ನು ಸರಿಪಡಿಸಲಾಗದೇ ಜಾಣ ಮೌನ ಪ್ರದರ್ಶಿಸುತ್ತಾರೆ. ಚಾಲೆಂಜಿಂಗ್ ಸ್ಟಾರ್ ದರ್ಶನ್‌ಗೆ ಸಂಬಂಧಿಸಿದ ಒಂದೆರಡು ಘಟನೆಗಳು ಇಲ್ಲಿವೆ.. ಇದರೊಂದಿಗೆ ದರ್ಶನ್ ಬಹಳ ನಂಬಿ ಮೋಸಹೋದ ಗೆಳೆಯನ ಬಗ್ಗೆಯೂ ಹಪಹಪಿಸಿದ್ದಾರೆ. ಅದರ ಬಗ್ಗೆಯೂ ಒಂದಿಷ್ಟು ಇಲ್ಲಿದೆ...


ದರ್ಶನ್ ಬೆನ್ನಿಗೆ ಇರಿದೋರ‍್ಯಾರು?


ಕೊಡಗಿನ ಗೋಣಿಕೊಪ್ಪಲಿನ ಸಮೀಪದಲ್ಲಿ ಹಳ್ಳಿಘಟ್ಟ ಗ್ರಾಮವಿದೆ. ಅದು ನಟ ದರ್ಶನ್ ಅವರ ತಾಯಿ ಮೀನಾ ಶ್ರೀನಿವಾಸ್ ಅವರ ತವರೂರು. ಅಲ್ಲೀಗ ತವರಿನ ನೆನಪಾಗಿ ಅವರ ಸೋದರ ಚಾಮರಾಜ ನಾಯ್ಡು ವಾಸವಿದ್ದಾರೆ. ಮೀನಮ್ಮನ ಹೆತ್ತವರಿಗೆ ಮೂರು ಹೆಣ್ಣು ಮಕ್ಕಳು, ಒಬ್ಬನೇ ಗಂಡುಮಗ. ಹಿರಿಯ ಮಗಳೇ ಮೀನಮ್ಮ. ಎರಡನೆಯವಳು ಪಾರ್ವತಿ, ಮೂರನೆಯವಳು ವಿಮಲ. ಚಾಮರಾಜ ನಾಯ್ಡು ಈ ಮೂವರಿಗೂ ಹಿರಿಯಣ್ಣ. ಆತ ತನ್ನ ಪತ್ನಿ ಹಾಗೂ ಮಕ್ಕಳೊಂದಿಗೆ ಹಳ್ಳಿಘಟ್ಟ ಗ್ರಾಮದಲ್ಲಿ ವಾಸವಾಗಿದ್ದಾರೆ.

ಮೀನಮ್ಮ, ಪಾರ್ವತಿ ಹಾಗೂ ವಿಮಲ ಮೂವರಿಗೂ ವಿವಾಹವಾಗಿದ್ದು ಇವರೆಲ್ಲರೂ ತಮ್ಮ ಸಂಸಾರಗಳೊಂದಿಗೆ ವಾಸವಾಗಿದ್ದಾರೆ. ಮೀನಮ್ಮನವರ ಪತಿ ತೂಗುದೀಪ ಶ್ರೀನಿವಾಸ್ ತೀರಿಕೊಂಡಿದ್ದಾರೆ. ಆದರೆ ದರ್ಶನ್, ದಿನಕರ್‌ರಂಥ ಸೂಪರ್ ಸ್ಟಾರ್ ಮತ್ತು ಸೂಪರ್ ನಿರ್ಮಾಪಕ ಮಕ್ಕಳಿದ್ದು, ಉಳಿದೆಲ್ಲರಿಗಿಂತ ಮೀನಮ್ಮ ಆರ್ಥಿಕವಾಗಿ ಹೆಚ್ಚು ಸುಖವಾಗಿದ್ದಾರೆ.

ಇಷ್ಟಿದ್ದರೂ ಈಯಮ್ಮ ಮೀನಮ್ಮ ತವರಿನ ಆಸ್ತಿಯಲ್ಲಿ ತಮ್ಮ ಪಾಲು ಕೇಳುತ್ತಿದ್ದಾರೆ! ತಮ್ಮ ಜೊತೆಗೆ ತಮ್ಮ ತಂಗಿಯರಾದ ಪಾರ್ವತಿ ರವಿಕುಮಾರ್ ಮತ್ತು ವಿಮಲ ಮಕರಂದ ನಾಯ್ಡು ಅವರನ್ನೂ ಕರೆದೊಯ್ದು ಅವರಿಗೂ ಭಾಗ ಕೊಡಬೇಕೆಂದು ಸೋದರ ಚಾಮರಾಜ ನಾಯ್ಡುಗೆ ತಾಕೀತು ಮಾಡಿದ್ದಾರೆ! ಅಲ್ಲಿ ಹತ್ತು ಸೆಂಟ್ ಜಾಗವಿದ್ದು, ಅದರಲ್ಲಿ ಚಾಮರಾಜ ನಾಯ್ಡು ಒಂದು ಮನೆ ಕಟ್ಟಿಕೊಂಡಿದ್ದರಂತೆ. ಅದನ್ನು ಡೆಮಾಲಿಷ್ ಮಾಡಿ, ಆ ಜಾಗದಲ್ಲಿ ತಾವು ಮೂವರಿಗೂ ಪಾಲು ಕೊಡಬೇಕೆಂದು ಆಗ್ರಹಿಸಿದ್ದಾರೆ. ಚಾಮರಾಜ ನಾಯ್ಡು ಇದಕ್ಕೆ ಒಪ್ಪದೆ ಗಲಾಟೆ ಮಾಡಿದ್ದಾರೆ. ನೀವೆಲ್ಲಾ ಶ್ರೀಮಂತರು, ನಾನು ಬಡವ ಎಂದೆಲ್ಲಾ ಗೋಗರೆದರಂತೆ ನಾಯ್ಡು. ಆದರೂ ಕನಿಕರ ತೋರದೆ ಮೀನಮ್ಮ ತಾವೇ ಮುಂದೆ ನಿಂತು ಜನರನ್ನು ಬಿಟ್ಟು ಆ ಮನೆಯನ್ನು ಕೆಡವಿದ್ದಾರೆ. ಇದರಿಂದ ಕಂಗಾಲಾದ ಚಾಮರಾಜ ನಾಯ್ಡು ಪೊನ್ನಂಪೇಟೆ ಪೊಲೀಸ್ ಠಾಣೆಗೆ ತೆರಳಿ ತಂಗಿ ಮೀನಾ ಶ್ರೀನಿವಾಸ್ ವಿರುದ್ಧ ದೂರು ಬರೆದು ಕೊಟ್ಟಿದ್ದಾರೆ. ಆದರೆ ಅಲ್ಲಿನ ಪೊಲೀಸರು ದರ್ಶನ್ ತಾಯಿ ಎಂಬ ಕಾರಣಕ್ಕೆ ದೂರು ದಾಖಲಿಸಿಕೊಳ್ಳದೆ ಮೀನಮ್ಮನಿಂದ ಕಾಣಿಕೆ ಸ್ವೀಕರಿಸಿ ಸೈಲೆಂಟಾಗಿದ್ದಾರೆ. ಪೊನ್ನಂಪೇಟೆ ಪೊಲೀಸರ ಈ ದುರ್ನಡತೆಯ ವಿರುದ್ಧ ಚಾಮರಾಜ ನಾಯ್ಡು ಪೊನ್ನಂಪೇಟೆಯ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ದೂರು ನೀಡಿದ್ದಾರೆ. ಮೊನ್ನೆ ಡಿಸೆಂಬರ್ 24, 2015ರಂದು ನ್ಯಾಯಾಲಯವು ಸ್ಥಳೀಯ ಪೊಲೀಸರಿಗೆ ಛೀಮಾರಿ ಹಾಕಿದಾಗ ಪೊಲೀಸರು ಮೀನಾ ಶ್ರೀನಿವಾಸ್, ವಿಮಲ ಮಕರಂದ ನಾಯ್ಡು, ಪಾರ್ವತಿ ರವಿಕುಮಾರ್ ಮೂವರು ಸೋದರಿಯರ ವಿರುದ್ಧ ಎಫ್‌ಐಆರ್ ಹರಿದಿದ್ದಾರೆ!

ಸೂಪರ್‌ಸ್ಟಾರ್ ದರ್ಶನ್ ಚಿತ್ರವೊಂದಕ್ಕೆ ಐದು ಕೋಟಿಗೂ ಮೀರಿ ಪಗಾರ ಪಡೆಯುತ್ತಾರೆ. ದಿನಕರ್ ಸ್ಟಾರ್ ನಿರ್ಮಾಪಕ ಆಗಿದ್ದು ಅವರೂ ಕೈತುಂಬ ದುಡಿಯುತ್ತಾರೆ. ಇದರ ಮಧ್ಯೆ ಮೀನಮ್ಮ 'ಮದುವೆಯ ಮಮತೆಯ ಕರೆಯೋಲೆ' ಎಂಬ ಸಿನಿಮಾವನ್ನು ನಿರ್ಮಿಸಿದ್ದಾರೆ. ಇವರ ಹಿಂದಿನ ನಿರ್ಮಾಣದ 'ಜೊತೆ ಜೊತೆಯಲಿ' ಚಿತ್ರ 25 ವಾರ ಓಡಿ ಅಪಾರ ಹಣ ಸಂಪಾದಿಸಿತ್ತು.





ವಸ್ತುಸ್ಥಿತಿ ಹೀಗಿರುವಾಗ ಕೋಟ್ಯಾಧೀಶೆ ಮೀನಮ್ಮ ಕೇವಲ 10 ಸೆಂಟ್ ಜಾಗದ ಕಾಲು ಭಾಗಕ್ಕೆ ಒಡಹುಟ್ಟಿದ ಸೋದರನಿಗೆ ಈ ಪರಿಯ ಕಾಟ ಕೊಡಬಹುದಿತ್ತೆ? ಹೋಗಲಿ, ಮೀನಮ್ಮನಿಗೆ ತಮ್ಮ ಪಾಲಿನ ಆಸ್ತಿಯನ್ನು ದಕ್ಕಿಸಿಕೊಳ್ಳಲೇ ಬೇಕು ಎಂಬ ಆಸೆ ಇದ್ದರೆ, ಅದನ್ನು ಕಾನೂನು ರೀತಿ ಹೋರಾಡಿ ನ್ಯಾಯವಾಗಿ ಪಡೆದುಕೊಳ್ಳಬಹುದಿತ್ತಲ್ಲವೆ? ಇಷ್ಟೆಲ್ಲ ರಾದ್ಧಾಂತ ಮಾಡುವ ಅವಶ್ಯಕತೆ ಇತ್ತೆ? ಈಗ ಕೋರ್ಟಿಗೆ ಅಲೆಯುವ ಪರಿಸ್ಥಿತಿ ಬಂದಿದೆ ಮೀನಮ್ಮರಿಗೆ! ಗಮನಾರ್ಹ ವಿಚಾರವೆಂದರೆ, ಅಮ್ಮನೂ ಸೋದರ ಮಾವನೂ ಹೀಗೆ ಕಚ್ಚಾಡುತ್ತಿದ್ದರೆ ನಟ ದರ್ಶನ್ ಮಾತ್ರ ತುಟಿಕ್‌ಪಿಟಿಕ್ ಎಂದಿಲ್ಲ! ದಿನಕರ್ ಕೂಡ ಅಣ್ಣನ ಹಾಗೆ ಸೈಲೆಂಟಾಗಿದ್ದಾರೆ. ಕಾರವಾರದ ಸೀಬರ್ಡ್ ನೆಲೆಯಲ್ಲಿ ದರ್ಶನ್ ಸೋದರಿ ವಾಸವಿದ್ದು, ಅವರೂ ಸಹ ಏನೂ ಮಾತಾಡುತ್ತಿಲ್ಲ, ಆದರೆ ಪಬ್ಲಿಕ್ ಮಾತಾಡುತ್ತಿದೆ. ದರ್ಶನ್ ಫ್ಯಾಮಿಲಿ ಇಷ್ಟೊಂದು ಜುಗ್ಗತನ ತೋರಿಸಬಾರದಿತ್ತು ಎನ್ನುವವರಿದ್ದಾರೆ.

ಇಲ್ಲಿ ಇವರ ಜುಗ್ಗತನದ ಬಗ್ಗೆ ಇನ್ನೊಂದು ಘಟನೆಯಿದೆ. ಪರಾಂಬರಿಸಿ ಬಿಡಿ.

ಟಿ.ನರಸೀಪುರದ ಸಮೀಪ ಕೆಂಪಯ್ಯನಹುಂಡಿಯಲ್ಲಿ ದರ್ಶನ್ ಒಡೆತನಕ್ಕೆ ಸೇರಿದ ತೂಗುದೀಪ ಫಾರಂ ಇದೆ. ಹತ್ತಾರು ಎಕರೆಗಳ ವಿಶಾಲವಾದ ಫಾರಂ ಅದು. ಅಲ್ಲಿ ದರ್ಶನ್ ಹಸುಗಳನ್ನು, ಕುದುರೆಗಳನ್ನು, ಇತರೆ ಪ್ರೀತಿ ಪಾತ್ರ ಪ್ರಾಣಿಗಳನ್ನು ಸಾಕುತ್ತಿದ್ದಾರೆ. ಅಲ್ಲದೆ ತೆಂಗಿನ ತೋಟ, ಇತರೆ ಬೆಳೆಗಳನ್ನು ಅಲ್ಲಿ ಬೆಳೆಯಲಾಗುತ್ತಿದೆ. ತೋಟದ ವ್ಯವಸಾಯ, ಪ್ರಾಣಿಗಳ ಆರೈಕೆ ಮಾಡಿಕೊಂಡಿರಲು ಚಾಮರಾಜನಗರ ಸಮೀಪದ ನಿಜಲಿಂಗಪುರದ ಮಹೇಶ್ ದಂಪತಿಗಳನ್ನು ನೇಮಿಸಿದ್ದರು ದರ್ಶನ್. ಈ ದಂಪತಿಗಳು ಕಳೆದ ಏಳೆಂಟು ವರ್ಷಗಳಿಂದಲೂ ದರ್ಶನ್ ಫಾರಂನಲ್ಲಿದ್ದು ನಿಯತ್ತಾಗಿ ದುಡಿಯುತ್ತಿದ್ದರು.

ದರ್ಶನ್‌ನ ಪ್ರೀತಿಯ ಹಸುವೊಂದು ಇತ್ತೀಚೆಗೆ ಮಹೇಶ್‌ನ ಕಣ್ಣಿಗೆ ಕೊಂಬು ಸಿಕ್ಕಿಸಿ ಬಿಟ್ಟಿತ್ತು, ಇದರಿಂದ ಆ ಬಡವನ ಒಂದು ಕಣ್ಣೇ ಶಾಶ್ವತವಾಗಿ ನಾಶವಾಯಿತು! ಅಂದು ಇನ್ಸಿಡೆಂಟ್ ನಡೆದ ದಿವಸ ಕೂಲಿ ಕಾರ್ಮಿಕ ಮಹೇಶನನ್ನು ಮೈಸೂರಿನ ನಾರಾಯಣ ಹೆಲ್ತ್ ಸೆಂಟರ್‌ಗೆ ಅಡ್ಮಿಟ್ ಮಾಡಲಾಗಿತ್ತು. ದರ್ಶನ್ ಪುಣ್ಯಾತ್ಮರು ನೆಪಮಾತ್ರಕ್ಕೂ ಅಲ್ಲಿಗೆ ಹೋಗಿ ತಮ್ಮ ಸೇವಕನನ್ನು ನೋಡಲಿಲ್ಲ! ಬಡಕೂಲಿ ಮಹೇಶ್‌ನ ಹೆಂಡತಿ ಗೋಳಾಡಿ ಗೋಗರೆದಿದ್ದರಿಂದ ಆಸ್ಪತ್ರೆಯ ಚಿಕಿತ್ಸಾ ವೆಚ್ಚವನ್ನು ಭರಿಸಿದ್ದಾರಂತೆ ದರ್ಶನ್. ಅದರ ಬಾಬ್ತು ಹೆಚ್ಚೆಂದರೆ 2-3 ಲಕ್ಷಗಳಾಗಿರಬಹುದು.

ಇಷ್ಟು ಕೊಟ್ಟು ಕೈಬಿಟ್ಟು ಬಿಟ್ಟರೆ ಪಾಪ ಆ ಬಡಪಾಯಿಯ ಗತಿ ಏನು? ಇನ್ಮುಂದೆ ಆತನಿಗೆ ಕೂಲಿ ಮಾಡಲೂ ಆಗುವುದಿಲ್ಲ, ಕಣ್ಣು ಹೋದ ಕೊರಗಿನಲ್ಲಿ ಅರೆಹುಚ್ಚನಂತಾಗಿದ್ದಾನೆ. ಆತ ಚೇತರಿಸಿಕೊಳ್ಳಲಿಕ್ಕಾದರೂ ದರ್ಶನ್ ಸಹಾಯ ಮಾಡಬಹುದಿತ್ತು, ಹೋಗಲಿ, ಏಳೆಂಟು ವರ್ಷಗಳಿಂದ ತನ್ನ ತೋಟದಲ್ಲಿ ಕೆಲಸ ಮಾಡಿದ ಮಹೇಶ್‌ನಿಗೆ 10 ಲಕ್ಷದಷ್ಟಾದರೂ ಬ್ಯಾಂಕ್ ಠೇವಣಿ ಇಟ್ಟು ಬದುಕಳಯ್ಯ ಅಂದಿದ್ರೆ ದರ್ಶನ್ ಮನೆಯೇನು ಮುಳುಗಿಹೋಗುತ್ತಿತ್ತಾ? ಒಂದು ಸಿನಿಮಾಗೆ ಐದು ಕೋಟಿ ದುಡಿಯೋ ಸೂಪರ್ ಸ್ಟಾರ್‌ಗೆ 10 ಲಕ್ಷ ದೊಡ್ಡ ಅಮೌಂಟಾಗಿತ್ತೆ? ದೊಡ್ಡವರು ಎನ್ನಿಸಿಕೊಂಡವರ ಚಿಲ್ರೆ ತಪ್ಪುಗಳು ಹೀಗೂ ಇರುತ್ತವೆ ನೋಡಿ!

ಬೆನ್ನಿಗೆ ಚೂರಿ ಹಾಕಿದ್ಯಾರು?

ಚಾಲೆಂಜಿಂಗ್ ಸ್ಟಾರ್ ದರ್ಶನ್ ಇತ್ತೀಚೆಗೆ ಸಿನಿಮಾ ಪತ್ರಿಕೆಯೊಂದಕ್ಕೆ ಸಂದರ್ಶನ ನೀಡಿದ್ದರು. ಅದರಲ್ಲಿ ತಾನು ಬಹಳ ಜನಕ್ಕೆ ಸಹಾಯ ಮಾಡಿದ್ದೇನೆಂದೂ, ತನ್ನಿಂದ ಸಹಾಯ ಪಡೆದವರು ತನ್ನ ಬೆನ್ನಿಗೇ ಚೂರಿ ಹಾಕಿದರೆಂದೂ ಹೇಳಿಕೊಂಡಿದ್ದರು. ಅಲ್ಲದೆ ಬೆನ್ನಿಗೆ ಚೂರಿ ಹಾಕುವ ಗೆಳೆಯರ ಸಹವಾಸ ತನಗೆ ಬೇಡವೇ ಬೇಡ ಎಂದು ಖಂಡತುಂಡವಾಗಿ ನುಡಿದಿದ್ದರು. ಹಾಗಾದರೆ ದರ್ಶನ್ ಬೆನ್ನಿಗೆ ಚೂರಿ ಹಾಕಿದ ಗೆಳೆಯರ‍್ಯಾರು?

ಇಡೀ ರಾಜ್ಯದ ಜನತೆಗೆ ತಿಳಿದಿರುವ ಹಾಗೆ ದರ್ಶನ್ ಡಾ.ರಾಜ್ ಫ್ಯಾಮಿಲಿಯ ದ್ವೇಷ ಕಟ್ಟಿಕೊಂಡಿದ್ದಾರೆ. ಅವರ ಮನೆಯಲ್ಲಿ ಹಬ್ಬವಾದರೂ ಹೋಗುವುದಿಲ್ಲ, ಕಷ್ಟವಾದಾಗಲೂ ಹೋಗುವುದಿಲ್ಲ, 'ಸಾರಥಿ' ರಿಲೀಸ್ ಸಂದರ್ಭದಲ್ಲಿ ದರ್ಶನ್-ನಿಖಿತಾ ವಿಚಾರದಲ್ಲಿ ಗಲಾಟೆಯಾಗಿ, ದರ್ಶನ್ ತನ್ನ ಪತ್ನಿ ವಿಜಯಲಕ್ಷ್ಮಿಯ ಮುಖ ಚಚ್ಚಿದ್ದು, ಆಕೆ ಪೊಲೀಸ್ ಕೇಸು ಹೆಟ್ಟಿ ದರ್ಶನ್ ಜೈಲಿಗೆ ಹೋಗಿದ್ದು ಎಲ್ಲವೂ ನಡೆಯಿತು.


ಆಗ ತನ್ನ ವಿರುದ್ಧ ಪೊಲೀಸ್ ಕೇಸು ಹಾಕುವಂತೆ ವಿಜಯಲಕ್ಷ್ಮಿಯನ್ನು ಪುಸಲಾಯಿಸಿದ್ದು ಶಿವಣ್ಣನ ಪತ್ನಿ ಗೀತಕ್ಕ ಎಂಬ ಅನುಮಾನ ದರ್ಶನ್‌ಗಿತ್ತು! ಆವಾಗಿನಿಂದ ಈತ ಅಣ್ಣಾವ್ರ ಫ್ಯಾಮಿಲಿ ಜೊತೆ ಠೂಬಿಟ್ಟಿದ್ದಾರೆ!


ಹುಬ್ಬಳ್ಳಿ ಕ್ರಿಕೆಟ್ ಟೂರ್ನಿ ಸಂದರ್ಭದಲ್ಲಿ ಸುದೀಪ್‌ಗೂ ಶಿವಣ್ಣನ ಹುಡುಗರಿಗೂ ಮಧ್ಯೆ ಹೊಡೆದಾಟವಾಗಿತ್ತು. ಆವತ್ತು ರಾಘವೇಂದ್ರ ರಾಜ್‌ಕುಮಾರ್ ಏಕಪಕ್ಷೀಯವಾಗಿ ನಡೆದುಕೊಂಡು ಕಿಚ್ಚನ ಹುಡುಗರನ್ನು ಅವಮಾನಿಸಿದ್ದರು. ಇದರಿಂದ ಸುದೀಪ್ ಕೂಡ ಶಿವಣ್ಣ ಫ್ಯಾಮಿಲಿಯಿಂದ ದೂರವೇ ಉಳಿದಿದ್ದರು.


ಹಿಂದೊಮ್ಮೆ ಪರಮವೈರಿಯಾಗಿದ್ದ ಸುದೀಪ್ ಜೊತೆ ದರ್ಶನ್ ಕೂಚಿಕ್ಕೂ ಕೂಚಿಕ್ಕೂ ಹಾಡಿದರು. ಆದರೀಗ? ಶಿವಣ್ಣ-ಸುದೀಪ್ ಒಂದಾಗಿದ್ದಾರೆ. ಬದಲಾವಣೆ ಜಗದ ನಿಯಮ ಎಂಬ ರಾಗ ಈಗ ಇವರಿಬ್ಬರದ್ದು. ಈ ನಿಯಮವನ್ನು ಅರ್ಥಮಾಡಿಕೊಳ್ಳದ ದರ್ಶನ್ ಈಗ ಸುದೀಪ್ ಅವರಿಂದಲೂ ದೂರ ಆಗಿದ್ದಾರಂತೆ!

ಈ ಹಿನ್ನೆಲೆಯಲ್ಲಿ ದರ್ಶನ್ 'ಬೆನ್ನಿಗೆ ಚೂರಿ ಹಾಕುವ ಗೆಳೆಯರು ನನಗೆ ಬೇಕಿಲ್ಲ' ಎಂದರೆ ಎಂದು ಗಾಂಧಿನಗರಿಗರು ತಲೆ ಕೆಡಿಸಿಕೊಂಡಿದ್ದಾರೆ!!

■ ನಾರಾಯಣ್.ಬಿ


ಪ್ರಹ್ಲಾದ್ ಜೋಶಿ


ವಿನಯ ಕುಲಕರ್ಣಿ


ಸಿ.ಎಸ್. ಶಿವಳ್ಳಿ

ಹಾಗೂ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಕಾಂಗ್ರೆಸ್ಸಿನ ಶ್ರೀನಿವಾಸ ಮಾನೆ; ಬಿಜೆಪಿಯ ಪ್ರದೀಪ್ ಶೆಟ್ಟರ್, ಕಾಂಗ್ರೆಸ್ಸಿನ ವೀರಣ್ಣ ಮತ್ತಿಕಟ್ಟಿ ಎಂಎಲ್‌ಸಿಯಾಗಿದ್ದಾರೆ.

ಒಟ್ಟಾರೆ ಕಾಂಗ್ರೆಸ್ ಪರವಾಗಿ ನಾಲ್ವರು ಶಾಸಕರು ಇಬ್ಬರು ಪರಿಷತ್ ಸದಸ್ಯರಿದ್ದರೆ ಬಿಜೆಪಿ ಇಬ್ಬರು ಶಾಸಕರು ಇಬ್ಬರು ವಿಧಾನ ಪರಿಷತ್ ಸದಸ್ಯ ಬಲದ ಜೊತೆಗೆ ಪ್ರಹ್ಲಾದ್ ಜೋಶಿಯ ಮುಖೇನ ಒಬ್ಬ ಲೋಕಸಭಾ ಸದಸ್ಯನನ್ನೂ ಹೊಂದಿದೆ. ಜೆಡಿಎಸ್‌ಗೆ ಒಬ್ಬ ಶಾಸಕ ಹಾಗೂ ಒಬ್ಬ ವಿಧಾನ ಪರಿಷತ್ ಸದಸ್ಯ ಬಿಟ್ಟರೆ ಹೇಳಿಕೊಳ್ಳುವಂತಹ ಬಲವಿಲ್ಲ.

ಜಿಲ್ಲೆಯ ಯುವ ನಾಯಕ ವಿನಯ ಕುಲಕರ್ಣಿಗೆ ಮಂತ್ರಿಗಿರಿ ಹಾಗೂ ಸಿ.ಎಸ್. ಶಿವಳ್ಳಿಗೆ ಸಂಸದೀಯ ಮಂಡಳಿ ಕಾರ್ಯದರ್ಶಿ ಸ್ಥಾನಗಳನ್ನು ದಯಪಾಲಿಸಿರುವ ಸಿಎಂ ಸಿದ್ದರಾಮಯ್ಯ, ಇಲ್ಲಿ ಪಕ್ಷಕ್ಕೆ ಭದ್ರ ನೆಲೆಯನ್ನೇ ಒದಗಿಸಿದ್ದಾರೆ. ಜಾತಿ ಲೆಕ್ಕಾಚಾರದಲ್ಲೂ ಸಿದ್ದರಾಮಯ್ಯ ಅವರ ಆಲೋಚನೆ ಅಜೆಂಡಾ ಫಿಕ್ಸ್ ಆಗಿದೆ. ನಾಲ್ವರು ಕಾಂಗ್ರೆಸ್ ಎಂಎಲ್‌ಎಗಳಲ್ಲಿ ವಿನಯ್ ಕುಲಕರ್ಣಿ ಲಿಂಗಾಯತ ಜಾತ್ಯಸ್ಥನಾದರೆ, ಸಿ.ಎಸ್. ಶಿವಳ್ಳಿ ಸಿದ್ದರಾಮಯ್ಯನವರ ಕುಲಬಾಂಧವ; ಮಾಜಿ ಮಂತ್ರಿ ಸಂತೋಷ್ ಲಾಡ್ ಮರಾಠ ಜನಾಂಗವನ್ನು ಪ್ರತಿನಿಧಿಸಿದರೆ ಪ್ರಸಾದ್ ಅಬ್ಬಯ್ಯ ದಲಿತ ಪ್ರತಿನಿಧಿಯಾಗಿದ್ದಾರೆ. ಅದೇರೀತಿ ಇಬ್ಬರು ಎಂಎಲ್‌ಸಿಗಳಲ್ಲಿ ಶ್ರೀನಿವಾಸ್ ಮಾನೆ ಮರಾಠ ಸಮುದಾಯಕ್ಕೆ ಸೇರಿದರೆ ವೀರಣ್ಣ ಮತ್ತಿಕಟ್ಟಿ ಲಿಂಗಾಯತ ಜಾತಿಯವರು. ಹಾಗಾಗಿ ಎಲ್ಲಾ ಜಾತಿಯ ಮತಗಳನ್ನು ಸೆಳೆಯುವ ತಾಕತ್ತು ಕಾಂಗ್ರೆಸ್ಸಿಗಿದೆ.

ಆದರೆ ಬಿಜೆಪಿಯಲ್ಲಿ ಜಗದೀಶ್ ಶೆಟ್ಟರ್, ಅರವಿಂದ ಬೆಲ್ಲದ, ಪ್ರದೀಪ್ ಶೆಟ್ಟರ್, ಪ್ರೊ. ಸುಂಕನೂರ್ ಎಲ್ಲರೂ ಲಿಂಗಾಯತ ಜಾತಿಗೇ ಸೇರಿದವರಾಗಿದ್ದಾರೆ. ಜೆಡಿಎಸ್‌ನ ಶಾಸಕ ಎನ್.ಎಚ್. ಕೋನರೆಡ್ಡಿ ಹಾಗೂ ಎಂಎಲ್‌ಸಿ ಹೊರಟ್ಟಿ ಇಬ್ಬರೂ ರೆಡ್ಡಿ ಸಮುದಾಯಕ್ಕೆ ಸೇರಿದವರು.

ಕಳೆದ ಬಾರಿಯ ಜಿಲ್ಲಾ ಪಂಚಾಯತಿ, ತಾಲೂಕ್ ಪಂಚಾಯತಿ ಚುನಾವಣೆಯ ಸಂದರ್ಭದಲ್ಲಿ ರಾಜ್ಯದ ಅಧಿಕಾರ ಗದ್ದುಗೆಯು ಬಿಜೆಪಿಯ ಕೈಯಲ್ಲಿತ್ತು. ಅಲ್ಲದೇ ಲಿಂಗಾಯತ ಮತಗಳು ಸಾಲಿಡ್ಡಾಗಿ ಯಡಿಯೂರಪ್ಪನ ಬೆನ್ನಿಗಿದ್ದವು. ಹಾಗಾಗಿ ಧಾರವಾಡ ಜಿಲ್ಲೆಯ 22 ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ 16 ಬಿಜೆಪಿ, 5 ಕಾಂಗ್ರೆಸ್, 1 ಜೆಡಿಎಸ್ ಸದಸ್ಯರು ಆಯ್ಕೆಗೊಂಡಿದ್ದರು. ಏಕೈಕ ಜೆಡಿಎಸ್ ಸದಸ್ಯ ಅಮೃತ ದೇಸಾಯಿ ಆಮೇಲೆ ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದರಿಂದ ಜೆಡಿಎಸ್ ಖಾತೆ ಶೂನ್ಯಗೊಂಡಿದೆ. ಬಹುತೇಕ ತಾಲ್ಲೂಕ್ ಪಂಚಾಯತಿಗಳು ಬಿಜೆಪಿ ಹಿಡಿತದಲ್ಲಿವೆ.

ಆದರೆ ಈಗ ರಾಜಕೀಯ ಚಿತ್ರಣವೇ ಸಂಪೂರ್ಣ ಬದಲಾಗಿ ಹೋಗಿದೆ. ಬಿಜೆಪಿ ಅಧಿಕಾರ ಕಳೆದುಕೊಂಡು ಒಡೆದ ಮನೆಯಂತಾಗಿದ್ದರೆ, ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಈಗಷ್ಟೇ ಮುಗಿದ ಎಂಎಲ್‌ಸಿ ಎಲೆಕ್ಷನ್‌ನಲ್ಲಿ ಅತಿಹೆಚ್ಚು ಸ್ಥಾನಗಳನ್ನು ಜಯಿಸುವ ಮೂಲಕ ತನ್ನ ಆತ್ಮವಿಶ್ವಾಸವನ್ನು ಮತ್ತಷ್ಟು ಮೊನಚು ಮಾಡಿಕೊಂಡಿದೆ. ಬಿಜೆಪಿ ಇನ್ನೂ ಒಳಬೇಗುದಿಯಿಂದ ಹೊರಬಂದಿಲ್ಲ, ಹಾಗಾಗಿ ಈ ಚುನಾವಣೆಯಲ್ಲೂ ಕಾಂಗ್ರೆಸ್‌ಗೆ ಪೂರಕವಾದ ವಾತಾವರಣವೇ ಕಾಣಿಸುತ್ತಿದೆ. ಧಾರವಾಡದ ಮಟ್ಟಿಗಂತೂ ಇದು ನಿಜ. ಕಾಂಗ್ರೆಸ್ ಜಿಲ್ಲಾ ಉಸ್ತುವಾರಿ ಹೊತ್ತಿರುವ ವಿನಯ್ ಕುಲಕರ್ಣಿ ಹಾಗೂ ಸಂಸದೀಯ ಮಂಡಳಿ ಕಾರ್ಯದರ್ಶಿ ಸಿ.ಎಸ್.ಶಿವಳ್ಳಿ ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಕಾರ್ಯೋನ್ಮುಖರಾದರೆ ಬಿಜೆಪಿಗೆ ಮತ್ತೊಮ್ಮೆ ಮುಖಭಂಗ ಮಾಡುವುದು ಅಸಾಧ್ಯವೇನೂ ಅಲ್ಲ. ಕ್ಷೇತ್ರಗಳ ಮೀಸಲಾತಿ ಕೂಡಾ ಕಾಂಗ್ರೆಸ್‌ಗೆ ಅನುಕೂಲಕರವಾಗಿಯೇ ಇದೆ.

ಜಿಲ್ಲೆಯಲ್ಲಿ ಈಗಾಗಲೇ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳು ಅಭ್ಯರ್ಥಿಗಳ ಆಯ್ಕೆಯಲ್ಲಿ ತೊಡಗಿವೆ. ಇವುಗಳ ಜೊತೆಗೆ ಜೆಡಿಯು, ಬಿಎಸ್‌ಪಿ, ರೈತಸಂಘಗಳು ಕೂಡಾ ಚುನಾವಣಾ ಕಣಕ್ಕೆ ಧುಮುಕುವುದಾಗಿ ಘೋಷಿಸಿರುವುದರಿಂದ ಸ್ಪರ್ಧೆ ತುಸು ಕಠಿಣವಾಗೇ ಇರಲಿದೆ.

■ ಹುಬ್ಬಳ್ಳಿಯಾಂವ

ನಿರಂಜನ್ ಅಮರನಾದ ಕಥೆ



ಲೆಫ್ಟಿನೆಂಟ್ ಕರ್ನಲ್ ನಿರಂಜನ್

2016ರ ಜನವರಿ 3, ಪಂಜಾಬ್‌ನ ಪಠಾಣ್‌ಕೋಟ್ ವಾಯುನೆಲೆ.

ಅದು ಮುಂಬಯಿ ಸ್ಫೋಟದ ನಂತರ ಭಾರತೀಯ ಸೇನೆ ಕಂಡ ಅತ್ಯಂತ ಕಷ್ಟಕರ ಟೆರ್ರರ್ ಎನ್‌ಕೌಂಟರ್. ಜಮ್ಮು ಕಾಶ್ಮೀರವನ್ನು ಹೊರತು ಪಡಿಸಿದರೆ ಅತೀ ಹೆಚ್ಚು ಪಾಕಿಸ್ತಾನದ ಜಿಹಾದಿಗಳ ಉಪಟಳ ಕಂಡದ್ದು ಪಂಜಾಬ್. ದುಮ್ತಾಲದಲ್ಲಿ 2001ರ ಮಾರ್ಚ್‌ನಲ್ಲಿ ನಡೆದ ಉಗ್ರರ ದಾಳಿಯಲ್ಲಿ ಮೂವರು ಯೋಧರು ಬಲಿಯಾಗಿ ಐವರು ಗಾಯಗೊಂಡ ರಕ್ತರಾತ್ರಿಯೇ ಮೊದಲು. 2002ರ ಜನವರಿ 31ರಂದು ಹೋಷಿಯಾರ್‌ಪುರ್ ಪಟ್ಟನಾದಲ್ಲಿ ಸಾರಿಗೆ ಬಸ್ಸಿಗೆ ಬಾಂಬಿಕ್ಕಿ ಇಬ್ಬರು ಪ್ರಯಾಣಿಕರು ಸತ್ತು 12 ಮಂದಿ ಗಾಯಗೊಂಡಿದ್ದು, ಇದಾಗಿ ಎರಡೇ ತಿಂಗಳಿಗೆ ಲೂಧಿಯಾನಾದಿಂದ 20 ಕಿ.ಮೀ ದೂರದ ದರೋಹದಲ್ಲಿ ಫಿರೋಜ್‌ಪುರ್ ಎಕ್ಸ್‌ಪ್ರೆಸ್ ರೈಲಿಗೆ ಬಾಂಬಿಕ್ಕಿ 28 ಮಂದಿ ಗಾಯಗೊಂಡು 2 ಸಾವಾಗಿದ್ದು, 2007ರ ಅಕ್ಟೋಬರ್ 14ರಂದು ಲೂಧಿಯಾನಾದ ಚಿತ್ರಮಂದಿರಕ್ಕೇ ಸ್ಫೋಟಕವಿಟ್ಟು ಏಳು ಮಂದಿಯನ್ನು ಕೊಂದದ್ದು ಮತ್ತು 2015ರ ಜುಲೈ 25ರಂದು ದೀನಾ ನಗರದ ಪೊಲೀಸ್ ಠಾಣೆ ಸುತ್ತ ಬಾಂಬ್ ಹಾಕಿ ಪೊಲೀಸ್ ಅಧಿಕಾರಿ 7 ಮಂದಿಯನ್ನು ಕೊಂದು ಹಾಕಿದ್ದು ಪಾಕ್ ಜಿಹಾದಿಗಳು ಭಾರತೀಯ ಸೇನೆಗೆ ಕೊಟ್ಟ ಸಾಕಷ್ಟು ಮುನ್ನೆಚ್ಚರಿಕೆಗಳಷ್ಟೆ.

ಆದರೆ 2016ರ ಹೊಸ ವರ್ಷದ ಸಂಭ್ರಮಕ್ಕೆ ಇಂಥಾದ್ದೊಂದು ರಕ್ತತೋರಣ ಕಾದಿದೆಯೆಂಬ ಯಾವ ನಿರೀಕ್ಷೆ ತಾನೇ ಯಾರಿಗೆ ಇದ್ದೀತು? ಈ ಬಾರಿ ಹಿಂದೆಂದಿಗಿಂತಲೂ ಭಯಾನಕ ದುಸ್ವಪ್ನಕ್ಕೆ ಪಾಕಿಸ್ತಾನದ ಜೈಷ್-ಎ-ಮೊಹಮ್ಮದ್ ಕಳೆದೊಂದು ವರ್ಷದಿಂದ ನಡೆಸಿದ ತಯಾರಿಯೇ ಹಾಗಿತ್ತು. ಪಠಾಣ್‌ಕೋಟ್ ವಾಯುನೆಲೆಯೆಂದರೆ ಕಾಶ್ಮೀರದ ಹೊರತಾದ ಪಾಕಿಸ್ತಾನಕ್ಕೆ ಅತ್ಯಂತ ಆಯಕಟ್ಟಿನ ಬಲಾಢ್ಯ ವಾಯುನೆಲೆಗಳಲ್ಲೊಂದು.

ಜನವರಿ 2ರ ನಡುರಾತ್ರಿ ಕಳೆದು ಬೆಳಗು ಹರಿಯುವ ಮುನ್ನ ಇನ್ನೇನು ಎಲ್ಲರೂ ನಿದ್ರೆಗೆ ಜಾರಬೇಕು, ಅದು ರಾತ್ರಿ 3.30 ಸಮಯ. ಪಠಾಣ್‌ಕೋಟ್ ವಾಯುನೆಲೆಯ ಹಿಂಭಾಗದ ಕಾಡಿನಿಂದ ಎರಡು ತಂಡಗಳಾಗಿ ನುಸುಳಿದ ಎಂಟು ಮಂದಿ ಜಿಹಾದಿಗಳ ತಂಡ ಅದಕ್ಕೊಂದು ಬಳಸಿದ್ದು ಗುರುದಾಸ್‌ಪುರ್ ಜಿಲ್ಲಾ ಪೊಲೀಸ್ ವರಿಷ್ಠರ ಸರ್ಕಾರಿ ಕಾರನ್ನು. ಮಿಲಿಟರಿ ಸಮವಸ್ತ್ರ ತೊಟ್ಟೇ ಇದ್ದ ಜಿಹಾದಿಗಳು ಎಸ್‌ಪಿಯ ಪೊಲೀಸ್ ವಾಹನದಲ್ಲಿ ಯಾರಿಗೂ ಅನುಮಾನ ಬಾರದ ಹಾಗೆ ಪಠಾಣ್‌ಕೋಟ್ ವಾಯುನೆಲೆಯನ್ನು ಪ್ರವೇಶಿಸಿಬಿಟ್ಟರು. ಆದರೆ ಇದಕ್ಕೂ ಮುನ್ನವೇ ಹಿಂಬದಿಯ ಕಾಡಿನಿಂದ ವಾಯುನೆಲೆ ಹೊಕ್ಕು ಅಡಗಿ ಕೂತ ಇನ್ನೂ ನಾಲ್ವರು ಸಾವಿನ ಧೂತರ ತಂಡವಿತ್ತಲ್ಲ; ಅದು ಮಾಡಬಹುದಾಗಿದ್ದ ಹಾನಿ, ಅನಾಹುತಗಳ ಲೆಕ್ಕ ತಾನೇ ಯಾರಿಗೆ ಗೊತ್ತಿತ್ತು.

ಸಾವಿನ ಧೂತರು

ಶನಿವಾರ ರಾತ್ರಿ ಮೂರೂವರೆಯಿಂದ ಶುರುವಾದ ಗುಂಡಿನ ಚಕಮಕಿ, ಗ್ರೆನೇಡುಗಳ ಆರ್ಭಟ, ಚೀರಾಟ, ಒಂದು ಹಂತಕ್ಕೆ ಬಂದದ್ದು ಭಾನುವಾರ ಅಪರಾಹ್ನ ಹನ್ನೆರಡು ಗಂಟೆಯ ಹೊತ್ತಿಗೆ. ಆ ಹೊತ್ತಿಗಾಗಲೇ ನಾಲ್ವರು ಜಿಹಾದಿಗಳನ್ನು ಕಮಾಂಡೋ ಪಡೆ ಕೊಂದು ಹಾಕಿತ್ತು. ಬೆಳಗ್ಗೆ ಒಂಬತ್ತರ ಹೊತ್ತಿಗೆ ಉಗ್ರರ ಗ್ರೆನೇಡಿಗೆ ಸಿಲುಕಿ ಸತ್ತ ಇಬ್ಬರು ಕಮಾಂಡೋಗಳ ಹುತಾತ್ಮರ ಪಟ್ಟಿ ಅಪರಾಹ್ನ ಹನ್ನೆರಡರ ಹೊತ್ತಿಗೆ ಮೂರಕ್ಕೇರಿತ್ತು, ನಮ್ಮ ಬೆಂಗಳೂರಿನ

ಲೆಫ್ಟಿನೆಂಟ್ ಕರ್ನಲ್ ನಿರಂಜನ್ ಈ ಸಾಲಿನಲ್ಲಿ ನಾಲ್ಕನೆಯವರಾಗಬಹುದೆಂಬ ಯಾವ ಸುಳಿವಾದರೂ ಯಾರಿಗಿದ್ದೀತು?



ಅದು ಜನವರಿ ಮೂರರ ಗುಂಡು ಗ್ರೆನೇಡ್‌ಗಳ ಮೊರೆತದ ತೀವ್ರ ಚಕಮಕಿಯ ಸಂಘರ್ಷ. ಬೆಳಗಿನ ಜಾವ ಐದರ ಹೊತ್ತಿಗೆಲ್ಲ ಎಲ್ಲೆಂದರಲ್ಲಿ ಗ್ರೆನೇಡ್ ಬೆಂಕಿ ಸಿಡಿಯುತ್ತಿದ್ದದ್ದು ಪಠಾಣ್‌ಕೋಟ್ ವಾಯುನೆಲೆಯ ಹೊರ ಅಂಚಿನಲ್ಲಿ ಕೇಳಿ ಬರುತ್ತಿತ್ತು. ಬೆಳಗ್ಗೆ ಒಂಬತ್ತರ ಹೊತ್ತಿಗೆ ವಾಯುನೆಲೆಯ ಪಶ್ಚಿಮ ಭಾಗದಿಂದ ಉಗ್ರರು ಸಿಡಿಸುತ್ತಿದ್ದ ಗುಂಡಿನ ಸದ್ದಡಗಿತ್ತು. ಅದಕ್ಕೂ ಮುನ್ನ ಬೆಳಗ್ಗೆ ಎಂಟೂವರೆಗೆ ಇಬ್ಬರು ಉಗ್ರರನ್ನು ಕೊಂದು ಮುಗಿಸಿದ್ದ ಕಮಾಂಡೋಗಳು ಒಂಬತ್ತರ ಹೊತ್ತಿಗೆ ನುಸುಳಿ ಧ್ವಂಸಗೈಯುತ್ತಿದ್ದ ಇನ್ನಿಬ್ಬರು ಉಗ್ರರನ್ನೂ ಗುಂಡಿಟ್ಟು ಕೊಂದಾಗಿತ್ತು. ಅಲ್ಲಿಗೆ ನಾಲ್ವರು ಉಗ್ರರ ಹೆಣ ಬಿದ್ದಂತಾಗಿತ್ತಾದರೂ ನಷ್ಟ ಮಾತ್ರ ಸಣ್ಣದಾಗಿರಲಿಲ್ಲ. ಬೆಳಗ್ಗೆ ಒಂಬತ್ತರ ಘರ್ಷಣೆಯಲ್ಲಿ ಅಸುನೀಗಿದ ಇಬ್ಬರು ಕಮಾಂಡೋಗಳ ಪೈಕಿ ಒಬ್ಬರು ಸುಬೇದಾರ್ ಫತೇಸಿಂಗ್!

ಶೂಟಿಂಗ್‌ನಲ್ಲಿ ಭಾರತಕ್ಕೆ ಚಿನ್ನದ ಪದಕ ತಂದಿತ್ತಿದ್ದ ನಿವೃತ್ತ ಮೇಜರ್ ಸುಬೇದಾರ್ ಫತೇಸಿಂಗ್ ಪ್ರಾಣತೆತ್ತ ಯೋಧರ ಪೈಕಿ ಎರಡನೆಯವರಾಗಿದ್ದರು. ಒಂಬತ್ತೂವರೆಯ ಹೊತ್ತಿಗೆ ಇದ್ದಕ್ಕಿದ್ದಂತೆ ಚಕಮಕಿ ಸದ್ದಡಗಿದಂತೆ ನಿಶಬ್ದ. ಉಗ್ರರ ಗ್ರೆನೇಡ್ ದಾಳಿಗೆ ಸಿಲುಕಿ ತೀವ್ರವಾಗಿ ಗಾಯಗೊಂಡಿದ್ದ ಮೂರನೇ ಯೋಧನೂ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದ ಸುದ್ದಿ ಬಂದಿತ್ತಾದರೂ ಅದನ್ನು ಸೆಣಸಾಟದಲ್ಲಿದ್ದ ಯಾವೊಬ್ಬ ಕಮಾಂಡೋಗೂ ತಿಳಿಸಿರಲಿಲ್ಲ. ಅಪರಾಹ್ನ 12ರ ಹೊತ್ತಿಗೆ ಎಲ್ಲವೂ ಸ್ಥಗಿತಗೊಂಡಂತೆ ಹರಿದರಕ್ತ, ಸುಟ್ಟವಾಸನೆ, ಬೆಂಕಿ, ಕರಕಲಾದ ಪೀಠೋಪಕರಣಗಳ ನಡುವೆಯೇ ಇನ್ನೆಲ್ಲಿಂದಲೋ ಗುಂಡಿನ ಸದ್ದು ಕೇಳಿಬಂದಂತಾಯ್ತು.

ಹರ್ಟ್ ಲಾಕರ್

ಅಲ್ಲಿಗೆ ಬಂದವರ ಸಂಖ್ಯೆ ಕೇವಲ ನಾಲ್ಕಲ್ಲ ಇನ್ನೂ ಇರಬಹುದೆಂಬ ಅನುಮಾನ ತೀವ್ರಗೊಂಡಿತ್ತು. ವಾಯುನೆಲೆಯ ಪಶ್ಚಿಮ ಮೂಲೆಯ ಕ್ಯಾಂಟೀನ್ ಮತ್ತು ಅದರ ಪಕ್ಕದ ಬಹುಮಹಡಿ ಗೋದಾಮಿನ ಭಾಗದಲ್ಲಿ ಸಿಕ್ಕಸಿಕ್ಕ ಗೋಡೆ, ಮರ, ಕಲ್ಲು ಬಂಡೆಗಳ ಮರೆಯಲ್ಲಿ ರೈಫಲ್ ಹಿಡಿದು ಒಂದೊಂದೇ ಹೆಜ್ಜೆಯಿಡುತ್ತಿದ್ದ ಕಮಾಂಡೋಗಳಿಗೆ ನೆಲಕ್ಕೊರಗಿದ್ದ ನಾಲ್ವರು ಜಿಹಾದಿಗಳ ಹೆಣಗಳು ನಿಚ್ಚಳವಾಗೇ ಕಾಣಿಸುತ್ತಿತ್ತು. ಹಾಗೆ ಬಿದ್ದ ಉಗ್ರರ ಹೆಣಗಳ ಹತ್ತಿರ ಹೋಗಲು ಭಯ. ಒಂದೋ ಅವರ ಬಳಿಯಿದ್ದ ಯಾವುದಾದರೂ ಗ್ರೆನೇಡ್ ಸಿಡಿಯಿತೆಂದರೆ ಅದು ಒಂದಲ್ಲ ಎರಡಲ್ಲ ಏಕಕಾಲಕ್ಕೆ ಅರ್ಧ ಡಜನ್ ಕಮಾಂಡೋಗಳ ಪ್ರಾಣಕ್ಕೆ ಕುತ್ತಾಗುತ್ತದೆ. ಅದೇ ವೇಳೆಗೆ ಅಡಗಿ ಕೂತ ಮತ್ತೊಬ್ಬ ಉಗ್ರ ಫೈರಿಂಗ್ ಶುರುವಿಟ್ಟನೆಂದರೆ ಅದೂ ಕೂಡ ಭಯಾನಕ ರಿಸ್ಕಿಯೇ.

ಮೊದಲು ಬಿದ್ದ ಉಗ್ರರ ಶವಗಳ ಬೆನ್ನಿಗೆ ತಗುಲಿದ್ದ ಜಾಕಿಟ್ಟುಗಳ ಬೆನ್ನಿಗೆ ಜೋತುಬಿದ್ದ ಗ್ರೆನೇಡ್ ಬ್ಯಾಗುಗಳನ್ನು ಪ್ರತ್ಯೇಕಿಸಬೇಕು ಮತ್ತು ಅದರಲ್ಲಿರುವ ಲೈವ್ ಗ್ರೆನೇಡ್‌ಗಳನ್ನು ನಿಷ್ಕ್ರಿಯಗೊಳಿಸಬೇಕು. ಹಾಗೊಮ್ಮೆ ಬಿದ್ದ ಹೆಣಗಳ ಬಳಿ ಹೋಗಿ ಇನ್ನೇನು ಗ್ರೆನೇಡ್ ಬ್ಯಾಗಿಗೆ ಕೈಹಾಕಬೇಕೆನ್ನುವಷ್ಟರಲ್ಲಿ ಏನಾದರೂ ಅಡಗಿ ಕೂತವನು ಗ್ರೆನೇಡ್ ಎಸೆದನೆಂದರೆ ಅಲ್ಲಿದ್ದ ಎಲ್ಲಾ ಗ್ರೆನೇಡುಗಳೂ ಏಕಕಾಲಕ್ಕೆ ಸಿಡಿಯುತ್ತವೆ. ಸುತ್ತ ಕವರ್ ಆಗಿರುವ ಇಪ್ಪತ್ತಕ್ಕೂ ಅಧಿಕ ಕಮಾಂಡೋಗಳು ಅರೆಕ್ಷಣದಲ್ಲೇ ಸುಟ್ಟು ಕರಕಲಾಗುತ್ತಾರೆ. ಹಾಗಾಗಬಾರದೆಂದರೆ ಅದಕ್ಕೊಬ್ಬ **Hurt locker** ಬೇಕೇಬೇಕು.

ಅಂದರೆ ಸಜೀವ ಗ್ರೆನೇಡುಗಳನ್ನು ನಿಷ್ಕ್ರಿಯಗೊಳಿಸಬಲ್ಲ ಬಾಂಬ್ ತಜ್ಞ! ಕೇವಲ ಬಾಂಬ್ ಪರಿಣತನಷ್ಟೇ ಅಲ್ಲ, ಅಕ್ಷರಶಃ ಸಾವಿನ ಸನ್ನಿಧಿಯಲ್ಲಿ ತನ್ನ ಪ್ರಾಣ ಪಣಕ್ಕಿಡಬಲ್ಲ ಎಂಟೆದೆಯ ಧೈರ್ಯಶಾಲಿ. ಮಿಲಿಟರಿ ಭಾಷೆಯಲ್ಲಿ ಬಾಂಬ್ ನಿಷ್ಕ್ರಿಯ ದಳದ ಕಮಾಂಡೋಗಳನ್ನು 'ಜಾನ್ ಬಾಜ್' ಎನ್ನುತ್ತಾರೆ. ಪರ್ಷಿಯನ್ ಮೂಲದ ಉರ್ದು ಭಾಷೆಯ ಈ ಪದದ ಅರ್ಥ ಪ್ರಾಣವನ್ನು ಪಣಕ್ಕಿಡುವುದು. ಜಾನ್ ಎಂದರೆ ಪ್ರಾಣ. ಬಾಜಿ ಎಂದರೆ ಜೂಜು. ಉಗ್ರರೋ ಶತ್ರು ಸೈನಿಕರೋ ರೈಫಲ್ ಹಿಡಿದು ಬಾಂಬ್ ಎಸೆದು ನೇರಾನೇರ ಸೆಣಸಾಡುವುದಕ್ಕೂ ಬದುಕುಳಿಯುವ ಯಾವುದೇ ಗ್ಯಾರಂಟಿಯಿಲ್ಲದೆ ಸಜೀವ ಗ್ರೆನೇಡ್ ಒಂದನ್ನು ನಿಷ್ಕ್ರಿಯಗೊಳಿಸುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

ಸಾವಿನ ಸನ್ನಿಧಿಗೆ

ಉಗ್ರನೊಬ್ಬನ ಜೊತೆ ಸೆಣಸುವುದಕ್ಕೆ ಧೈರ್ಯಕ್ಕಿಂತ ಮಿಗಿಲಾಗಿ ಚಾಲಾಕು ಬೇಕು. ಶರಣಾಗಿ ಪ್ರಾಣ ಉಳಿಸಿಕೊಳ್ಳಬಹುದು. ಆದರೆ ಗ್ರೆನೇಡ್ ನಿರ್ಜೀವ ಸ್ಫೋಟಕ. ಸಣ್ಣದೊಂದು ಕದಲಿಕೆಗೇ ಭಯಾನಕವಾಗಿ ಸ್ಫೋಟಿಸಿಬಿಡುತ್ತದೆ. ಹಾಗೇ ಸ್ಫೋಟಿಸಲಿದೆ ಎಂದು ಗೊತ್ತಿದ್ದೂ, ತನ್ನ ಪ್ರಾಣದ ಹಂಗು ತೊರೆದು ಅದನ್ನು ನಿಷ್ಕ್ರಿಯಗೊಳಿಸಲೆತ್ನಿಸುವಾತನಿಗೆ ಚೆನ್ನಾಗಿಯೇ ಗೊತ್ತಿರುತ್ತದೆ, ಸಾವುಬದುಕಿನ ಪ್ರಶ್ನೆಯೆಂಬುದು ಫಿಫ್ಟಿ ಫಿಫ್ಟಿ ಎಂಬುದು!

ಬಹುಶಃ ಯಾರಾದರೂ ಹಾಲಿವುಡ್ ಚಿತ್ರ 'Hurt locker' ನೋಡಿದರೆ ಬಾಂಬ್ ನಿಷ್ಕ್ರಿಯ ಕಮಾಂಡೋ ಓರ್ವನ ಮನಸ್ಥಿತಿ ಅರ್ಥವಾಗುತ್ತದೆ. 2008ರಲ್ಲಿ ತೆರೆಕಂಡು ಮಹತ್ವಾಕಾಂಕ್ಷೆಯ 'ಅವತಾರ್' ಚಿತ್ರವನ್ನೇ ಹಿಂದಿಕ್ಕಿ ಬರೋಬ್ಬರಿ ಆರು ಆಸ್ಕರ್ ಪ್ರಶಸ್ತಿಗಳನ್ನು ಗೆದ್ದ 'ಹರ್ಟ್ ಲಾಕರ್' ಇರಾಕ್ ಯುದ್ಧದಲ್ಲಿ ಹೆಣಗಾಡಿದ ಅಮೆರಿಕನ್



ಬೆಂಗಳೂರಿನಲ್ಲಿ ಅಶ್ರುತರ್ಪಣ

ಧೈರ್ಯ ಪ್ರಾಣತ್ಯಾಗವನ್ನೇ ನಿರೀಕ್ಷಿಸಿತ್ತು

`He was a bold risk taker.....!' ಎಂದು ಎಚ್‌ಎಎಲ್ ಸಮೀಪದ ಬಿಇಎಲ್ ಆಟದ ಮೈದಾನದಲ್ಲಿ ರಿಸಿದ್ದ ನಿರಂಜನ್ ಪಾರ್ಥಿವದೆದುರು ನಿಂತು ಹೇಳಿದ್ದು ಆತನ ತಂಗಿ ಭಾಗ್ಯಲಕ್ಷ್ಮಿ. ಅದರರ್ಥ ನಿರಂಜನ್ ಯಾವ ಅಪಾಯವನ್ನು ಲೆಕ್ಕಿಸದೇ ನುಗ್ಗಬಲ್ಲ ರಿಸ್ಕೀ. ಮೇಲು ನೋಟಕ್ಕಿದು ಉತ್ಪ್ರೇಕ್ಷೆ ಅನಿಸಬಹುದು. ಆದರೆ ನಿರಂಜನ್ ಹುಟ್ಟು ಬೆಳವಣಿಗೆ ಮತ್ತು ಸೇನೆಗೆ ಸೇರಿದ ಆತನ ನಿರ್ಧಾರದಲ್ಲೇ ಅಂಥದ್ದೊಂದು ದುಸ್ಸಾಹಸ ಪ್ರವೃತ್ತಿಯಿತ್ತು.

ಮೂಲತಃ ಕೇರಳದ ಪಾಲಕ್ಕಾಡ್‌ನ ಶಿವರಾಜನ್‌ನ ಮೂವರು ಗಂಡು, ಒಬ್ಬಳು ಹೆಣ್ಣು ಮಕ್ಕಳಲ್ಲಿ ನಿರಂಜನ್ ಎರಡನೆಯವರು. ಆ ಕಾಲಕ್ಕೇ ಬಿಇಎಲ್‌ನ ಉದ್ಯೋಗಕ್ಕೆ ಸೇರಿಕೊಂಡು ಬೆಂಗಳೂರಿಗೆ ವಲಸೆ ಬಂದ ತಂದೆ ಶಿವರಾಜನ್‌ಗೆ ತನ್ನ ಮೊದಲ ಮಗ ಶರತ್‌ಚಂದ್ರ ಸೇನೆಗೆ ಸೇರಿಕೊಂಡಾಗ ಸಹಜವಾಗೇ ಖುಷಿಯಾಗಿತ್ತು. ಏಕೆಂದರೆ ಬಿಇಎಲ್ ಕೂಡ ಭಾರತೀಯ ಸೇನೆಯ ಪೂರಕ ಘಟಕ ತಾನೇ? ಎರಡನೇ ಮಗ ನಿರಂಜನ್ ಓದಿ ಇಂಜಿನಿಯರ್ ಆಗಲೆಂದೇ ಮಲ್ಲೇಶ್ವರದ ಪ್ರತಿಷ್ಠಿತ ಬಿಪಿ ಇಂಡಿಯನ್ ಸ್ಕೂಲಿಗೆ ಸೇರಿಸಿದ್ದರು. ನಿರಂಜನ್ ಓದಿನಲ್ಲೂ ಶಿಸ್ತಿನ ಹುಡುಗ ಮತ್ತು ಪರಿಶ್ರಮಿ.

ಪಿಯುಸಿ ಮುಗಿಸಿ ಬೆಂಗಳೂರಿನ ಸರ್ಕಾರಿ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿಗೆ ಮೆರಿಟ್ ಆಧಾರದಲ್ಲೇ ಪ್ರವೇಶ ಪಡೆದ ನಿರಂಜನ್ ಇಂಜಿನಿಯರ್ ಆಗಿ ಕೈತುಂಬಾ ಖಮಾಯಿಸಬಹುದೆಂಬ ತಂದೆಯ ನಿರೀಕ್ಷೆ ಹುಸಿಯಾಗಿದ್ದು ತಾನೂ ಕೂಡ ಅಣ್ಣನಂತೆ ಇಂಡಿಯನ್ ಆರ್ಮಿ ಸೇರುತ್ತೇನೆಂದು ನಿರಂಜನ್ ಹಠಕ್ಕೆ ಬಿದ್ದಾಗಲೇ!

ತಂದೆ ಶಿವರಾಜನ್ ಮಗನ ಬಗ್ಗೆ ನಿಜಕ್ಕೂ ಹೆಮ್ಮೆ ಪಟ್ಟಿದ್ದು ಆತನ ನಿರ್ಧಾರ ಕೇಳಿದಾಗಲೇ. ತಮ್ಮ ಶಶಾಂಕ್ ಒಬ್ಬನೇ ಮಿಲ್ಟ್ರಿ ಸೇರದೇ ಐಟಿ ಕಂಪೆನಿಯೊಂದನ್ನು ಸೇರಿದ್ದು. ನಿರಂಜನ್‌ನ ಧೈರ್ಯ ಮೊದಲೇ ಗೊತ್ತಿತ್ತಲ್ಲ ಸಹಜವಾಗೇ ಗರ್ವಪಟ್ಟ ತಂದೆಗೆ ವರ್ಷದ ಹಿಂದಷ್ಟೇ ಎನ್‌ಎಸ್‌ಜಿಯ ಲೆಫ್ಟಿನೆಂಟ್ ಕರ್ನಲ್ ಹುದ್ದೆಗೆ ಬಡ್ತಿ ಸಿಕ್ಕಾಗ ಮತ್ತಷ್ಟು ಖುಷಿಯಾಗಿತ್ತು. ಅದೇ ಹೊತ್ತಿಗೆ ನಿರಂಜನ್ ತಂದೆಯಾಗಿದ್ದ. ಎಂಬಿಬಿಎಸ್ ಮುಗಿಸಿ ಡಾಕ್ಟರ್ ಪದವಿ ಪಡೆದಿದ್ದ ರಾಧಿಕಾ ತನ್ನ ವೈದ್ಯಕೀಯ ವೃತ್ತಿಯನ್ನೇ ತೊರೆದು ನಿರಂಜನ್ ಜೊತೆ ದೆಹಲಿ ವಾಸಕ್ಕೆ ಅಣಿಯಾಗಿದ್ದು ತಂದೆಯ ಸಂತೋಷವನ್ನು ಇಮ್ಮಡಿಸಿತ್ತು, ಏಕೆಂದರೆ ಐದು ವರ್ಷದ ಹಿಂದೆಯೇ ನಿರಂಜನ್ ತಾಯಿ ತೀರಿಕೊಂಡಿದ್ದರು. ಆದರೆ ಅಣ್ಣನ ಬೆನ್ನಲ್ಲೇ ಮಿಲ್ಟ್ರಿ ಸೇರುವ ಆತನ ದುಸ್ಸಾಧ್ಯ ಧೈರ್ಯ ದೇಶಕ್ಕಾಗಿ ಆತನ ಪ್ರಾಣತ್ಯಾಗವನ್ನೇ ನಿರೀಕ್ಷಿಸಿತ್ತೆಂಬುದು ಅರ್ಥವಾಗುವ ಹೊತ್ತಿಗೆ ಮಗನೇ ಇಲ್ಲವಾಗಿದ್ದ!



ಪತ್ನಿ ಮಗಳೊಂದಿಗೆ ನಿರಂಜನ್

ಪಠಾಣ್‌ಕೋಟ್‌ನಲ್ಲಿ ಉಗ್ರರೊಂದಿಗೆ ಹೋರಾಡಿ ದೇಶಕ್ಕಾಗಿ ಜೀವವನ್ನೇ ಸಮರ್ಪಣೆಗೈದ



ಭಾರತಮಾತೆಯ ಹೆಮ್ಮೆಯ ಪುತ್ರರಿಗೆ ಕೋಟಿ ಕೋಟಿ ನಮನಗಳು

ಸೇನೆಯ ಬಾಂಬ್ ನಿಷ್ಕ್ರಿಯ ಕಮಾಂಡೋ ಓರ್ವನ ಮನೋ ತುಮುಲದ ಕಥಾವಸ್ತುವಿದ್ದ ಚಿತ್ರ. ಕ್ಯಾಥರಿನ್ ಬಿಗಲೋ ಎಂಬ ನಿರ್ದೇಶಕಿಗೆ ಮೊಟ್ಟ ಮೊದಲ ಮಹಿಳಾ ಆಸ್ಕರ್ ವಿಜೇತೆ ಪಟ್ಟವನ್ನೂ ಕಲ್ಪಿಸಿದ 'ಹರ್ಟ್ ಲಾಕರ್' ಕತೆಯ ಸನ್ನಿವೇಶವೊಂದು ಲೆಫ್ಟಿನೆಂಟ್ ಕರ್ನಲ್ ನಿರಂಜನ್ ಪಾಲಿಗೆ



ಅಕ್ಷರಶಃ ಮುಖಾಮುಖಿಯಾದ ಸಂದರ್ಭ.

ಗೊತ್ತು; ತಾನು ಬದುಕುಳಿಯುವ ಸಾಧ್ಯತೆ ತೀರಾ ಕ್ಷೀಣ ಮತ್ತು ತಾನೇ ಧೈರ್ಯಗೆಟ್ಟರೆ ತನ್ನ ಸುತ್ತ ಬೇಟೆಗೆ ನಿಂತ ಇಪ್ಪತ್ತಕ್ಕೂ ಅಧಿಕ ಕಮಾಂಡೋಗಳ ಪ್ರಾಣಕ್ಕೆ ಕುತ್ತೆಂದು. ಪಠಾಣ್‌ಕೋಟ್ ವಾಯುನೆಲೆಗೆ ಉಗ್ರರು ನುಗ್ಗಿದ ಸುದ್ದಿ ಬಂದ ಕೇವಲ ಅರ್ಧ ಗಂಟೆಗೇ ನಿರಂಜನ್‌ಗೆ ದೆಹಲಿಯ ಎನ್‌ಎಸ್‌ಜಿ ಹೆಡ್‌ಕ್ವಾರ್ಟರ್‌ನಿಂದ ಕರೆ ಬಂದಿತ್ತು. ಬೆಳಗಿನ ಜಾವ ನಾಲ್ಕೂವರೆಗೆ ಪತ್ನಿ ರಾಧಿಕಾ ತೆಕ್ಕೆಯಲ್ಲಿದ್ದ ಮಗಳು ವಿಸ್ಮಯಳಿಗೆ ಸವಿ ಮುತ್ತೊಂದನ್ನು ಕೊಟ್ಟದ್ದೇ ಆ ನಸುಕಿನಲ್ಲಿ ಮನೆಯಿಂದ ಹೊರಬಿದ್ದವನು ನೇರವಾಗಿ ದೆಹಲಿ ವಾಯುನೆಲೆಯಿಂದ ಹೆಲಿಕಾಪ್ಟರ್ ಮೂಲಕ ಪಠಾಣ್ ಕೋಟ್‌ಗೆ ಬಂದಿಳಿದಿದ್ದ. ವಾಯುನೆಲೆಯ ಕ್ಯಾಂಟೀನ್ ಸುತ್ತಮುತ್ತಲ ದೃಶ್ಯವೇ ಸಾವಿನ ಸನ್ನಿಧಿಯಂತಿತ್ತು.

ಐದನೇ ಜಿಹಾದಿ

ಬೆಳಗ್ಗೆ ಎಂಟರ ಹೊತ್ತಿಗೆಲ್ಲ ನಿರಂಜನ್ ಸ್ಕ್ವಾಡ್ ಘರ್ಷಣೆಯ ಕೇಂದ್ರಬಿಂದುವನ್ನು ಪ್ರವೇಶಿಸಿಯಾಗಿತ್ತು. ಅಡಗಿಕೂತ ಐದನೇ ಉಗ್ರನನ್ನು ಮುಗಿಸಬೇಕೆಂದರೆ ಸತ್ತ ನಾಲ್ವರು ಉಗ್ರರ ಹೆಣಕ್ಕಂಟಿದ ಗ್ರೆನೇಡುಗಳನ್ನು ನಿಷ್ಕ್ರಿಯಗೊಳಿಸಲೇಬೇಕು. ಎನ್‌ಎಸ್‌ಜಿ ಕಮಾಂಡೋ ಪಡೆಯ ಮಹಾನಿರ್ದೇಶಕ ದುಶ್ಯಂತ್ ಸಿಂಗ್ ಇಂಗ್ಲಿಷ್ ಟಿವಿ ಚಾನಲ್ಲುಗಳಿಗೆ ಪಠಾಣ್ ಕೋಟ್ ವಾಯುನೆಲೆಯಿಂದಲೇ ಕೊಟ್ಟ ಸಂದರ್ಶನದಲ್ಲೇ ಎನ್‌ಎಸ್‌ಜಿ ಬಾಂಬ್ ಸ್ಕ್ವಾಡ್‌ನ ಲೆಫ್ಟಿನೆಂಟ್ ಕರ್ನಲ್ ನಿರಂಜನ್‌ರ ಧೈರ್ಯ ಮತ್ತು ತ್ಯಾಗದ ಸ್ಪಷ್ಟ ಚಿತ್ರಣವಿತ್ತು.

ಮೊದಲು ಸತ್ತು ಬಿದ್ದಿದ್ದ ಒಬ್ಬ ಉಗ್ರನ ಬೆನ್ನಿಗೆ ಬಿದ್ದಿದ್ದ ಬ್ಯಾಗ್‌ನಿಂದ ನಿರಂಜನ್ ಎರಡು ಸಜೀವ ಗ್ರೆನೇಡುಗಳನ್ನು ನಿಷ್ಕ್ರಿಯಗೊಳಿಸಿದ್ದಾರೆ. ಅನತಿ ದೂರದಲ್ಲಿ ಬಿದ್ದಿದ್ದ ಮತ್ತೊಂದು ಹೆಣವನ್ನು ಇನ್ನೇನು ತಡಕಾಡಬೇಕೆನ್ನುವಷ್ಟರಲ್ಲಿ ಮರೆಯಲ್ಲಿ ಅವಿತು ಕುಳಿತಿದ್ದ ಐದನೇ ಜಿಹಾದಿ ಗುಂಡು ಹಾರಿಸಿದ್ದಾನೆ. ಸುತ್ತುವರಿದಿದ್ದ ಕಮಾಂಡೋಗಳು ಫೈರಿಂಗ್ ಕಂಡುಬಂದ ಕ್ಯಾಂಟೀನ್‌ನ ಸಂದಿಯೊಂದರತ್ತ ಗುಂಡಿನ ಮಳೆಗರೆದಿದ್ದಾರೆ. ಕೊಂಚ ಹೊತ್ತು ನಿಶಬ್ದ. ಎರಡನೇ ಹೆಣವನ್ನು ತಡಕಾಡಿದ ನಿರಂಜನ್‌ಗೆ ಯಾವುದೇ ಗ್ರೆನೇಡ್ ಸಿಗಲಿಲ್ಲ, ಆದರೆ ಕ್ಯಾಂಟೀನ್ ಮೂಲೆಗೂ ಮುನ್ನ ಹಳೆಯ ಟಾಯ್ಲೆಟ್‌ಗೆ ಹೊಂದಿಕೊಂಡಿದ್ದ ಪಿಲ್ಲರ್ ಮರೆಯಲ್ಲಿ ಬಿದ್ದ ಮೂರನೇ ಉಗ್ರನ ಹೆಣವಿತ್ತಲ್ಲ. ಅದು ಸಾವಿನ ಸರಪಣಿ...!

ಸುತ್ತಮುತ್ತ ನಿರಾತಂಕದ ಪರಿಸ್ಥಿತಿಯಿದ್ದರೆ ನಿಧಾನವಾಗಿ ಎಚ್ಚರಿಕೆಯಿಂದ ಆಧುನಿಕ ಸಲಕರಣೆ ಬಳಸಿ ಗ್ರೆನೇಡನ್ನು ನಿಷ್ಕ್ರಿಯಗೊಳಿಸುವುದಕ್ಕೂ, ಎಲ್ಲಿಂದ ಗುಂಡು ಹಾರಿಬರುತ್ತೋ ಯಾವ ಕ್ಷಣದಲ್ಲಿ ಅಡಗಿ ಕೂತವನು ಗ್ರೆನೇಡ್ ಎಸೆಯುತ್ತಾನೋ ಎಂಬ ಗಾಬರಿ, ಆತಂಕದಿಂದ ಬಿದ್ದ ಹೆಣದ ಗ್ರೆನೇಡ್‌ಗೆ ಕೈಹಾಕುವುದಕ್ಕೂ ವ್ಯತ್ಯಾಸವಿದೆ. ಇಂಥ ಆತಂಕಕಾರಿ, ಅಪಾಯಕಾರಿ, ಜೀವಘಾತುಕ ಹುತ್ತಕ್ಕೆ ಕೈಹಾಕುವ ಮುನ್ನ ಯಾವುದೇ ಎಚ್ಚರಿಕೆ, ತಾಳ್ಮೆ, ಸುರಕ್ಷತೆಗೂ ಆಸ್ಪದವಿರುವುದಿಲ್ಲ ಅವಕಾಶವೂ ಇಲ್ಲ. ಅದು ಅಕ್ಷರಶಃ ಜಾನ್ ಬಾಜಿ!

ಭೀಕರ ಬ್ಲಾಸ್ಟ್....!

ಮೂರನೇ ಹೆಣವನ್ನು ತೆವಳಿಕೊಂಡೇ ಸಮೀಪಿಸಿದ ನಿರಂಜನ್ ಬಿದ್ದ ಹೆಣದ ಪ್ಯಾಂಟಿನ ಸೈಡ್ ಪ್ಯಾಕೆಟ್ಟಿನಲ್ಲಿದ್ದ



ಸಜೀವ ಗ್ರೆನೇಡ್‌ಗೆ ಉದ್ದದ ಕ್ಲಿಪ್ ಒಂದನ್ನು ಹಾಕಿ ಹೊರಗೆಳೆಯಲೆತ್ನಿಸಿದ್ದಾರೆ. ಸುಲಭಕ್ಕದು ಹೊರಬರಲಿಲ್ಲ. ಮತ್ತೆ ಪ್ರಯತ್ನಿಸಿದ್ದಾರೆ. ಬಿದ್ದ ಹೆಣದ ಭಾರಕ್ಕೆ ಸೈಡ್ ಪ್ಯಾಕೆಟ್ ಬಿಗಿಯಾಗಿತ್ತಲ್ಲ. ಉಳಿದ ಒಂದೇ ದಾರಿಯೆಂದರೆ ಕೈಹಾಕಿ ತೆಗೆಯುವುದು. ಅದಕ್ಕೆಂದೇ ಮೆಟಲ್ ಗ್ಲೌಸ್ ಇದೆ ನಿಜ. ಹಾಗಂತ ಸಜೀವ ಗ್ರೆನೇಡ್ ಹೆಚ್ಚು ಕುಲುಕುವಂತಿಲ್ಲ. ಬೇರೆ ದಾರಿಯೇ ಇಲ್ಲ. ಪ್ರಾಣ ಪಣಕ್ಕಿಟ್ಟೇ ಕೈಹಾಕಿದ್ದಾರೆ ನಿರಂಜನ್. ಎರಡೇ ಕ್ಷಣ; ಸ್ಫೋಟದ ಭೀಕರ ಸದ್ದು. ಏನಾಗುತ್ತಿದೆ ಎಂದು ಕವರ್‌ನ ಮರೆಯಲ್ಲಿ ಸುತ್ತುವರಿದಿದ್ದ ಕಮಾಂಡೋಗಳ ದೃಷ್ಟಿ ಹರಿಯುವ ಮೊದಲೇ ಆ ಗಂಧಕದ ಹೊಗೆಯಲ್ಲಿ ಛಿದ್ರಗೊಂಡಿದ್ದರು ನಿರಂಜನ್!

ಸಣ್ಣ ನರಳಿಕೆ, ಒಂದೇ ಒಂದು ಚೀತ್ಕಾರ ಯಾವುದಕ್ಕೂ ಆಸ್ಪದವೇ ಇಲ್ಲದಂತೆ ಜಿಹಾದಿಯ ಗ್ರೆನೇಡಿಗೆ ಬಲಿಯಾಗಿದ್ದರು ನಿರಂಜನ್. ನಿರಂಜನ್ ಚಕಮಕಿಯಲ್ಲಿ ಸತ್ತಿಲ್ಲ ಎನ್ನುವವರುಂಟು. ಗ್ರೆನೇಡ್ ನಿಷ್ಕ್ರಿಯಗೊಳಿಸುವಾಗ ಮುನ್ನೆಚ್ಚರಿಕೆ ವಹಿಸಬೇಕಿತ್ತು ಎಂದು ಕೊಂಕುವವರುಂಟು. ಅವರೇ ಎಚ್ಚರ ತಪ್ಪಿದರೆಂದು ವಾದಿಸುವವರುಂಟು. 'Hurt locker' ಚಿತ್ರದ ಬಹುತೇಕ ಲ್ಯಾಂಡ್ ಮೈನ್ ನಿಷ್ಕ್ರಿಯಗೊಳಿಸುವ ದೃಶ್ಯಗಳಲ್ಲಿ ಕ್ರಾಸ್ ಫೈರಿಂಗ್ ಅಥವಾ ಘರ್ಷಣೆ ಚಕಮಕಿಯ ಸನ್ನಿವೇಶವಿಲ್ಲ. ಆದರೆ ಅವಿತು ಕೂತವರೆಷ್ಟು ಮಂದಿ ಎಂಬುದೇ ಗೊತ್ತಿಲ್ಲದೆ, ಯಾವ ಕ್ಷಣದಲ್ಲಿ ಅಡಗಿ ಕೂತವನು ಬಾಂಬ್ ಎಸೆದಾನೆಂಬ ನಿರೀಕ್ಷೆಯಿಲ್ಲದೆ; ಒಂದೆಡೆ ಅವಿತಿರುವಾತನ ಗುಂಡು ಮತ್ತೊಂದೆಡೆ ಬಿದ್ದ ಹೆಣದ ಜೇಬಿನ ಗ್ರೆನೇಡು, ಸುತ್ತುವರಿದ ಕಮಾಂಡೋಗಳ ಪ್ರಾಣ, ಅಡಗಿರುವಾತನೆಲ್ಲಿ ತಪ್ಪಿಸಿಕೊಂಡಾನೋ ಎಂಬ ಆತಂಕ, ಗಾಬರಿ, ಅವಸರದ ಸನ್ನಿವೇಶವಿದೆಯಲ್ಲ- ಅದು ಅಕ್ಷರಶಃ ಸಾವಿನ ಸುಳಿ, ಮೃತ್ಯುಪಂಜರ. ನಿರಂಜನ್ ತನ್ನ ಪ್ರಾಣತೆತ್ತು ಗ್ರೆನೇಡ್‌ಗೆ ಕೈಹಾಕದೇ ಹೋಗಿದ್ದರೆ ಐದನೇ ಉಗ್ರನನ್ನು ಸುತ್ತುವರಿದಿದ್ದ



ಕಣ್ಣೀರಿಟ್ಟ ಪತ್ನಿ

20 ಮಂದಿ ಕಮಾಂಡೋಗಳು ಹೆಣವಾಗಬೇಕಿತ್ತು. ಅಡಗಿ ಕೂತಿದ್ದ ಜಿಹಾದಿ ಯಾವ ಕ್ಷಣಕ್ಕಾದರೂ ಪರಾರಿಯಾಗುತ್ತಿದ್ದ. ನಿರಂಜನ್ ಮಾಡಿದ ತ್ಯಾಗದ ಫಲವಾಗೇ ಇಪ್ಪತ್ತು ಮಂದಿ ಕಮಾಂಡೋಗಳ ಪ್ರಾಣ ಉಳಿಯಿತು; ಐದನೇ ಜಿಹಾದಿಯನ್ನು ನೆಲಕ್ಕುರುಳಿಸಲು ಸಾಧ್ಯವಾಯಿತು.

ಇದು ಕೇವಲ ಕತೆಯಲ್ಲ. ಪಠಾಣ್ ಕೋಟ್ ರಕ್ತಪಾತದ ಮೂರನೇ ದಿನ ಅಂದರೆ ಜನವರಿ ನಾಲ್ಕರ ಮಧ್ಯಾಹ್ನ ಪಠಾಣ್‌ಕೋಟ್ ಏರ್‌ಬೇಸ್‌ನ ಎದುರು ನಿಂತೇ ಎನ್‌ಎಸ್‌ಜಿ ಕಮಾಂಡೋ ಪಡೆಯ ಡೈರೆಕ್ಟರ್ ಜನರಲ್ ದುಶ್ಯಂತ್ ಸಿಂಗ್ ಇಂಗ್ಲಿಷ್ ನ್ಯೂಸ್ ಚಾನಲ್‌ಗಳ ವರದಿಗಾರರಿಗೆ ನೀಡಿದ ವಿವರಣೆಯ ಅಕ್ಷರ ರೂಪವಷ್ಟೆ. ಶನಿವಾರ ಗಾಯಗೊಂಡ ನಿರಂಜನ್ ಭಾನುವಾರ ಸತ್ತರೆಂದು ಅದ್ಯಾರು ಹೇಳಿದರೆಂದು ಪತ್ರಿಕೆಗಳು ಬರೆದವೋ ಗೊತ್ತಿಲ್ಲ. ಯಾವ ಕಾರಣಕ್ಕೆ ನಿರಂಜನ್ ಸಾವನ್ನು ತಡ ಮಾಡಿ ಪ್ರಕಟಿಸಲಾಯಿತೋ ಅರ್ಥವಾಗುತ್ತಿಲ್ಲ. ನಿಜವಾದ 'Hurt locker' ಹಾಲಿವುಡ್ ಚಿತ್ರದ ನಾಯಕನಲ್ಲ, ನಮ್ಮ ಹೆಮ್ಮೆಯ ಹುತಾತ್ಮ ನಿರಂಜನ್ ಕೆ. ಕುಮಾರ್!

■ ರಾ. ಸೋಮನಾಥ್

ತಂದೆಯಿನ್ನು ಬರಲಾರನೆಂದು ಹಸುಳೆಗೆ ಹೇಳುವುದು ಹೇಗೆ?



ನಿರಂಜನ್ ಮಗಳು ವಿಸ್ಮಯ

ಬಿಇಎಲ್ ಗ್ರೌಂಡಿನಲ್ಲಿ ಅಂತಿಮ ನಮನ ಸಲ್ಲಿಸಲೆಂದೇ ನಿರಂಜನ್‌ರ ಪಾರ್ಥಿವವನ್ನಿರಿಸಲಾಗಿತ್ತಲ್ಲ; ಕಮ್ಮಿಯೆಂದರೂ ಬೆಂಗಳೂರಿನ ಐದು ಸಾವಿರ ಮಂದಿ ನಾಗರಿಕರು ಕೈಮುಗಿದರು, ಕಣ್ಣೀರಿಟ್ಟರು. ಇವರ್‍ಯಾರೂ ನಿರಂಜನ್‌ರ ಸಂಬಂಧಿಗಳಾಗಲಿ, ಪರಿಚಿತರಾಗಲಿ ಅಲ್ಲ, ಉಗ್ರರ ವಿರುದ್ಧದ ಆತನ ತ್ಯಾಗ, ಧೈರ್ಯ, ಸಾಹಸವನ್ನು ಓದಿ ಕೇಳಿ ಅರ್ಥೈಸಿಕೊಂಡವರು.

ತಂದೆ ಶಿವರಾಜನ್ ಕಣ್ಣಲ್ಲಿ ನೀರಿರಲಿಲ್ಲ, ಅಳಲು ತಾಯಿಯಂತೂ ಬದುಕಿರಲಿಲ್ಲ. ಪತ್ನಿ ರಾಧಿಕಾ ಮುಖದಲ್ಲಿ ವಿಷಾದವಿತ್ತಾದರೂ ಧೃತಿಗೆಟ್ಟಿರಲಿಲ್ಲ. ಅಣ್ಣ, ತಮ್ಮ, ಸಂಬಂಧಿಕರ್‍ಯಾರೂ ಅತ್ತಿದ್ದು ಕಂಡುಬರಲಿಲ್ಲ. ಆದರೆ ಆ ಮಗುವಿತ್ತಲ್ಲ, ಇನ್ನೂ ಹದಿನೆಂಟು ತಿಂಗಳ ಹಾಲುಗಲ್ಲದ 'ವಿಸ್ಮಯ' ಎಂಬ ಹೆಸರು ಹೊತ್ತ, ತನ್ನ ತಂದೆಯಿನ್ನೆಂದೂ ಬರಲಾರ ಎಂಬುದನ್ನೂ ಅರಿಯದೇ ತಾಯಿಯ ತೆಕ್ಕೆಯೇರಿ ಪಿಳಿಪಿಳಿ ನೋಡುತ್ತಿತ್ತಲ್ಲ-

ಅದನ್ನು ನೋಡಿದ ಯಾರಿಗಾದರೂ ಕಣ್ಣೀರು ಬಾರದೇ ಇರಲಿಲ್ಲ!

ನನ್ನ ಅಂಗಳ

ಕತೆ

ಆಲಿಯಾ ಲಾಹೋರ್‌ಗೆ ಬಂದು ಮಾವನ ಜೊತೆ ಸರ್ಕಾರಿ ಮನೆಯಲ್ಲಿ ನಾಲ್ಕೈದು ದಿನ ಕಳೆಯಬೇಕಾಯಿತು. ಅದೂ ಹೇಗೆಂದರೆ ಒಂದು ಪುಟ್ಟ ಕೋಣೆಯಲ್ಲಿ ಬಂಧಿಯಾಗಿ ಅವಳು ಬದ್ದಿರಬೇಕಿತ್ತು. ಈ ಭಿನ್ನ ಹಾಗೂ ಖಿನ್ನ ಪರಿಸರದಲ್ಲಿ ಜೀವನ ಹೇಗೆ ಸಾಗಿಸುವುದೆಂದು ಅವಳು ಯೋಚಿಸುತ್ತಲೇ ಇದ್ದಳು. ಹೌದು, ತಾಯಿ ತುಂಬ ಗೆಲುವಾಗಿದ್ದಳು. ತನ್ನ ಸೋದರ ಮತ್ತು ತನ್ನ ಅತ್ತಿಗೆ ಜೊತೆ ವಾಸ ಮಾಡಬೇಕೆನ್ನುವ ಅವಳ ಬಹಳ ಕಾಲದ ಬಹುದೊಡ್ಡ ಆಸೆ ಇದೀಗ ಈಡೇರಿತ್ತು. ಅವರು ಜೀವನಮದ್ದಕ್ಕೂ ಜೊತೆಗೆ ಇರುವ ಯೋಜನೆ ಹಾಕಿಕೊಂಡಿದ್ದರು. ಆಲಿಯಾ ಎಲ್ಲರಿಂದ ದೂರವೇ ಇರುತ್ತಿದ್ದರಿಂದ ಅವಳ ಬಗ್ಗೆ ಅವರಿಗೆಲ್ಲ ಎಲ್ಲಿಲ್ಲದ ಕೋಪ. ಏನಿಲ್ಲವೆಂದರೂ ಅತ್ತಿಗೆ ಜೊತೆ ಘುಸ್‌ಫುಸ್ ಇಂಗ್ಲಿಷ್‌ನಲ್ಲಿ ಮಾತನಾಡುವ ಕಸರತ್ತು ಮಾಡತೊಡಗಿದ್ದಳು. ಇವಳು ಈ ನಾಲ್ಕು ದಿನಗಳಲ್ಲಿ ತನ್ನ ದೊಡ್ಡ ಕಕ್ಕ ಮತ್ತು ಕಕ್ಕಿಗೆ ಪುಟಗಟ್ಟಲೆ ಪತ್ರ ಬರೆದಿದ್ದಳು.

ಐದನೆಯ ದಿನ ಮಾವ ಒಂದು ಪುಟ್ಟ ಮನೆಯ ಬೀಗ ತೆರೆಯಿಸಿ ತಾಯಿಗೆ ತನ್ನ ಮನೆಗೆ ಹೊರಟುಹೋಗುವುದನ್ನು ಅನಿವಾರ್ಯಗೊಳಿಸಿದ. ಹೊರಟುಹೋಗುತ್ತಿದ್ದಂತೇ ಆಂಗ್ಲ ಮಹಿಳೆಯರು ತಮ್ಮ ತಾಯಂದಿರ ಜೊತೆ ಸಹ ಇರಬಯಸುವುದಿಲ್ಲವೆಂದು ತಾಯಿಗೆ ತಿಳಿಹೇಳಿದ.

ತಾಯಿ ಆಲಿಯಾಳಿಗೆ ಈ ವಿಷಯ ಗೊತ್ತಾಗದಿರಲೆಂದು ಬಯಸಿದ್ದಳು. ಆದರೆ ಅವಳು ತನ್ನ ಮನೆಗೆ ಹೊರಟಾಗ ಎಲ್ಲರೂ ಬೇರೆಬೇರೆಯಾಗಿ ಇರುವುದೇ ವಾಸಿ ಎಂದು ಮಾಮಿ ಸಹ ತನ್ನ ಹರಕುಮುರುಕು ಉರ್ದುವಿನಲ್ಲಿ ತಿಳಿಹೇಳಿದಳು.

ಮನೆಯಲ್ಲಿ ಪ್ರತಿಯೊಂದು ವಸ್ತು ತನ್ನ ಸ್ಥಳದಲ್ಲಿ ಇತ್ತು. ಊಟದ ಮೇಜಿನ ಮೇಲೆ ಪಾತ್ರೆಗಳನ್ನು ಓರಣವಾಗಿ ಇರಿಸಲಾಗಿತ್ತು. ಧೂಳು ಪಾತ್ರೆಗಳ ಕುಸುರಿಯನ್ನೆಲ್ಲ ಕಾಣದಂತೆ ಮಾಡಿತ್ತು. ತೆರೆಯ ಆಚೆಯಿಂದ ಯಾರೋ ಬಂದು ಊಟಕ್ಕೆ ಕುಳಿತುಕೊಳ್ಳಲಿದ್ದಾರೇನೋ ಎನಿಸುತ್ತಿತ್ತು. ಅಡುಗೆ ಮನೆಯಲ್ಲಿ ಹಿತ್ತಾಳೆ ಪಾತ್ರೆಗಳನ್ನು ಕಪಾಟನಲ್ಲಿ ಇರಿಸಲಾಗಿತ್ತು. ಕೆಲವು ಪಾತ್ರೆಗಳು ನೆಲದ ಮೇಲೆ ಬಿದ್ದುಕೊಂಡಿದ್ದವು. ಡ್ರಾಯಿಂಗ್ ರೂಮಿನ ಹಾಸು ಮತ್ತು ಸೋಫಾ ಮೇಲೆ ಧೂಳು ಅಡರಿತ್ತು. ಹೂದಾನಿಯಲ್ಲಿ ಇರಿಸಲಾಗಿದ್ದ ಹೂಗಳು ಉದುರಿ ಮೇಜಿನ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಕೇವಲ ಒಣಗಿದ ಕಪ್ಪನೆಯ ಟೊಂಗೆಗಳು ಹೂದಾನಿಯಲ್ಲಿ ಇನ್ನೂ ಸಿಕ್ಕಿಕೊಂಡಿದ್ದವು. ಮಲಗುವ ಕೋಣೆಯಲ್ಲಿ ಮಂಚದ ಮೇಲೆ ಹಾಸಿಗೆ ಹಾಸಲಾಗಿತ್ತು. ತಲೆದಿಂಬಿನ ಹಿಂದೆ ಇದ್ದ ಟೀಪೈ ಮೇಲೆ ಇರಿಸಿದ್ದ ಲ್ಯಾಂಪ್ ಬೋರಲು ಬಿದ್ದಿತ್ತು. ಈ ಕೋಣೆಗೆ ಹೊಂದಿಕೊಂಡಂತೆ ಇದ್ದ ಪುಟ್ಟ ಕೋಣೆಯಲ್ಲಿನ ಅಗ್ನಿಕುಂಡದ ಮೇಲೆ ಕೃಷ್ಣನ ಮೂರ್ತಿಯನ್ನಿರಿಸಲಾಗಿತ್ತು. ಮಾಲೆಯ ಹೂಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಕೊರಳಲ್ಲಿ ಕೇವಲ ಹಳದಿ ದಾರ ನೇತಾಡುತ್ತಿತ್ತು.

"ಓಹ್, ಇದನ್ನು ಇಲ್ಲಿಂದ ಎತ್ತಂಗಡಿ ಮಾಡಿರಿ. ಹೊರಗೆ ಒಯ್ದು ಮಕ್ಕಳಿಗೆ ಕೊಟ್ಟರೆ ಅವು ಅದರೊಂದಿಗೆ ಆಡಬಹುದು." ಇಲ್ಲಿಗೆ ಬಂದಮೇಲೆ ತಾಯಿ ಹೀಗೆ ಅದೆಷ್ಟೋ ಸಲ ಹೇಳಿದ್ದಳು.



ಆಲಿಯಾ ತಾಯಿಗೆ ಉತ್ತರ ಕೊಡುವ ಗೊಡವೆಗೇ ಹೋಗಲಿಲ್ಲ. ಮೂರ್ತಿ ಹೀಗೇ ಎಷ್ಟೋ ದಿನ ಇದ್ದಲ್ಲೇ ಇತ್ತು. ನಂತರ ಈ ಕೋಣೆಯನ್ನು ಉಪಯೋಗಿಸದೇ ಇರುವುದು ತಾಯಿಗೆ ಅಸಾಧ್ಯವೆನಿಸಿದಾಗ ಆಲಿಯಾ ಮೂರ್ತಿಯನ್ನು ತನ್ನ ಪೆಟ್ಟಿಗೆಯಲ್ಲಿ ಬಚ್ಚಿಟ್ಟಳು.

ದಿನಗಳು ತುಂಬ ಬೇಸರದಲ್ಲಿ ಕಳೆಯತೊಡಗಿದವು. ಕುಂತಲ್ಲೇ ಕುಂತು ತಲೆ ಚಿಟ್ಟು ಹಿಡಿಯಿತು. ಅವಳ ಪತ್ರಗಳಿಗೆ ಉತ್ತರವೂ ಬರುತ್ತಿರಲಿಲ್ಲ, ಸಂಜೆ ಕಳೆಯುವುದು ದುಸ್ಸಾಧ್ಯವಾಗಿತ್ತು. ನೆರವು ಕಮಿಟಿಗಳು ಮನೆ ಮನೆ ಸುತ್ತುತ್ತಿದ್ದವು. ನಮ್ಮ ನಿರಾಶ್ರಿತ ಸೋದರರಿಗೆ ನೆರವಾಗಿರಿ. ನಿರಾಶ್ರಿತರ ತಂಡಗಳು ಬರುತ್ತಿವೆ. ನೆರವಾಗಿರಿ ಎಂದು ಮನವಿ ಮಾಡಿಕೊಳ್ಳಲಾಗುತ್ತಿತ್ತು. ನಾವು ಸಹ ನಿರಾಶ್ರಿತರೇ ಎಂದು ತಾಯಿ ತುಂಬ ನಮ್ರವಾಗಿ ಹೇಳುತ್ತಿದ್ದಳು. ಜನರೇನೋ ಹೊರಟುಹೋಗುತ್ತಿದ್ದರು. ತಾಯಿಯ ಕಣ್ಣಿಗೆ ಮಣ್ಣೆರಚಿ ಎಲ್ಲವನ್ನೂ ಅವರಿಗೆ ಕೊಟ್ಟು ಬಿಡಬೇಕೆಂದು ಆಲಿಯಾಗೆ ಅನ್ನಿಸುತ್ತಿತ್ತು.

ಮಾವ ಮತ್ತು ಅವನ ಬೇಗಮ್ ಸಾಹೇಬರು ಒಮ್ಮೊಮ್ಮೆ ಇದ್ದಕ್ಕಿದ್ದಂತೆ ಸಂಜೆ ಬಂದುಬಿಟ್ಟರೆ ಇವರು ಯಾವ ಬಿಲದಲ್ಲಿ ಅಡಗಿಕೊಂಡಿದ್ದರೋ ಆಲಿಯಾಗೆ ತಿಳಿಯದಾಗುತ್ತಿತ್ತು, ತಾಯಿಗೆ ದಿಗಿಲು. ಯಾರು ತನ್ನ ಅತ್ತಿಗೆಯನ್ನು ಗೌರವಿಸಬಲ್ಲರೋ ತಿಳಿಯದಾಗಿತ್ತು.

ಕೆಲದಿನ ಕೆಲಸವಿಲ್ಲದೆ ಸುಮ್ಮನೆ ಕುಳಿತುಕೊಂಡ ಮೇಲೆ ಅವಳು ಒಂದು ಹೈಸ್ಕೂಲಿನಲ್ಲಿ ಕೆಲಸಕ್ಕೆ ಅರ್ಜಿ ಹಾಕಿ ಕೊಂಡಳು. ಅವಳ ಅರ್ಜಿಯನ್ನು ಶೀಘ್ರವೇ ಪರಿಗಣಿಸಲಾಯಿತು. ನೌಕರಿ ಅವಳ ಹಲವು ಸಮಸ್ಯೆಗಳು ಹಾಗೂ ಕಷ್ಟಕೋಟಲೆಗಳಿಗೆ ಪರಿಹಾರವಾಗಿ ಪರಿಣಮಿಸಿತು.

ಒಂದು ದಿನ ಮಾವ ಒಬ್ಬರೇ ಬಂದಾಗ ಮನೆಯನ್ನು ತಾಯಿಗೆ ಅಲಾಟ್ ಮಾಡಿಸಿರುವುದಾಗಿಯೂ ಅದನ್ನು ಇನ್ನು ಯಾವ ಕಾರಣಕ್ಕೂ ಬಿಟ್ಟು ಕೊಡಬಾರದೆಂದೂ ತಿಳಿಸಿದರು. ನಂತರ ಅವರು ಫರ್ನಿಚರ್ ಇತ್ಯಾದಿಯ ರಶೀದಿಗಳನ್ನು ಕೊಟ್ಟರು. ಯಾರಾದರೂ ಕೇಳಿದರೆ ಇವನ್ನು ತೋರಿಸಬೇಕು. ನಾವು ಇಲ್ಲಿಗೆ ಬಂದಮೇಲೆ ಇವನ್ನೆಲ್ಲ ಖರೀದಿಸಿರುವುದಾಗಿ ಹೇಳಬೇಕು ಎಂದರು.

ತಾಯಿ ತನ್ನ ಸೋದರನ ಚಾಣಾಕ್ಷತನವನ್ನು ಮೆಚ್ಚಿಕೊಂಡಳು. "ಸೋದರನಿದ್ದರೆ ಇಂತಹವನಿರಬೇಕು. ಅವನು ನನ್ನ ಸುಖ-ಸಂತೋಷಕ್ಕಾಗಿ ಏನೆಲ್ಲ ಮಾಡಿದ್ದಾನೆ" ಎಂದಳು.

ಆಲಿಯಾ ಸುಮ್ಮನೆ ಕೇಳುತ್ತಿದ್ದಳು. ಇದೆಲ್ಲ ಏನು ನಡೆದಿದೆ? ಯಾರ ಹಕ್ಕನ್ನು ಯಾರು ಕಸಿದುಕೊಳ್ಳುತ್ತಿದ್ದಾರೆ? ಈ ರಸೀದಿಗಳು ಎಲ್ಲಿಂದ ಬಂದವು? ಈ ಮನೆ ಅವಳದು ಹೇಗಾಯಿತು? ಅವಳಿಗೆ ಯಾವುದೂ ತಿಳಿಯದಾಯಿತು. ಆಲಿಯಾ ಇದನ್ನೆಲ್ಲ ಯಾರಿಗೆ ಹೇಳಬೇಕು? ತಾಯಿ ತಾಯಿಯಾಗಿಯೇ ಉಳಿದಿದ್ದಳು. ಅವಳಿಗೆ ಸಂಬಳ ಬರತೊಡಗುತ್ತಲೇ, ಮನೆಯ ಒಡತಿಯಾಗುತ್ತಲೇ ಅವಳು ಮೊದಲಿನಂತೇ ಗರ್ವಿಷ್ಠೆ ಹಾಗೂ ಸ್ವಾರ್ಥಿಯಾಗಿದ್ದಳು.

ಸಮಯ ಮೆಲ್ಲಗೆ ತೆವಳುತ್ತಲಿತ್ತು. ಶಾಲೆಯಿಂದ ಬಂದವಳೇ ಅವಳು ತಲೆ ರೋಸಿ ಹೋಗಿ ಸದಾ ಅಲೆಯುತ್ತಿದ್ದಳು. ಅಕ್ಕಪಕ್ಕದ ಮನೆಯವರೊಂದಿಗೂ ಸಹ ಬೆರೆಯುತ್ತಿರಲಿಲ್ಲ, ಜನ ಅದೆಲ್ಲಿಂದ ಬಂದು ವಾಸ್ತವ್ಯ ಹೂಡುತ್ತಿದ್ದರೋ!

ತನ್ನತ್ತ ದೃಷ್ಟಿ ಬೀರುವುದಕ್ಕೂ ತಾಯಿಗೆ ಬಿಡುವು ಇರುತ್ತಿರಲಿಲ್ಲ, ಇಡೀ ದಿನ ಮನೆ ನೋಡಿಕೊಳ್ಳುವುದರಲ್ಲೇ ಕಳೆದುಹೋಗುತ್ತಿತ್ತು, ಹತ್ತು ರೂಪಾಯಿ ಸಂಬಳದ ಮೇಲಿದ್ದ ಕೆಲಸದವಳು ಯಾವುದೇ ವಸ್ತುವನ್ನು ಸ್ವಲ್ಪ ಜೋರಾಗಿ ಇರಿಸಿದಳೆಂದರೆ ತಾಯಿಯ ಹೃದಯಕ್ಕೆ ಬರೆ ಬಿದ್ದಂತಾಗುತ್ತಿತ್ತು. "ಇಷ್ಟೊಂದು ದುಬಾರಿ ಬೆಲೆ ತೆತ್ತು ಈ ವಸ್ತುಗಳನ್ನು ಖರೀದಿಸಲಾಗಿದೆ. ಸ್ವಲ್ಪ ಹುಷಾರಾಗಿ ಕೆಲಸ ಮಾಡುವುದಿಲ್ಲ, ಎಚ್ಚರ ವಹಿಸಿ ಕೆಲಸ ಮಾಡು" ಎನ್ನುತ್ತಿದ್ದಳು.

ಬಹಳ ದಿನ ಕಳೆದಿರಲಿಲ್ಲ, ಅಷ್ಟರಲ್ಲಿ ಮಾವನಿಗೆ ಕರಾಚಿಗೆ ವರ್ಗವಾಯಿತು. ಅವರು ತಮ್ಮನ್ನು ಬೀಳ್ಕೊಂಡು ಹೋಗುವಾಗ ತಾಯಿ ಅತ್ತೂ ಅತ್ತೂ ಕಂಗಾಲಾಗಿದ್ದಳು. ಅವಳ ಕಳವಳ ಕಂಡು ಅವಳ ಅತ್ತಿಗೆ ಮುಗುಳ್ನಕ್ಕಳು. "ನಮ್ಮ ಮಕ್ಕಳು ಸಹ ಬಹಳ ದೂರ ದೂರ ಹೋಗುವರು. ಆದರೆ ಯಾರೂ ಅಳುವುದಿಲ್ಲ" ಎಂದಳು.

ಆಲಿಯಾಳಿಗೆ ಅವರು ಹೋಗಿದ್ದು ಆಘಾತ ಇಲ್ಲವೆ ಸಂತಸದ ವಿಷಯವೆನಿಸಲಿಲ್ಲ, ಹೋದರೆ ಹೋದರು. ಅವಳಿಗೆ ಅವರೊಂದಿಗೆ ಇದ್ದ ಸಂಬಂಧವೂ ಸಂಬಂಧವೆ? ಇಲ್ಲಿಗೆ ಬಂದನಂತರ ಆಲಿಯಾ ತನ್ನ ತಂದೆಯಂತ ನನ್ನನ್ನು ಇಷ್ಟಪಡುವುದಿಲ್ಲ ಎಂದು ಎನ್ನುತ್ತಿದ್ದರು.

ಅವಳು ಇಂತಹ ಮಾತುಕೇಳಿ ನಕ್ಕು ಬಿಡುತ್ತಿದ್ದಳು. ಆಗ ಅವಳಿಗೆ ತಂದೆ ಅದೆಷ್ಟು ನೆನಪಾಗುತ್ತಿದ್ದರು! ಆದರೆ ಈಗಂತೂ ಅವಳು ಅವರ ಗೋರಿಯನ್ನೂ ಬೇರೆ ದೇಶದಲ್ಲಿ ಬಿಟ್ಟುಬಂದಿದ್ದಳು. ಅಲ್ಲಿಯ ಸಂಬಂಧವೆಲ್ಲ ಕಳಚಿಹೋಗಿತ್ತು. ಇಲ್ಲಿಯವರೆಗೆ ಯಾರೂ ಅವಳ ಪತ್ರಗಳಿಗೆ ಉತ್ತರ ಸಹ ಕೊಟ್ಟಿರಲಿಲ್ಲ.

ಮೂಲ ಉರ್ದು: ಖದೀಜಾ ಮಸ್ತೂರ್
ಕನ್ನಡ: ಹಸನ್ ನಯೀಂ ಸುರಕೋಡ

ಸಿದ್ದು ಪರ್ಯಾಯದಲ್ಲಿ ಭಾಗವಹಿಸಕೂಡದು

ಉಡುಪಿಯ 'ಕುಡ್ಲೇವ' ಕುಖ್ಯಾತಿಯ ಪೇಜಾವರರ ಪರ್ಯಾಯೋತ್ಸವಕ್ಕೆ ಭರ್ಜರಿ ತಯಾರಿಗಳು ನಡೆಯುತ್ತಿವೆ. ಉಡುಪಿಯಲ್ಲಿ ತುಂಬಿರುವ ಕೆಲ ಪ್ರಗತಿಪರ ಗತಿಗೆಟ್ಟವ್ರುಗಳು ರೊಳ್ಳೆ ತೆಗೆದು ತಮ್ಮ ಈ ಪರ್ಯಾಯಕ್ಕೆ ಹಾನಿಮಾಡ ದಿರಲೆಂದು ಜಿಲ್ಲೆಯ ವರಿಷ್ಠಾಧಿಕಾರಿ ಅಣ್ಣಾಮಲೈಯವರನ್ನು ರಾಜ್ಯದ ಗೃಹಮಂತ್ರಿ ಪರಮ್‌ರ ಪರಮಗುರುಗಳಂತಿರುವ ಚಂಭಟ್ಟನನ್ನು ಛೂಬಿಟ್ಟು ಎತ್ತಿ ದೂರಕ್ಕೆ ಬಿಸಾಕಿ ತಮ್ಮ ಅಡಿಯಾಳಂತಿರುವ ಶಿಷ್ಯ ದಿಲೀಪನನ್ನು ಉಡುಪಿಗೆ ಕರೆತರುವ ಕುಡ್ಲೇವ ಸ್ವಾಮಿಯ ಪ್ಲಾನು ಸದ್ಯಕ್ಕೆ ತಲೆಕೆಳಗಾಗಿದೆ. ಇದಕ್ಕಾಗಿ ಸಿದ್ದರಾಮಯ್ಯನವರ ಸರಕಾರವನ್ನು ಅಭಿನಂದಿಸಲೇಬೇಕು. ಆದರೆ ಈ ಕಳ್ಳಕೂಟದ ಪರ್ಯಾಯವನ್ನು ನಾಡಹಬ್ಬದ ಮಟ್ಟಕ್ಕೇರಿಸಲು ಕಾರ್ಯಕ್ರಮಕ್ಕೆ ಸ್ವತಃ ಮುಖ್ಯಮಂತ್ರಿಯ ಉಪಸ್ಥಿತಿಗಾಗಿ ಹಾತೊರೆದ ಪೇಜಾವರರ ಈ ದುರಾಲೋಚನೆಯ ಹಿಂದಿನ ಮರ್ಮವನ್ನು ಸಿದ್ದು ಸರಕಾರ ಅರಿತು ಇದೇರೀತಿ ಹೆಜ್ಜೆಯಿಟ್ಟರೆ ಒಳಿತು. ಯಾಕೆಂದರೆ, ಈ ಪರ್ಯಾಯ ಮಹಾನ್ ಹಬ್ಬವೆಂದು ಬಿಂಬಿಸಲು ಅದರ ಪಬ್ಲಿಸಿಟಿಗಾಗಿ ಆಂಧ್ರ, ಮಹಾರಾಷ್ಟ್ರ ಹಾಗು ಕರ್ನಾಟಕದ ಮುಖ್ಯಮಂತ್ರಿಗಳನ್ನು ಇದೀಗಲೇ ಬುಟ್ಟಿಗೆ ಹಾಕಿಕೊಳ್ಳಲಾಗಿದೆ. ನೆಟ್ಟಗೆ ಅಷ್ಟ ಮಠದ ಎಂಟು ಯತಿಗಳನ್ನು ಒಟ್ಟಿಗೆ ಕುಳ್ಳಿರಿಸಲು ತಾಕತ್ತಿಲ್ಲದ ಪೇಜಾವರರಿಗೆ ಇಡೀ ಹಿಂದೂ ಸಮೂಹ ಮತ್ತು ಸರಕಾರವೇ ಪರ್ಯಾಯದ ಹಿಂದಿದೆ ಎಂಬಂತೆ ಬಿಂಬಿಸುವಂತಹ ಹುಚ್ಚು.

ಯಾವುದೋ ಹಕ್ಕಿ ತಿಂದು ಉಗುಳಿದ ಅಥವ ಅದರ ಹಿಕ್ಕೆಯಿಂದ ಹೊರಬಂದ ಬಂದಳಿಕೆ ಎಂಬ ಸಸ್ಯದ ಬೀಜ ಆ ಹಕ್ಕಿ ಕುಳಿತಿರುವ ದೈತ್ಯಾಕಾರದ ಮಾವೋ ಹಲಸೋ ಮುಂತಾದ ಮರಗಳಿಗೆ ಅಂಟಿ ಬೆಳೆಯುವುದುಂಟು. ಬೆಳೆದರೆ ಬೆಳೆಯಲಿ ಅದು ಅದರ ಜೀವನ ಚಕ್ರ. ಆದರೆ ನಂತರ ಆ ಚಿಕ್ಕ ಸಸ್ಯದ ಪ್ರಭಾವ ಹೇಗಿರುತ್ತದೆಂದರೆ ಇಡೀ ಮರದ ಕೊಂಬೆಯನ್ನು ಒಂದೊಂದಾಗಿ ಆಶ್ರಯಿಸುತ್ತಾ ಆ ದೈತ್ಯ ಮರವನ್ನೇ ಪೂರ್ತಿಯಾಗಿ ಆಕ್ರಮಿಸಿ ತನ್ನ ಆಶ್ರಯದಾತನ ಅಸ್ತಿತ್ವವನ್ನೇ ಇಲ್ಲವಾಗಿಸಿ ಸಾಯಿಸುವುದು. ಇಂತಹದ್ದೊಂದು ಪ್ರಕ್ರಿಯೆ ಕರಾವಳಿಯಲ್ಲೂ ನಡೆಯುತ್ತಿದೆ.

ಮೂಲತಃ ಜೈನ ಬಸದಿಗಳಾಗಿದ್ದ ಅನಂತನಾಥ ಚಂದ್ರನಾಥ ಬಸದಿಯನ್ನು ಶೃಂಗೇರಿ ಮಠ ಅನಂತೇಶ್ವರ ಹಾಗು ಚಂದ್ರಮೌಳೀಶ್ವರ ದೇಗುಲವನ್ನಾಗಿ ಪರಿವರ್ತಿಸಿದರೆ ಆ ದೇಗುಲವನ್ನು ಮೂಲೆಗೆ ತಳ್ಳಿ (ದೇವ ಭಯದಿಂದ ಅದನ್ನು ನಾಶಪಡಿಸಲಾಗದೇ) ಅದೇ ಪರಿಸರದಲ್ಲಿ ಕೃಷ್ಣ ಮಠವನ್ನು ಕಟ್ಟಿದ್ದು ಮಾಧ್ವ ಯತಿಗಳು. ಕೇವಲ ಕೆಲ ಶತಮಾನಗಳಿಂದ ಉಡುಪಿಯಲ್ಲಿ ಮೆರೆದಿದ್ದ ಮಾಧ್ವ ಯತಿಗಳು ಇಲ್ಲಿನ ಮಾಧ್ವ ಪೂರ್ವ ಇತಿಹಾಸವನ್ನು ಕಡೆಗಣಿಸಿ ಉಡುಪಿಯೆಂದರೆ ಕೃಷ್ಣ ಮಠ. ಕೃಷ್ಣ ಮಠವೆಂದರೆ ಉಡುಪಿ ಎಂದು ತಮ್ಮ ಪ್ರಭಾವಗಳ ಮೂಲಕ ಬಿಂಬಿಸುತ್ತಾ ಇಲ್ಲಿನ ಶೂದ್ರ ಮೂಲ ಇತಿಹಾಸಕ್ಕೆ ಮೇಲಿನ ಬಂದಣಿಕೆಯಂತೆ ಕೇಡು ಬಗೆಯುತ್ತಿದ್ದಾರೆ. ಅದರದ್ದೇ ಮುಂದುವರಿಕೆಯಾಗಿ ಪರ್ಯಾಯವೆಂಬ ತಮ್ಮ ಖಾಸಗಿ ನಾಟಕವನ್ನು 'ನಾಡಹಬ್ಬ'ವೆನ್ನುತ್ತಾ ಕೋಟ್ಯಾಂತರ ಸರಕಾರೀ ಹಣವನ್ನು ಆ ಮೂಲಕ ನುಂಗಹೊರಟಿದ್ದಾರೆ.


ಕೆಳಜಾತಿಗಳನ್ನು ಎತ್ತಿ ಕಟ್ಟಿ ಬಾಬರಿ ಮಸೀದಿ ಧ್ವಂಸಕ್ಕೆ ಕಾರಣರಾದ ಅಭಿನವ ಕೌಟಿಲ್ಯ (ಆ ಮೂಲಕ ಅಹಿಂದ ವರ್ಗ ಮೂರಕ್ಕೂ ಬುದ್ಧಿವಂತಿಕೆಯಿಂದ ಪೆಟ್ಟು ನೀಡಿದ) ಪೇಜಾವರ ಶ್ರೀಗಳಿಗೆ ಇಂದು ಇದೊಂದು ಅವರ ಮಹತ್ಸಾಧನೆಯೋ ಎಂಬಂತೆ ಸಮಸ್ತ ಹಿಂದೂಗಳ ಮೇರು ನಾಯಕನೋ ಎಂಬಂತೆ ಪರ್ಯಾಯದ ನೆಪದಲ್ಲಿ ಅಲ್ಲಲ್ಲಿ ಪ್ರಾಯೋಜಿತ ಪೌರ ಸನ್ಮಾನಗಳನ್ನು ಆಯೋಜಿಸಲಾಗುತ್ತಿದೆ. ಹಿಂದೂ ಸಮಾಜದದ ಮನಸ್ಫೂರ್ತಿ ಭಾಗವಹಿಸುವಿಕೆಯಿದೆ ಎಂಬಂತೆ ತೋರಿಸಿಕೊಳ್ಳುತ್ತಾ ಆ ಪ್ರಾಯೋಜಕ ಬಳಗ ಮೆರೆಯುತ್ತಿದೆ. ಈ ಪೇಜಾವರರು ಇಡೀ ಹಿಂದೂ ಸಮುದಾಯವಲ್ಲ ತ್ರಿಮತಸ್ಥ ಬ್ರಾಹ್ಮಣರೆಲ್ಲರೂ ಕೂಡ ಒಪ್ಪುವಂತಹ ಯತಿಗಳೂ ಸಹ ಅಲ್ಲ, ಇಂತಹ ಕುತಂತ್ರಿ ಕುಡ್ಲೇವ ಯತಿ ಹೇಗೆತಾನೆ ಸಮಸ್ತ ಹಿಂದೂ ಸಮಾಜದ ಯತಿ ಎನಿಸಿ ಪೌರಸಮ್ಮಾನವನ್ನು ಪಡೆಯುತ್ತಿದ್ದಾರೋ ಆ ಭಗವಂತನೇ ಬಲ್ಲ.

ಈತ ಪರ್ಯಾಯ ಪೀಠವೇರಿದಾಕ್ಷಣ ಮಾಡುವಂತಹ ಕಾರ್ಯ ಪಾಜಕದಲ್ಲಿ ಮಧ್ವ ಮೂರ್ತಿ ಸ್ಥಾಪನೆಯೇ ಹೊರತು ಹಿಂದೂ ಉದ್ಧಾರದ ಕೆಲಸ ಅಲ್ಲವೆಂದು ಆತನ ಬಾಯಿಯಿಂದಲೇ (ಅದ್ವೈತೆಯ ಬಗ್ಗೆ ಕೇಳಲ್ಪಟ್ಟಾಗ) ಸಂದರ್ಶನವೊಂದರಲ್ಲಿ ಹೊರಬಂದಿದೆ.

ಮಧ್ವರ ಅಧಿಕೃತ ವಕ್ತಾರ ಬನ್ನಂಜೆಯವರು ಪರ್ಯಾಯ ವಿರೋಧಿಗಳನ್ನು ಮತ್ತು ಇಂತಹ ನಾಟಕಗಳನ್ನು ಪರೋಕ್ಷವಾಗಿ ಜರಿಯುವವರನ್ನು ಗುರಿಯಾಗಿಸಿಕೊಂಡು "ಮುಂದಿನ ಕೆಲವರ್ಷಗಳಲ್ಲಿ ಭಾರತ ನಾಸ್ತಿಕರ ದೇಶವಾಗುವ ಭಯವಿದೆ" ಎಂಬ ಬಾಣವನ್ನು ಬಿಟ್ಟದ್ದು ಇದೇ ಹಿನ್ನೆಲೆಯಲ್ಲಿಯೇ. ವಾಸ್ತವವಾಗಿ ಇದು ಆಸ್ತಿಕರನ್ನ ಧಾರ್ಮಿಕತೆಯ ವಿರುದ್ಧ ಮಾತನ್ನಾಡುವವರ ಬಗ್ಗೆ ಪ್ರಚೋದನೆಗಾಗಿ ಬಳಸಿದ ಮಾತಷ್ಟೇ ವಿನಃ ವಾಸ್ತವವಲ್ಲ. ಟೀವಿ ಇನ್ನಿತರ ಮಾಧ್ಯಮಗಳಲ್ಲಿ ಇವರ ಮೇಲುಗೈ ಅವಿದ್ಯಾವಂತರಿಗಿಂತ ವಿದ್ಯಾವಂತರು ಮೌಢ್ಯಗಳಿಗೆ ಮುಗಿಬೀಳುತ್ತಿರುವವರನ್ನೆಲ್ಲ ನೋಡಿದಾಗ ಬನ್ನಂಜೆಯ ಮಾತಿನ ಸ್ವಾಸ್ಥ್ಯತೆ ಎಷ್ಟೆಂಬುದು ಗೊತ್ತಾಗುವುದಿಲ್ಲವೇ? ಮೌಢ್ಯ ಹಾಗು ಅತಿ ಧಾರ್ಮಿಕತೆಗೆ ಪ್ರತಿಯಾಗಿ ಮಾತನ್ನಾಡಿದ ದಾಬೋಲ್ಕರ್, ಕಲ್ಬುರ್ಗಿಯವರನ್ನ ಕೊಂದು ಗಿಟ್ಟಿಸಿಕೊಂಡಂತಹ ಈ ಕಾಲದಲ್ಲಿ ಬನ್ನಂಜೆಯ ನಾಸ್ತಿಕ ದೇಶದ ಮಾತಿನ ಟೊಳ್ಳುತನ ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ.

ಮಾಧ್ವ ಬ್ರಾಹ್ಮಣರ ಬಗ್ಗೆ ಇತರ ಬ್ರಾಹ್ಮಣರಿಗಿರುವ ಮುಖ್ಯ ಅಪಸ್ವರವೆಂದರೆ ಟೊಳ್ಳು ಮಧ್ವನನ್ನು ಲೆಕ್ಕಕ್ಕಿಂತ ಹೆಚ್ಚು ದೈವತ್ವಕ್ಕೇರಿಸಿ ಅವರು ಹೊಗಳುವಂತಹ ಅತಿರೇಕದ ನಾಟಕಗಳು. ಮಧ್ವಾಚಾರ್ಯ ಸ್ವಯಂ ವಾಯುದೇವ, ಹನುಮಂತ ಭೀಮಸೇನ ಅಷ್ಟೇ ಅಲ್ಲದೇ ಇನ್ನಿತರ ದೇವರಿಗೂ ಮೇಲು (ಬನ್ನಂಜೆಯವರೇ ಭೀಮನ ಕುರಿತಾದ ಒಂದು ಸರಣಿ ಲೇಖನದಲ್ಲಿ ಇಂತಹ ಉಲ್ಲೇಖವನ್ನ ಮಾಡಿದ್ದರು). ಅಷ್ಟೇ ಅಲ್ಲದೇ, ಮಾಧ್ವಯತಿಗಳ ಇಂತಹ 'ದೊಡ್ಡಸ್ತನ'ದ ವಿಚಾರ ನ್ಯಾಯಾಲಯದ ವಾದವಿವಾದದ ದಾಖಲೆಯಲ್ಲೂ ಕೂಡ ದಾಖಲಾಗಿರುವಂತಹ ಸಂಗತಿ.

OP ನಂ. 105 ರ 1949 ರ ಜಡ್ಜ್‌ಮೆಂಟಿಗೆ ಸಂಬಂಧಿಸಿ ಬೆಂಗಳೂರು ಹೈಕೋರ್ಟಿನಲ್ಲಿ ಧರ್ಮಸ್ಥಳ ದೇವಾಲಯದ ವಿಚಾರದ ವಿವಾದದ ಕುರಿತು ತಾ. 30.8.68 ರಲ್ಲಿ 11 ನೇ ಸಾಕ್ಷಿಧಾರ ಉಡುಪಿ ಸೋದೆ ಮಠದ ವಿಶ್ವೋತ್ತಮ ತೀರ್ಥ ಸ್ವಾಮಿ ನ್ಯಾಯಾಲಯಕ್ಕೆ ಕೊಟ್ಟಂತಹ ಹೇಳಿಕೆಯಲ್ಲಿ ಶೈವರು ಆರಾಧಿಸುವ ರುದ್ರ ನಮ್ಮ ವಿಷ್ಣು ಕೂತು ತಿರುಗಾಡುವ ಗರುಡ ಹಾಗು



ಮಲಗುವ ಶೇಷನಿಗೂ ಕೆಳಗಿನವನು ಎಂದಿರುವುದಕ್ಕೆ ದಾಖಲೆಗಳಿವೆ.

ರಾಜ್‌ಕುಮಾರ್ ಸಿನಿಮಾಗಳ ಮೂಲಕ ಹಾಡುಗಳ ಮೂಲಕ ಹಾಗು ರಜನಿಕಾಂತ್‌ರಂತಹ ಕೆಲ ಖ್ಯಾತ ಭಕ್ತರುಗಳ ಕಾರಣಕ್ಕೆ ಜನಮಾನಸಕ್ಕೆ ತಲುಪಿದ ರಾಘವೇಂದ್ರ ಸ್ವಾಮಿ, ಹಳೆಯ ವಾದಿರಾಜ ಮತ್ತು ವ್ಯಾಸತೀರ್ಥರಂತವರನ್ನು ಹೊರತುಪಡಿಸಿದರೆ ಜನಮನ ಸೆಳೆದ ಮಾಧ್ವಯತಿಗಳು ಯಾರೂ ಇಲ್ಲ, ಏನಾದರೂ ಉಲ್ಲೇಖಿಸಬೇಕೆಂದಿದ್ದರೆ ಗನ್ ಹಿಡಿದು ಅನಧಿಕೃತ ಪಿಂಡಗಳಿಗೆ ಜನ್ಮಕೊಟ್ಟ ಶಿರೂರು ಯತಿಗಳಂತವರು ಕಣ್ಣಮುಂದೆ ಬಂದು ನಿಲ್ಲುತ್ತಾರೆ. ಉಡುಪಿ ಹಾಗು ಸುಬ್ರಹ್ಮಣ್ಯ ದೇಗುಲವಲಯವನ್ನು ತಮ್ಮಿಂದ ಕೈವಶ ಮಾಡಿಕೊಂಡ ಮಾಧ್ವಸ್ವಾಮಿಗಳ ಬಗ್ಗೆ ಶಂಕರಾಚಾರ್ಯರ ಶೃಂಗೇರಿ ಪೀಠಕ್ಕೆ ಮೊದಲಿಂದಲೂ ಅಸಮಾಧಾನವಿದ್ದರೆ, ಉಡುಪಿ ಮಠದಲ್ಲಿ ಮಾಧ್ವನಿಗೂ ಮೊದಲು ಉಡುಪಿ ಕೊಲ್ಲೂರುಗಳಿಗೆ ಭೇಟಿಯಿತ್ತಿದ್ದ ಆದಿಶಂಕರಾಚಾರ್ಯನನ್ನು ರಕ್ಕಸ ಮಂಗ ಎಂದೇ ಪ್ರತಿನಿತ್ಯ ಅವಮಾನಿಸಲಾಗುತ್ತಿದೆ. ತ್ರಿಮತಸ್ಥರಲ್ಲೇ ಒಬ್ಬರನ್ನು ನೋಡಿದರೆ ಇನ್ನೊಬ್ಬರಿಗಾಗದು. ಇದ್ದುದರಲ್ಲಿ ರಾಮಾನುಜಾಚಾರ್ಯ ಸ್ವಲ್ಪಮಟ್ಟಿಗೆ ಜನಹಿತ ಬಯಸಿದರೆ ನಿತ್ಯನಾರಕಿ ಮಾಧ್ವ ಹಾಗು ಕಿವಿಗೆ ಕಾದ ಸೀಸ ಹುಯ್ಯ ಬಯಸುವ ಶಂಕರಾಚಾರ್ಯ ಭಾರತದಲ್ಲಿ ಜಾತೀಯತೆ ಮತ್ತು ಅಸ್ಪೃಶ್ಯತೆ ಹಬ್ಬಲು ತಮ್ಮದೇ ಆದ ಅಮೂಲ್ಯ ಕೊಡುಗೆಯನ್ನು ಕೊಟ್ಟಂತವರು. ಇಂತವರನ್ನ ಸಮಸ್ತ ಹಿಂದೂಗಳು ಯಾವ ಕಾರಣಕ್ಕೆ ಗೌರವಿಸಬೇಕು?


■ ಅವಿನಾಶ್ ಎಮ್.ಎಸ್. ನೆಲ್ಲಿಕಾರ್

'ಮಾದರಿ' ರಾಜ್ಯದಲ್ಲಿ ದಲಿತರ ಹೀನಾಯಸ್ಥಿತಿ

ಗಾಂಧೀಜಿ, ಅಂಬೇಡ್ಕರ್ ಮೊದಲಾದ ದಿಗ್ಗಜರು ಜಾತಿಪದ್ಧತಿ ಎಂಬ ಮಹಾ ಅನಿಷ್ಟದ ವಿರುದ್ಧ ಮಾಡಿದ ಅಪ್ರತಿಮ ಹೋರಾಟವನ್ನು ಮುಂದುವರಿಸುವ ಜವಾಬ್ದಾರಿಯನ್ನು ಹೊತ್ತಂತಹ ಅವರ ನಂತರದ ನಾಯಕರು ಮತ್ತು ನಾವೆಲ್ಲರೂ ಮಾಡಿರುವುದೇನು? ನಮ್ಮ ಈ ವೈಫಲ್ಯಕ್ಕೆ ಸಾಕ್ಷಿಯಾಗಿ ನಿಂತಿವೆ. ಇಂದಿಗೂ ವ್ಯಾಪಕವಾಗಿರುವ ಮಂದಿರ ಪ್ರವೇಶ ನಿರಾಕರಣೆ, ಅಸ್ಪೃಶ್ಯತೆ, ದೌರ್ಜನ್ಯ ಮತ್ತು ಮೀಸಲಾತಿಯಲ್ಲಿನ ಅನ್ಯಾಯಗಳು. ಇದನ್ನೆಲ್ಲ ನೋಡುವಾಗ ನಮ್ಮ ಸಮಾಜ ದಲಿತ; ಬುಡಕಟ್ಟುಗಳಿಗೆ ಆಗುತ್ತಿರುವ ಅನ್ಯಾಯಗಳ ವಿಷಯದಲ್ಲಿ ಸಂವೇದನಾಶೀಲತೆಯನ್ನು ಕಳೆದುಕೊಳ್ಳುತ್ತಾ ಸಾಗುತ್ತಿದೆ ಎಂದೇ ಅನಿಸುತ್ತದೆ. ಇವತ್ತಿನ ಬಹುತೇಕ ಮಾಧ್ಯಮಗಳ ಧೋರಣೆಯೂ ಇದಕ್ಕಿಂತ ಹೆಚ್ಚು ಭಿನ್ನವಾಗಿಲ್ಲ. ದೇಶದ ನಾಲ್ಕೂ ಮೂಲೆಗಳಲ್ಲಿ ದಿನನಿತ್ಯವೆಂಬಂತೆ ಸಂಭವಿಸುತ್ತಿರುವ ಜಾತಿ ತಾರತಮ್ಯದ ಚಿಕ್ಕಪುಟ್ಟ ಘಟನೆಗಳು ಎಷ್ಟೊಂದು ರೂಢಿಗತ ಆಗಿಬಿಟ್ಟಿವೆ ಎಂದರೆ ಆ ಸುದ್ದಿಗಳಿಗೆ ಏನೂ ಪ್ರಾಮುಖ್ಯತೆ ಇಲ್ಲವೆಂದಾಗಿದೆ. ಮಂದಿರ ಪ್ರವೇಶ, ಘನತೆಯ ಬದುಕು ಇವೇ ಮೊದಲಾದ ಹಕ್ಕುಗಳನ್ನು ಕೇಳುವ ದಲಿತರ ಕಗ್ಗೊಲೆ, ದಹನದಂತಹ ಘಟನೆಗಳಷ್ಟೆ ರಾಷ್ಟ್ರಮಟ್ಟದಲ್ಲಿ ಪ್ರಕಟಣೆಗೆ ಅರ್ಹವಾಗುತ್ತವೆ. ಉದಾಹರಣೆಗೆ ಉತ್ತರ ಪ್ರದೇಶದ ಬಿಲ್‌ಗಾಂವ್ ಎಂಬಲ್ಲಿ 90ರ ಹರೆಯದ ದಲಿತ ವೃದ್ಧನೊಬ್ಬನನ್ನು ಸುಟ್ಟು ಕೊಂದುಹಾಕಿದ ಘಟನೆ, ಫರೀದಾಬಾದ್‌ನ ಸೋನ್‌ಪೆಡ್ ಎಂಬ ಹಳ್ಳಿಯಲ್ಲಿ ಇಬ್ಬರು ದಲಿತ ಹಸುಳೆಗಳನ್ನು ಜೀವಂತ ದಹಿಸಿದ ಘಟನೆಗಳು ದೇಶಾದ್ಯಂತ ಸುದ್ದಿಗೆ ಗ್ರಾಸವಾದುವು.

ನರೇಂದ್ರ ಮೋದಿಯ ಪ್ರಕಾರ 'ಗುಜರಾತ್ ಮಾದರಿ ಅಭಿವೃದ್ಧಿ' ಎಂದರೆ ದೇಶದ ಇನ್ಯಾವ ರಾಜ್ಯದಲ್ಲೂ ಇರದಂಥಾ ಮಾದರಿ ಅಭಿವೃದ್ಧಿ. ಅವಕಾಶವಿತ್ತಲ್ಲಿ ಇಡೀ ದೇಶವನ್ನು ಇದೇ ಮಾದರಿಯಲ್ಲಿ ಅಭಿವೃದ್ಧಿಪಡಿಸುವೆವು ಎಂಬುದಾಗಿ ಅಭೂತಪೂರ್ವ ಪ್ರಚಾರ ನಡೆಸುವ ಮೂಲಕ ಯುವಜನತೆ ಮತ್ತು ಮಧ್ಯಮವರ್ಗಗಳಿಗೆ ಮಂಕುಬೂದಿ ಎರಚಿ ಅಧಿಕಾರಕ್ಕೆ ಬಂದಿರುವ ಮೋದಿ ಸರ್ಕಾರಕ್ಕೆ ದೇಶದ ಜನತೆ ಸತ್ಯಾಂಶವನ್ನು ಅರಿಯುವುದು ಬೇಕಾಗಿಲ್ಲ; ಗುಜರಾತಿನ ದಲಿತರ ಹೀನಾಯಸ್ಥಿತಿಯ ಬಗ್ಗೆ ತಿಳಿಯುವುದು ಬೇಕಾಗಿಲ್ಲ. ಸತ್ಯಾಂಶ ಏನೆಂದರೆ ಮೋದಿ ಸರ್ಕಾರದ ಗಮನ, ಅದರ ಶ್ರಮ ಎಲ್ಲವೂ ಕೇವಲ ಮೇಲ್ಜಾತಿ, ಮೇಲ್ವರ್ಗ ಮತ್ತು ಕಾರ್ಪೋರೇಟುಗಳ ಹಸಿವನ್ನು ತಣಿಸುವುದರ ಮೇಲೆ ಕೇಂದ್ರೀಕರಿಸಿವೆ. ಅದಕ್ಕೆ ನೈಜ ಮಾನವಾಭಿವೃದ್ಧಿ ಅಥವಾ ಮಾನವನ ಸರ್ವತೋಮುಖ ಅಭಿವೃದ್ಧಿ ಬಗ್ಗೆ ದೀನದಲಿತರ ನೈಜ ಉನ್ನತಿ ಬಗ್ಗೆ ಇನಿತೂ ಕಾಳಜಿ ಇಲ್ಲ. 'ಸ್ವಚ್ಛ ಭಾರತ' ಕೇವಲ ರಾಜಕಾರಣಿಗಳು ಪೊರಕೆ ಹಿಡಿದು ಫೋಟೊ ಕ್ಲಿಕ್ಕಿಸುವುದಕ್ಕಷ್ಟೆ ಸೀಮಿತವಾಗಿದೆ. ಅತ್ತ ಶೇಕಡಾ 66ರಷ್ಟು ದಲಿತ ಮನೆಗಳಲ್ಲಿ ಶೌಚಾಲಯಗಳಿಲ್ಲವೆಂದು ಇತ್ತೀಚಿನ ಜನಗಣತಿ ಅಂಕಿಸಂಖ್ಯೆಗಳು ಸಾರಿ ಹೇಳುತ್ತಿವೆ.


ಈಗ ಗುಜರಾತಿಗೆ ಬರೋಣ. ಕೆಲದಿನಗಳ ಹಿಂದೆ ರಾಜ್ಯಸಭೆಯಲ್ಲಿ ಮಾತನಾಡಿದ ಕಾಂಗ್ರೆಸ್ ಸದಸ್ಯೆ ದಲಿತ ಸಂಸದೆ ಕುಮಾರಿ ಸೆಲ್ಜಾ 2013ರಲ್ಲಿ ತಾನು ಗುಜರಾತಿನ ಮಂದಿರವೊಂದಕ್ಕೆ ಹೋಗಿದ್ದಾಗ ಅಲ್ಲಿ ಜಾತಿಕಾರಣಕ್ಕಾಗಿ ತಾರತಮ್ಯ ಎದುರಿಸಬೇಕಾಗಿ ಬಂದ ಅನುಭವವನ್ನು ಬಿಚ್ಚಿಟ್ಟಾಗ ಅದು ಸುಳ್ಳೆಂದು ಬೊಬ್ಬಿರಿದ ಬಿಜೆಪಿ ಕೂಗುಮಾರಿಗಳು ಅದನ್ನು 'ಕಾಲ್ಪನಿಕ ತಾರತಮ್ಯ', 'ಗಿಮಿಕ್ಕು' ಎಂದೆಲ್ಲ ಬಣ್ಣಿಸಿದರು. ನಂತರ ಅದು ನಿಜವೆಂದು ತಿಳಿದುಬಂದಾಗ ಸಪ್ಪೆಮುಖ ಹಾಕಿಕೊಂಡು ಸದ್ದಿಲ್ಲದೆ ಬಾಲ ಮುದುಡಿಕೊಂಡರು. ತಮ್ಮ ನೆಚ್ಚಿನ ನಾಯಕನ ತವರೂರಿಗೆ, ಆತನ 'ಗುಜರಾತ್ ಮಾದರಿ'ಗೆ ಕಳಂಕ ತರುವಂತಹ ವಿಚಾರವಿರಲಿ ಅಥವಾ ಆತನ ಆಡಳಿತ ವೈಖರಿ ಕುರಿತ



ಟೀಕೆಗಳಿರಲಿ ಉಚ್ಚಸ್ವರದಲ್ಲಿ ಕಿರುಚಾಡುತ್ತಾ ಎದುರಾಳಿಗಳ ಬಾಯಿ ಮುಚ್ಚಿಸಲೆತ್ನಿಸುವುದು ಚೆಡ್ಡಿಗಳ ಜಾಯಮಾನವೆ ಆಗಿಬಿಟ್ಟಿದೆ. ಮೋದಿ ಸ್ವದೇಶಕ್ಕಿಂತಲೂ ವಿದೇಶಗಳಲ್ಲೆ ಹೆಚ್ಚುಕಾಲ ಕಳೆಯುವ ಬಗ್ಗೆ, ವಿವಿಧ ಸಂಘಸಂಸ್ಥೆಗಳ ಕೇಸರೀಕರಣದ ಬಗ್ಗೆ, ಹೆಚ್ಚುತ್ತಿರುವ ಅಸಹಿಷ್ಣುತೆಯ ಬಗ್ಗೆ ದನಿಯೆತ್ತುವವರನ್ನು ದಮನಿಸಲು ಮಸಿ ಬಳಿಯುವಿಕೆ, ಸಾಮಾಜಿಕ ಮಾಧ್ಯಮಗಳಲ್ಲಿ ಅವಹೇಳನಕಾರಿ ಬರಹ ಮುಂತಾದ ನಾನಾವಿಧಾನಗಳನ್ನು ಬಳಸಲಾಗುತ್ತಿದೆ. ಕಳೆದ ಸುಮಾರು 18 ತಿಂಗಳುಗಳ ಅವಧಿಯಲ್ಲಿ ಇದರ ಸಾಕಷ್ಟು ನಿದರ್ಶನಗಳನ್ನು ಜನ ಕಂಡಿದ್ದಾರೆ. ಚೆಡ್ಡಿಗಳ ಒಟ್ಟಾರೆ ನಿಲುವೇನೆಂದರೆ ಮೋದಿ ಎಂಬ 'ಪರಿಪೂರ್ಣ, ಸಕಲ ಗುಣಸಂಪನ್ನ, ಹಿಂದೂ ಹೃದಯ ಸಾಮ್ರಾಟ'ನನ್ನು ಯಾರೂ, ಯಾವ ಕಾರಣಕ್ಕೂ ಟೀಕಿಸಕೂಡದು. ಅವರ ನಿಲುವುಗಳು ಏನೇ ಇದ್ದರೂ ಕಣ್ಣ ಮುಂದೆ ರಾಚುತ್ತಿರುವ ನಗ್ನಸತ್ಯವನ್ನು ನಿರಾಕರಿಸಲು ಸಾಧ್ಯವಿಲ್ಲವಷ್ಟೆ. ಉದಾಹರಣೆಗೆ ಮೋದಿಯ ತವರೂರಾದ ಗುಜರಾತಿನಲ್ಲಿ ಪ್ರಚಲಿತವಿರುವ ಉಗ್ರ ಜಾತೀಯತೆ. ಅಲ್ಲಿ ಇರುವಷ್ಟು ಜಾತಿ ತಾರತಮ್ಯ ಪ್ರಾಯಶಃ ಇನ್ಯಾವ ರಾಜ್ಯದಲ್ಲೂ ಇರಲಿಕ್ಕಿಲ್ಲ. ಅನಾದಿಕಾಲದಿಂದಲೂ ಜಾತಿ ತಾರತಮ್ಯ ಆಚರಿಸುತ್ತಿರುವ ಗುಜರಾತಿನ ಹಳ್ಳಿಗಳಿಗೆ ಗಾಂಧೀಜಿ, ಅಂಬೇಡ್ಕರ್ ಚಿಂತನೆಗಳ ಬಿಸಿಯೆ ತಟ್ಟದಂತಿಲ್ಲ. ಅಲ್ಲೆಲ್ಲ ಇಂದಿಗೂ ಯಾವುದೇ ಮುಲಾಜಿಲ್ಲದೆ ತಳಜಾತಿಗಳಿಗೆ ಮಂದಿರ ಪ್ರವೇಶವನ್ನು ನಿರಾಕರಿಸಲಾಗುತ್ತಿದೆ. ಇದನ್ನು ಮನಗಾಣಲು ಕೇವಲ ನಾಲ್ಕು ನಿದರ್ಶನಗಳು ಸಾಕು.

- ಗುಜರಾತಿನ ಜಾಮನಗರ ಜಿಲ್ಲೆಯ ಸತಾಪುರ ಗ್ರಾಮದ ಮಂದಿರವೊಂದರ ಪ್ರವೇಶದ್ವಾರದಲ್ಲಿ "ದಲಿತರು ಮತ್ತು ಮುಸ್ಲಿಮರಿಗೆ ಪ್ರವೇಶ ಇಲ್ಲ" ಎಂದು ಬರೆದಿರುವ ಫಲಕವೊಂದನ್ನು ನೇತುಹಾಕಲಾಗಿದೆ. ನಂಬಲಸಾಧ್ಯವಾದರೂ ಇದು ನಿಜ.
- ಅಹಮದಾಬಾದಿಗೆ ಸಮೀಪದ ನವಗಾಮ್ ಗ್ರಾಮದಲ್ಲಿ ಎರಡು ಮಂದಿರಗಳಿದ್ದು ಅವೆರಡರ ಮುಂಭಾಗದಲ್ಲಿ ಒಂದು ಅಡ್ಡ ಗೆರೆಯನ್ನು ಎಳೆಯಲಾಗಿದೆ. ದಲಿತರಾರೂ ಆ ಗೆರೆಯನ್ನು ದಾಟುವಂತಿಲ್ಲ. ಅವರು ಏನಿದ್ದರೂ ಆ ಗೆರೆಯಾಚೆ ನಿಂತುಕೊಂಡೆ ಪ್ರಾರ್ಥಿಸಬೇಕು. ಹೀಗಾಗಿ ಅಲ್ಲಿನ ದಲಿತರು ತಂತಮ್ಮ ಮನೆಗಳಲ್ಲೆ ಸಣ್ಣಪುಟ್ಟ ಗುಡಿಗಳನ್ನು ಕಟ್ಟಿಕೊಂಡಿದ್ದಾರೆಂದು ಹೇಳುತ್ತಾರೆ 52ರ ಹರೆಯದ ದಲಿತ ವಜು ಭಾಯಿ ಪರ್ಮಾರ್.
- ರಾಜಕೋಟ್ ಜಿಲ್ಲೆಯ ಪಿಪರ್ಡಿ ಗ್ರಾಮದ ದಲಿತ ಸುಖಾ ಭಾಯಿ ಹೇಳುವ ಕತೆಯನ್ನು ಕೇಳಿದ ಯಾರಿಗೂ ಆ ಊರಿನವರೆಲ್ಲ ಯಾವ ಯುಗದಲ್ಲಿ ಬದುಕುತ್ತಿದ್ದಾರೆಂದು ಅನಿಸದಿರದು. ಪಿಪರ್ಡಿಯಲ್ಲಿ ಸುಮಾರು 300 ದಲಿತ ಕುಟುಂಬಗಳು ಜೀವಿಸುತ್ತಿವೆ. ಆದರೆ ಊರಿನ ನಾಲ್ಕೈದು ದೇವಸ್ಥಾನಗಳ ಪೈಕಿ ಒಂದಕ್ಕೂ ಇವರಿಗೆ ಪ್ರವೇಶವಿಲ್ಲ. ಇವರಿಗೆ ಪೂಜೆಯನಂತರ ಪ್ರಸಾದ ಕೂಡ ನೀಡಲಾಗುತ್ತಿಲ್ಲ. ಸವರ್ಣೀಯರು ಉಂಡುಬಿಟ್ಟ ಎಂಜಲನ್ನು ತಿನ್ನುವ ಪರಿಸ್ಥಿತಿ ಇದೆ. ಕೆಲವೊಂದು ವಿಶೇಷ ಪೂಜೆಗಳ ಸಂದರ್ಭದಲ್ಲಿ ದಲಿತರು ಭಾಗವಹಿಸಬಹುದಾದರೂ ಅವರೆಲ್ಲ ಕೊನೆ ಸಾಲಿನಲ್ಲಿ ಕೂರಬೇಕೆಂಬ ನಿಯಮವಿದೆ. ಅಲ್ಲಿನ ದಲಿತರು ಇದನ್ನೆಲ್ಲ ಪ್ರಶ್ನಿಸದೆ ಮೌನವಾಗಿ ಸಹಿಸಿಕೊಂಡು ಬರುತ್ತಿದ್ದಾರೆ.
- ಇತ್ತೀಚೆಗೆ ಸುಂದರನಗರ ಜಿಲ್ಲೆಯ ಕಟಾರಿಯಾ ಗ್ರಾಮದ ಶಿವ ಮಂದಿರವೊಂದಕ್ಕೆ ಪ್ರವೇಶಿಸಿದ 12 ದಲಿತ ಯುವತಿಯರನ್ನು ಹೊರದಬ್ಬಿದ ಸವರ್ಣೀಯ ಜನ ನಂತರ ಅವರನ್ನು ಹಾಡುಹಗಲೆ ಸಾರ್ವಜನಿಕರೆದುರು ಅವಮಾನ ಮಾಡಿದರು.

ಈಗ ಕೆಲವು ಅಂಕಿಅಂಶಗಳನ್ನು ನೋಡೋಣ. ನವಸರ್ಜನ್ ಎಂಬ ಸರಕಾರೇತರ ಸಂಸ್ಥೆಯೊಂದು ಗುಜರಾತಿನ ದಲಿತರ ಸಮಸ್ಯೆಗಳ ಕುರಿತು ಸಾಕಷ್ಟು ಅಧ್ಯಯನ ನಡೆಸಿದೆ. ಸಂಸ್ಥೆಯ ತಂಡವೊಂದು 1589 ಹಳ್ಳಿಗಳಿಗೆ ಹೋಗಿ 5462 ಜನರನ್ನು ಮಾತಾಡಿಸಿ ಅವರಿಂದ ಬಹಳಷ್ಟು ಮಾಹಿತಿಗಳನ್ನು ಸಂಗ್ರಹಿಸಿದೆ. ನವಸರ್ಜನ್ ಸಮೀಕ್ಷೆಯ ಪ್ರಕಾರ ಗುಜರಾತ್ ರಾಜ್ಯದ ಶೇಕಡಾ 97ರಷ್ಟು ಹಳ್ಳಿಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳಿಗೆ ಬಳಸುವ ಉಪಕರಣಗಳನ್ನು ದಲಿತರು ಮುಟ್ಟುವಂತಿಲ್ಲ. 90% ಹಳ್ಳಿಗಳಲ್ಲಿ ದಲಿತರಿಗೆ ದೇವಸ್ಥಾನಗಳೊಳಗೆ ಪ್ರವೇಶ



ನಿಷೇಧಿಸಲಾಗಿದೆ. 92% ಹಳ್ಳಿಗಳಲ್ಲಿ ಪ್ರಸಾದ ನೀಡುವಂತಹ ಸಂದರ್ಭಗಳಲ್ಲಿಯೂ ಅದನ್ನು 'ಅಸ್ಪೃಶ್ಯರಾದ' ಅವರತ್ತ ಎಸೆಯಲಾಗುತ್ತದೆ. ದಲಿತರಿಗೆ ಕೆಲವು ಸಂದರ್ಭಗಳಲ್ಲಿ ಕೆಲವೊಂದು ನಿರ್ದಿಷ್ಟ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳಲು ಅವಕಾಶವಿದ್ದರೂ ಅವರೆಲ್ಲರೂ ಪ್ರತ್ಯೇಕ ಸ್ಥಳದಲ್ಲಿ ಕೂರಬೇಕಾಗುತ್ತದೆ.

ಗುಜರಾತಿನ ಮಂದಿರಗಳಲ್ಲಿ ಈ ರೀತಿ ಜಾತೀಯತೆಯ ಆಚರಣೆ ಜಾರಿಯಲ್ಲಿರುವ ವಿಚಾರ ಅಲ್ಲಿನ ಪೂಜಾರಿಗಳ ಬಾಯಿಂದಲೇ ಹೊರಬಿದ್ದಿದೆ. ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಅಧ್ಯಕ್ಷ ಪನ್ನಾಲಾಲ್ ಪುನಿಯಾ ಪ್ರಕಾರ ಅಲ್ಲಿನ ಕೆಲವು ಸ್ಥಳೀಯ ಪತ್ರಿಕೆಗಳು ದೇವಸ್ಥಾನಗಳ ಪೂಜಾರಿಗಳೊಂದಿಗೆ ನಡೆಸಿದ ಸಂದರ್ಶನದ ವೇಳೆ ಈ ಸತ್ಯಾಂಶ ಬಯಲಾಗಿದೆ. ಗುಜರಾತಿನ ಈ ಕಹಿ ವಾಸ್ತವವನ್ನು ಸಾಮಾಜಿಕ ನ್ಯಾಯ ಸಚಿವ ಥಾವರ್ ಸಿಂಗ್ ಗೆಹ್ಲಾಟ್, ಸಿನಿಮಾ ನಟ ಪರೇಶ್ ರಾವಲ್‌ನಂಥ ಗುಜರಾತಿಗಳ ಮುಂದಿಟ್ಟರೆ ಅವರುಗಳು ಹಾಗೇನಿಲ್ಲ ಎನ್ನುತ್ತ ತಮ್ಮ ರಾಜ್ಯದ ರಕ್ಷಣೆಗೆ ಧಾವಿಸುತ್ತಾರೆ. ಕೀರ್ತಿ ಭಾಯಿ ಸೋಲಂಕಿ ಎಂಬ ಬಿಜೆಪಿ ಸಂಸದನಂತೂ ಬಾಯಿ ತೆರೆಯುವದೇ ಇಲ್ಲ.

ಗುಜರಾತಿನ ದಲಿತ ಹೋರಾಟಗಾರ ಕೌಶಿಕ್ ಪರ್ಮಾರ್ ಅಭಿಪ್ರಾಯದಲ್ಲಿ ಮಂದಿರ ಪ್ರವೇಶ ಚಳವಳಿ, ಪ್ರತಿಭಟನೆಗಳಿಂದ ದಲಿತರಿಗೆ ಏನೇನೂ ಉಪಯೋಗವಿಲ್ಲ. ಅವು ದಲಿತರನ್ನು ದಮನಕಾರಿ ಬ್ರಾಹ್ಮಣಶಾಹಿ ವ್ಯವಸ್ಥೆಯಿಂದ ಮುಕ್ತಗೊಳಿಸುವ ಬದಲು ಅದೇ ವ್ಯವಸ್ಥೆಯಲ್ಲಿ ಮುಂದುವರಿಸುವುದರಿಂದ ದಲಿತರು ಮಂದಿರ ಪ್ರವೇಶ ವಿಷಯವನ್ನು ಆಚೆಗಿಟ್ಟು ಇತರ ಮುಖ್ಯ ವಿಚಾರಗಳ ಮೇಲೆ ಕೇಂದ್ರೀಕರಿಸಬೇಕಾಗಿದೆ ಎನ್ನುತ್ತಾರೆ ಪರ್ಮಾರ್.

(ಆಧಾರ: ೨೬.೧೨.೨೦೧೫ರ ತೆಹೆಲ್ಕಾದಲ್ಲಿ ವರುಣ್ ಬಿದೂರಿ ಲೇಖನ)

ಸ್ತ್ರೀ ಸಂಘದಲ್ಲಿ ದಲಿತ ಮಹಿಳೆಗೆ ಅವಮಾನ

'ಭಾರತದ ಮಹಿಳೆಯರು ಬದಲಾದರೆ ದೇಶ ತಾನಾಗೇ ಬದಲಾಗುತ್ತದೆ' ಅನ್ನುತ್ತಾರೆ ಬಾಬಾಸಾಹೇಬ್ ಅಂಬೇಡ್ಕರ್. ಆ ಕಾರಣಕ್ಕಾಗಿ ಭಾರತ ಸಂವಿಧಾನದಲ್ಲಿ ಮಹಿಳೆಯ ಶ್ರೇಯೋಭಿವೃದ್ಧಿಗಾಗಿ ಹಲವು ಅಂಶಗಳನ್ನು ಸೇರಿಸಲಾಗಿದೆ. ಬಾಬಾಸಾಹೇಬರ ಈ ಕಾಳಜಿಯ ಫಲವೆಂಬಂತೆ ಇಂದು ಕೋಟ್ಯಂತರ ಮಹಿಳೆಯರು ಭಾರತ ಸಮಾಜವನ್ನು ಮುನ್ನಡೆಸುತ್ತಿದ್ದಾರೆ. ಮಹಾತ್ಮ ಜ್ಯೋತಿಬಾ ಫುಲೆ ಮತ್ತು ಮಾತೆ ಸಾವಿತ್ರಿ ಬಾಯಿ ಫುಲೆಯವರ ಶ್ರಮ-ತ್ಯಾಗದಿಂದ ಈ ದೇಶದ ಹೆಣ್ಣಿನ ಒಳದನಿಗೆ ಮಾತುಬಂತು. ಅಂದಿನಿಂದ ಸಮಾಜದ ಬದಲಾವಣೆಗೆ ತಕ್ಕಂತೆ ಮಹಿಳೆಯರು ಬದಲಾಗುತ್ತಾ ಬಂದಿದ್ದಾರೆ; ಸಮ್ಮನ್ನೂ ಬದಲಿಸಿದ್ದಾರೆ. ಈ ನಡುವೆ ದೇಶದ ತುಂಬಾ ಬೆಳೆದುನಿಂತಿರುವ ಮಹಿಳಾ ಸಮಾಜಗಳು, ಸ್ತ್ರೀಸಂಘಗಳು, ಸ್ತ್ರೀ ಸ್ವಸಹಾಯ ಸಂಸ್ಥೆಗಳು ಮಹಿಳೆಯರ ಆತ್ಮಸ್ಥೈರ್ಯವನ್ನು ಹಿಗ್ಗಿಸಿವೆ; ಹಿಗ್ಗಿಸುತ್ತಿವೆ.

ಆದರೆ ಬೆಂಗಳೂರಿನ ಬಸವನಗುಡಿಯ ಸ್ತ್ರೀ ಸಂಘವೊಂದು ತನ್ನ ಮೂಲೋದ್ದೇಶವನ್ನು ಮರೆತು ಜಾತಿ ಚರಂಡಿಯಲ್ಲಿ ಹೂತುಕೊಳ್ಳುತ್ತಿದೆ ಹಾಗೂ ತಳಸಮುದಾಯಕ್ಕೆ ಸೇರಿದ ನಿವೃತ್ತ ಮಹಿಳಾ ಅಧಿಕಾರಿಯೊಬ್ಬರನ್ನು ಅವರ ಜಾತಿ ಕಾರಣಕ್ಕಾಗಿ ಹಿಂಸೆ ಕೊಟ್ಟು ಹೊರಗೆ ಹಾಕಿದೆ.

ಬೆಂಗಳೂರಿನ 'ಬಸವನಗುಡಿ ಸ್ತ್ರೀ ಸಂಘ' ಕಳೆದ ಹಲವು ವರ್ಷಗಳಿಂದ ಅಸ್ತಿತ್ವದಲ್ಲಿರುವ ಮಹಿಳಾ ಸಂಘ. ಮೇಲ್ಜಾತಿಯ ಮಹಿಳೆಯರೇ ಹೆಚ್ಚಿರುವ ಈ ಸಂಘದ ಬಹುತೇಕ ಸದಸ್ಯರು, ಪದಾಧಿಕಾರಿಗಳು ಶ್ರೀಮಂತ ಹಾಗೂ ಮೇಲ್ಮಧ್ಯಮ ವರ್ಗದವರು. ಪ್ರತಿಷ್ಠಿತ ಮಹಿಳೆಯರ ಹಂಗುಗಳಿಗಾಗಿಯೇ ರೂಪಿತವಾಗಿರುವ ಈ ಸಂಘದಲ್ಲಿ ಹದಿಮೂರು ವರ್ಷಗಳ ಕಾಲ ಶಿಕ್ಷಣ ಇಲಾಖೆಯಲ್ಲಿ ಕೆಲಸ ನಿರ್ವಹಿಸಿ ನಿವೃತ್ತರಾಗಿರುವ ಉಮಾ ಬಸವಣ್ಣಪ್ಪನವರು ಕಳೆದ ಕೆಲವು ವರ್ಷಗಳಿಂದ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಇವರ ಹೆಸರಿನ ಮುಂದೆ ಬಸವಣ್ಣಪ್ಪ ಎಂದು ಇರುವುದರಿಂದ ಇವರನ್ನು ಲಿಂಗಾಯತ ಸಮುದಾಯಕ್ಕೆ ಸೇರಿದವರು ಎಂದು ತಿಳಿದಿದ್ದ ಸಂಘದ ಹಲವು ಮಹಿಳೆಯರು ಉಮಾ ಬಸವಣ್ಣಪ್ಪನವರನ್ನು ಸಂಘದ 'ಅಧ್ಯಕ್ಷೆ' ಸ್ಥಾನಕ್ಕೆ ಸ್ಪರ್ಧಿಸುವಂತೆ ಒತ್ತಾಯಿಸಿದರು.

ಶಿಕ್ಷಣ ಇಲಾಖೆಯಲ್ಲಿ ಜಿಲ್ಲಾ ಉಪನಿರ್ದೇಶಕಿಯಾಗಿ, ಸಹನಿರ್ದೇಶಕಿಯಾಗಿ ದುಡಿದು ಪ್ರಾಮಾಣಿಕ, ಖಡಕ್ ಅಧಿಕಾರಿ ಎಂದು ಹೆಸರು ಗಳಿಸಿದ್ದ ಉಮಾ ಅವರನ್ನು ಸಹಜವಾಗಿ ಕೆಲವು ಮಹಿಳೆಯರು ಬೆಂಬಲಿಸಿದ್ದರು. ಇದಲ್ಲದೆ ಈಗಾಗಲೇ ಸಂಘದ ಹಣಕಾಸು ನಿರ್ವಹಣೆ ಕುರಿತು ನಡೆದಿದ್ದ ಹಲವು ಅವ್ಯವಹಾರಗಳನ್ನೂ ಅವರು ವಿರೋಧಿಸಿದ್ದರು.



ಚುನಾವಣೆ ಹತ್ತಿರ ಬರುತ್ತಿದ್ದ ಹಾಗೆ ಉಮಾ ಅವರ ಜಾತಿ ತಿಳಿದ ಸಂಘದ ಮಹಿಳೆಯರು ಏನಾದರೂ ಮಾಡಿ ಅವರನ್ನು ಚುನಾವಣೆಯಲ್ಲಿ ಗೆಲ್ಲದ ಹಾಗೆ ಎಚ್ಚರ ವಹಿಸಿದರು. ಇದರ ಭಾಗವಾಗಿ ಸಂಘದ ಬೈಲಾವನ್ನು ಪಕ್ಕಕ್ಕಿಟ್ಟು ಚುನಾವಣೆ ನಡೆಸಲಾಯಿತು. ಚುನಾವಣೆ ಫಲಿತಾಂಶದಲ್ಲಿ ಉಮಾ ಬಸವಣ್ಣಪ್ಪನವರು ಗೆದ್ದಿದ್ದಾರೆ ಎಂದು ಘೋಷಿಸಿದ ನಂತರದ ಹತ್ತೇ ನಿಮಿಷದಲ್ಲಿ ಇನ್ನೊಬ್ಬರ ಹೆಸರನ್ನು ಘೋಷಿಸಲಾಯಿತು. 'ಮರು ಎಣಿಕೆ ಮಾಡಲಾಗಿ ಒಂದು ಮತದ ಅಂತರದಲ್ಲಿ ಉಮಾ ಸೋತಿದ್ದಾರೆ' ಎಂದು ಘೋಷಣೆ ಮಾಡಲಾಯಿತು.

ಇದರಿಂದ ಬೇಸತ್ತ ಉಮಾ ಅವರು ಬೈಲಾದ ನಿಯಮದಂತೆ ಮರು ಎಣಿಕೆಗೆ ಮನವಿ ಮಾಡಿದರೂ ಸಂಘದ ನಿರ್ಧಾರ ಬದಲಾಗಿಲ್ಲ. ನ್ಯಾಯಕ್ಕಾಗಿ ಕೋರ್ಟಿನ ಮೊರೆ ಹೋದಾಗ ಹೈಕೋರ್ಟು ಈ ಕೇಸನ್ನು 'ಫ್ರಿ ಮೆಚೂರ್ ಕೇಸ್' ಎಂದು ತೀರ್ಮಾನಿಸಿ ಈ ಬಗ್ಗೆ ವಿಚಾರಣೆ ನಡೆಸುವಂತೆ ರಿಜಿಸ್ಟ್ರರ್ ಆಫ್ ಸೊಸೈಟಿ ಅಧಿಕಾರಿಗೆ ಸೂಚಿಸಿದೆ. ಇದಾದ ಐದು ತಿಂಗಳ ನಂತರ ಮರು ಎಣಿಕೆ ನಡೆಯಿತಾದರೂ ಎಣಿಕೆಯ ಫಲಿತಾಂಶವನ್ನು ಅಧಿಕಾರಿಗಳು ಘೋಷಿಸಲೇ ಇಲ್ಲ! ವಿಚಾರಣಾ ವರದಿಯನ್ನು ಸಹ ಉಮಾ ಅವರಿಗೆ ಕೊಡಲಿಲ್ಲ.


ಇದೆಲ್ಲ ಘಟಿಸಿದ ಕೆಲವು ದಿನಗಳ ನಂತರ ಸಂಘದ ಸದಸ್ಯರಲ್ಲೊಬ್ಬರಾದ ಪದ್ಮಿನಿ ಅನ್ನುವ ಹೆಂಗಸು ಉಮಾ ಬಸವಣ್ಣಪ್ಪರನ್ನು ಕುರಿತು 'ಇಂತಹವರಿಗೆಲ್ಲಾ ಮೆಂಬರ್ ಶಿಪ್ ಕೊಟ್ಟಿದ್ದು ಯಾರು..? ದೆ ಶುಡ್ ಬಿ ಕೆಪ್ಟ್ ಔಟ್' ಎಂದೆಲ್ಲಾ ಮಾತನಾಡಿ ಬಹಿರಂಗವಾಗಿ ಜಾತಿನಿಂದನೆ ಮಾಡಿದರು. ಇಂತಹ ಮಾತುಗಳನ್ನು ಆಕ್ಷೇಪಿಸಿದ ಉಮಾ ಅವರನ್ನು ಬಾಯಿ ಮುಚ್ಚಿಸಲಾಯಿತು. ಪದ್ಮಿನಿ ಜೊತೆಗೆ ಸದಸ್ಯರಾದ ಸುಧಾಮಣಿ ಮತ್ತು ರಜನಿ ಅನ್ನುವವರೂ ಸೇರಿಕೊಂಡು 'ಕೊಚ್ಚೆ ಜನ' 'ಅಸಂಸ್ಕೃತರು' ಅಂತೆಲ್ಲಾ ಹೀಯಾಳಿಸಿದರು. ಇದರಿಂದ ಮನನೊಂದ ಉಮಾ ಬಸವನಗುಡಿ ಪೊಲೀಸ್ ಠಾಣೆಯಲ್ಲಿ ಜಾತಿನಿಂದನೆ ದೂರೊಂದನ್ನೂ ದಾಖಲಿಸಿದರು. 'ನಿಮ್ಮ ತಂಟೆಗೆ ಬರದಂತೆ ಎಚ್ಚರಿಕೆ ನೀಡಿದ್ದೇವೆ' ಎಂದು ಪೊಲೀಸ್ ಠಾಣೆಯಿಂದ ಪತ್ರ ಬಂತೇ ಹೊರತು ಆ ಹೆಂಗಸರ ಅಟ್ಟಹಾಸ ನಿಲ್ಲಲೇ ಇಲ್ಲ.

ಇದೆಲ್ಲದರಿಂದ ಇನ್ನಷ್ಟು ಜಾತಿ ಅಮಲನ್ನು ಏರಿಸಿಕೊಂಡ ಸಂಘದ ಸದಸ್ಯೆಯರು ಉಮಾ ಅವರ ಸದಸ್ಯತ್ವವನ್ನೇ ರದ್ದುಗೊಳಿಸಲು ಯತ್ನಿಸಿದರು. ಅಲ್ಲದೆ ಸಂಘದ ಆಫೀಸಿನಲ್ಲಿ ಅವರಿಗೆ ಕಾಫಿ-ತಿಂಡಿ, ಓದಲು ಮ್ಯಾಗಜಿನ್‌ಗಳನ್ನು ಕೊಡದೆ ಅಸಡ್ಡೆ ಮಾಡುವಂತೆ ಅಲ್ಲಿನ ಕೆಲಸಗಾರರಿಗೆ ತಾಕೀತು ಮಾಡಿದರು. ಆ ಕೆಲಸಗಾರರಿಗೆ ಉಮಾ ಅವರ ಬಗ್ಗೆ ಗೌರವವಿದ್ದರೂ ಹೊಟ್ಟೆಪಾಡಿಗಾಗಿ ಹಾಗೇ ನಡೆದುಕೊಂಡಿದ್ದಾರೆ.

ಉಮಾ ಬಸವಣ್ಣಪ್ಪನವರು ನಾಡಿನ ಸುಪ್ರಸಿದ್ಧ ಸಾಹಿತಿ ದೇವನೂರ ಮಹಾದೇವ ಅವರ ನಾದಿನಿಯಾಗಿದ್ದರೂ ಅವರ ಹೆಸರನ್ನು ಬಳಸಿಕೊಳ್ಳದೆ ನೋವುಣ್ಣುತ್ತಿದ್ದಾರೆ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಈ ಕಡೆ ಗಮನ ಹರಿಸದಿದ್ದರೆ ಇಂಥ ಘಟನೆಗಳಿಂದ ಮಹಿಳಾ ಸಂಘಗಳಿಗೆ ಕೆಟ್ಟ ಹೆಸರು ಬರುತ್ತದೆ ಹಾಗೂ ಅವುಗಳ ಆಶಯ ಮಣ್ಣುಪಾಲಾಗುತ್ತದೆ. ■







ಗೃಹಮಂತ್ರಿಗಳಿಗೆ ನಮಸ್ಕಾರ



ಡಿಯರ್ ಸರ್,

ಹೊಸ ವರ್ಷದ ಶುಭಾಶಯಗಳು.

ಹೀಗೆ ಶುಭಾಶಯ ಹೇಳುವಾಗ ನನಗೆ 2001ನೇ ಜನವರಿ ನೆನಪಾಗುತ್ತದೆ. ಎಲ್ಲೆಡೆ ಹೊಸ ಸಹಸ್ರಮಾನ, ನವ ಸಹಸ್ರಮಾನ ಎಂದು ಹೇಳುವುದರ ಬಗ್ಗೆ ನೀವು ತಮಾಷೆ ಮಾಡಿದಾಗ ನಾವೆಲ್ಲ ನಕ್ಕಿದ್ದು ತಮಗೆ ನೆನಪಿರಲಿಕ್ಕಿಲ್ಲ. ಹೊಸ ಸಹಸ್ರಮಾನದ ಬಗ್ಗೆ ಬೇರೆಯವರ ಹಾಗೆ ತಾವು ಪುಳಕಿತರಾಗಿದ್ದಿಲ್ಲ ಎಂಬುದಾದರೂ ಖಂಡಿತ ನೆನಪಿರುತ್ತದೆ.

ಹೌದು ತುಳಿತಕ್ಕೊಳಗಾದವರು, ಅಪಮಾನಕ್ಕೊಳಗಾದವರು ಹಾಗೂ ಅವರ ಬಗ್ಗೆ ಸದಾ ಚಿಂತಿಸುವವರು ಇಂಥ ಪ್ರಸಂಗಗಳಿಂದ ಪುಳಕಿತರಾಗುವುದಿಲ್ಲ. ಅವರಿಗೆ ಪ್ರತಿದಿನವೂ ಹೊಸ ಸವಾಲಿನ ದಿನಗಳಾಗಿರುತ್ತವೆ. ಅವರು ತಮಗಾಗಿ ಸೂರ್ಯ ಉದಯಿಸುವುದನ್ನು ಕಾಯುತ್ತಿರುತ್ತಾರೆ. ತಮಗಾಗಿ ಉದಯಿಸುವ ಸೂರ್ಯನನ್ನು ಸೃಷ್ಟಿಸುವುದೊಂದೇ ಅವರ ಮುಂದಿರುವ ಮಾರ್ಗವಾಗಿರುತ್ತದೆ. ಆಗ ಮಾತ್ರ ಅವರಿಗೆ ನಿಜವಾದ ಸಹಸ್ರಮಾನವಾಗುತ್ತದೆ. ಅಪಮಾನಕ್ಕೊಳಗಾಗುವವರಿಗೆ ಎಷ್ಟೊಂದು ಸಹಸ್ರಮಾನಗಳು ಬಂದು ಹೋದರೂ ನಿರುಪಯುಕ್ತವಾಗೇ ಕಾಣುತ್ತವೆ.

ತುಳಿತಕ್ಕೊಳಗಾದವರು ತಮ್ಮ ಒಡಲೊಳಗಿನ ಕಿಚ್ಚನ್ನು ಕಳೆದುಕೊಂಡ ಕ್ಷಣವೇ ನಡೆದಾಡುವ ಹೆಣಗಳಾಗುತ್ತಾರೆ. ಆ ಕಿಚ್ಚನ್ನು ಉಳಿಸಿಕೊಳ್ಳುವ ಛಲವಾದಿಗಳಾದಾಗಲೇ ಅವರು ಸ್ವಾಭಿಮಾನದ ಬದುಕನ್ನು ಬದುಕಲು ಸಾಧ್ಯವಾಗುತ್ತದೆ. ನಮ್ಮ ಪೂರ್ವಜರು ಅಂಥ ಸ್ವಾಭಿಮಾನಿಗಳಾಗಿದ್ದರಿಂದಲೇ ಜಾತೀಯತೆ ಮತ್ತು ಅಸ್ಪೃಶ್ಯತೆಯಿಂದ ಕೂಡಿದ ಸಾಮಾಜಿಕ ಮತ್ತು ಧಾರ್ಮಿಕ ಕ್ರೌರ್ಯವನ್ನು ಧಿಕ್ಕರಿಸಿ ಬೌದ್ಧ, ಕ್ರೈಸ್ತ, ಇಸ್ಲಾಂ, ಲಿಂಗಾಯತ, ಸಿಖ್ ಮುಂತಾದ ಧರ್ಮಗಳನ್ನು ಸ್ವೀಕರಿಸಿದರು. ಉಳಿದವರು ಹೋರಾಡುತ್ತಲೇ ಮುಂದುವರಿದರು. ಹೀಗೆ ಮುಂದುವರಿದವರು ವಿವಿಧ ಧರ್ಮಗಳಲ್ಲಿ ಚದುರಿಹೋದ ತಮ್ಮ ಜನರ ಜೊತೆ ಮರುಸಂಬಂಧ ಹೊಂದುವ ಕಾಲ ಇದಾಗಿದೆ. ಈ ಸಂಬಂಧಗಳನ್ನು ಸ್ಥಾಪಿಸುವುದು ಕಾಲದ ಅವಶ್ಯಕತೆಯಾಗಿದೆ. ಇವರೆಲ್ಲ ಒಂದಾಗಿ ಸನಾತನ ಧರ್ಮದ ಮೇಲೆ ಹರಿಹಾಯಬೇಕಿಲ್ಲ, ಆದರೆ ತಮ್ಮ ಅಸ್ತಿತ್ವಕ್ಕಾಗಿ ಮತ್ತು ಸ್ವಾಭಿಮಾನದ ಬದುಕಿಗಾಗಿ ನಿರಂತರ ಪ್ರಯತ್ನ ಮಾಡುವ ಕ್ರಮಗಳಲ್ಲಿ ಇದೂ ಒಂದಾಗಿದೆ. ಕಂಬಾಲಪಲ್ಲಿಯಂಥ ದುರಂತಗಳು ನಮ್ಮ ಕಣ್ಣುಮುಂದೆ ಇವೆ. ಬದನವಾಳು ಗ್ರಾಮದಲ್ಲಿ ದಲಿತರ ಕೊಲೆಯಾದಾಗ, '12ನೇ ಶತಮಾನದ ದಲಿತರು 20ನೇ ಶತಮಾನದ ದಲಿತರನ್ನು ಕೊಂದರು' ಎಂದು ನಾನು ಹೇಳಿದ್ದೆ. ಅಜ್ಞೇಯವಾದಿ ಮತ್ತು ಏಕದೇವೋಪಾಸನೆಯ ಧರ್ಮಗಳನ್ನು ಸೇರಿ ಸನಾತನ ಕ್ರೌರ್ಯದಿಂದ ಪಾರಾದವರು, ಜಾತಿಯ ಬಲೆಗಳಲ್ಲೇ ಉಳಿದ ದಲಿತರ ಬಗ್ಗೆ ಉದಾಸೀನ ತಾಳುವುದಕ್ಕೆ ವಿಸ್ಮೃತಿ ಕೂಡ ಬಹು ಮುಖ್ಯ ಕಾರಣವಾಗಿದೆ.

ಬಹಳ ವರ್ಷಗಳ ಹಿಂದೆ ನಾವು ಮಧುಗಿರಿಯ ಒಂದು ಸಭೆಯಲ್ಲಿ ಸೇರಿದ್ದಾಗ ಮೇಲೆ ತಿಳಿಸಿದ ಧರ್ಮಗಳಿಗೆ ಸಂಬಂಧಿಸಿದ್ದ ಅತಿಥಿಗಳು ಕೂಡ ಇದ್ದರು. ನಾನು ಅವರೆಲ್ಲ ಕಡೆಗೆ ಬೊಟ್ಟು ಮಾಡುತ್ತ "ನಾವೆಲ್ಲ ದಲಿತರ ಹಾಗೆ ಬಣ್ಣ ಮತ್ತು ಮುಖಚರ್ಯೆಯನ್ನು ಹೊಂದಿದ್ದೇವೆ. ಈ ನೆಲದ ಮಕ್ಕಳಾಗಿದ್ದೇವೆ. ಕಕೇಷಿಯನ್ ರೇಸ್‌ನ ಬಿಳಿ ಬಣ್ಣದಿಂದ ಕೂಡಿದ ಉದ್ದ ಹಾಗೂ ಎತ್ತರ ಮೂಗು ಯಾರದೂ ಇಲ್ಲ. ಆ ಕಕೇಷಿಯನ್ ಜನಾಂಗಕ್ಕೆ ಇರುವ ಎತ್ತರವೂ ಇಲ್ಲ, ಬಣ್ಣವೂ ಇಲ್ಲ. ಮಾನವ ವಿಜ್ಞಾನದ ಯಾವುದೇ ಮಗ್ಗುಲಿನಿಂದ ನೋಡಿದರೂ ನಾವೆಲ್ಲ ಈ ನೆಲದ ಮಕ್ಕಳೇ ಆಗಿದ್ದೇವೆ. ಇನ್ನು ಹೊರಗಿನಿಂದ ಬಂದವರ ರಕ್ತದಲ್ಲಿ ನೆಲಮೂಲದವರ ರಕ್ತವೂ ಬೆರೆತಿದೆ. ಭಾರತದಲ್ಲಿ ಅಷ್ಟೇ ಅಲ್ಲ ವರ್ಣಭೇದ ನೀತಿ ಆಚರಿಸಿದ ಆಫ್ರಿಕಾದಲ್ಲೂ ಪರಿಶುದ್ಧ ರಕ್ತ ಇಲ್ಲ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ" ಎಂದು ನಾನು ಮಾತನಾಡಿದಾಗ ತಾವು ಬಹಳ ಸಂತೋಷ ಪಟ್ಟಿದ್ದು ನನಗಿನ್ನೂ ನೆನಪಿದೆ.

ಇಂದು ತಾವು ರಾಜ್ಯದ ಗೃಹಮಂತ್ರಿಗಳಾಗಿರುವಿರಿ. ತಮ್ಮ ವೈಜ್ಞಾನಿಕ ಮನೋಭಾವ ಮತ್ತು ಜೀವನಾನುಭವ ಖಂಡಿತವಾಗಿಯೂ ಇಲಾಖೆಗೆ ಬಹಳ ಉಪಯುಕ್ತವಾಗುತ್ತವೆ ಎಂಬುದರ ಬಗ್ಗೆ ಸಂಶಯವಿಲ್ಲ. ರಾಜ್ಯದ ವಿವಿಧ ಜಾತಿ, ಧರ್ಮ ಮತ್ತು ವರ್ಗಗಳ ಜನಸಮುದಾಯಕ್ಕೆ ಶಾಂತಿ ಮತ್ತು ಸುವ್ಯವಸ್ಥೆಯನ್ನು ನೀಡುವಂಥ ಗುರುತರ ಜವಾಬ್ದಾರಿಯನ್ನು ತಾವು ನೇರವಾಗಿ ಹೊತ್ತಿದ್ದೀರಿ. ನನ್ನ ದೃಷ್ಟಿಯಲ್ಲಿ ಇದು ಉಪ ಮುಖ್ಯಮಂತ್ರಿಗಿಂತಲೂ ಹೆಚ್ಚಿನ ಕಾಳಜಿ ಕೋರುವ ಸ್ಥಾನವಾಗಿದೆ.

ಭಾರತದಂಥ ಬಹುಧರ್ಮೀಯ, ಬಹುಸಂಸ್ಕೃತಿಯ, ಬಹು ಜಾತಿ ಮತ್ತು ಭಾಷೆಗಳ ದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಹಿಂದೆಂದಿಗಿಂತಲೂ ಇಂದು ಕಠಿಣಸಾಧ್ಯವಾಗಿದೆ. ಏಕೆಂದರೆ ಹಿಂದಿನ ದಿನಗಳಲ್ಲಿ ತಳಸಮುದಾಯದ ಬಹುಜನರು ಭಕ್ತಿಪಂಥದಿಂದ ಬಹಳ ಪ್ರಭಾವಿತರಾಗಿದ್ದರು. ಐಹಿಕ ಆಸ್ತಿಗಳಿಗೆ ಹೇಸಿಕೊಳ್ಳುವಂಥ ಮನಸ್ಥಿತಿಯುಳ್ಳವರಾಗಿದ್ದರು. ಮಾನವೇ ಅವರ ಬಹುದೊಡ್ಡ ಸಂಪತ್ತಾಗಿತ್ತು. ಸಂತರು, ಶರಣರು, ದಾಸರು, ಸಂತರು, ಸೂಫಿಸಂತರು ಮತ್ತು ತತ್ತ್ವಪದಕಾರರು ಜಾತ್ಯತೀತರಾಗಿದ್ದಲ್ಲದೆ ರಾಗದ್ವೇಷಗಳಿಂದ ಮುಕ್ತರಾಗಿದ್ದರು. ಇವರ ಪ್ರಭಾವಕ್ಕೆ ಒಳಗಾದ ಜನಸಾಮಾನ್ಯರು ಜಾತಿಯ ಕ್ರೌರ್ಯ ಪ್ರದರ್ಶಿಸುವವರ ತಂಟೆಗೆ ಹೋಗದೆ ತಮ್ಮ ಪಾಡಿಗೆ ತಾವು ಬದುಕುವುದನ್ನು ರೂಢಿಸಿಕೊಂಡಿದ್ದರು. ಇಲ್ಲವೆ ಜಾತಿಗಳಿಲ್ಲದ ಧರ್ಮಗಳನ್ನು ಸ್ವೀಕರಿಸುತ್ತಿದ್ದರು.

ಇಂದು ಕಾಲ ಬದಲಾಗಿದೆ. ಪ್ರತಿಯೊಬ್ಬರ ಘನತೆ ಮತ್ತು ಆಸ್ತಿಪಾಸ್ತಿಯನ್ನು ರಕ್ಷಿಸುವ ಸಾಮರ್ಥ್ಯವುಳ್ಳ ಸಂವಿಧಾನ ಹೊಸ ಮರ್ಯಾದೆಯುತ ಜೀವನವಿಧಾನವನ್ನು ತೋರಿಸಿಕೊಟ್ಟಿದೆ. ಯುಗಯುಗಗಳಿಂದ ತುಳಿತಕ್ಕೊಳಗಾದವರು ಸಂವಿಧಾನ ಜಾರಿಯಾದ ನಂತರ ಮೊದಲ ಬಾರಿಗೆ ತಮ್ಮತನವನ್ನು ಕಂಡುಕೊಳ್ಳುವಲ್ಲಿ ತಲ್ಲೀನರಾಗಿದ್ದಾರೆ. ಈ ಬದಲಾವಣೆಯನ್ನು ಪಟ್ಟಭದ್ರ ಹಿತಾಸಕ್ತಿಗಳು ಸಹಿಸಿಕೊಳ್ಳುತ್ತಿಲ್ಲ. ಕೋಮುವಾದದ ಮೂಲಕ ಅಲ್ಪಸಂಖ್ಯಾತರ ಮೇಲೆ ಕೆಂಡಕಾರುತ್ತವೆ. ಜಾತಿವಾದದ ಮೂಲಕ ದಲಿತರ ಮೇಲೆ ಹಲ್ಲೆ ಮಾಡುತ್ತವೆ.

ಇತ್ತೀಚಿನ ವರ್ಷಗಳಲ್ಲಿ ಈ ಪರಿಸ್ಥಿತಿ ಕರ್ನಾಟಕದಲ್ಲಿ ಕೂಡ ವಿಕೋಪಕ್ಕೆ ಹೋಗುತ್ತಿದೆ. ಕೋಮುವಾದಿ ಶಕ್ತಿಗಳು ಧರ್ಮಗಳ ಮಧ್ಯೆ ಮತಾಂಧತೆಯ ಗೋಡೆ ಕಟ್ಟುತ್ತಿವೆ. ಅವು ಎಲ್ಲೆಲ್ಲಿ ಗೋಡೆ ಕಟ್ಟುತ್ತಿವೆಯೊ ಅಲ್ಲಲ್ಲಿ ರಾಜಕೀಯ ಶಕ್ತಿಯಾಗಿ ಬೆಳೆಯುತ್ತಿವೆ. ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಅಭದ್ರ ಸ್ಥಿತಿಯಲ್ಲಿ ಬದುಕುವಂತೆ ಮಾಡುತ್ತಿವೆ.

ನನ್ನ ಮೂರು ದಶಕಗಳ ಪತ್ರಿಕಾರಂಗದ ಬದುಕಿನಲ್ಲಿ ಅನೇಕ ಕೋಮು ಮತ್ತು ಜಾತಿ ಗಲಭೆಗಳ ವರದಿ ಮಾಡಿದ್ದೇನೆ. ಪಟ್ಟಭದ್ರ ಹಿತಾಸಕ್ತಿಗಳ ಷಡ್ಯಂತ್ರಗಳನ್ನು ಅರಿತವನಾಗಿದ್ದೇನೆ. ಈ ಹಿತಾಸಕ್ತಿಗಳು ಭಯಾನಕ ವಾತಾವರಣವನ್ನು ನಿರ್ಮಾಣ ಮಾಡುತ್ತವೆ. ಅವು ಇಂದು ರಾಜಕೀಯ ಶಕ್ತಿಯಾಗಿ ಸಾಕಷ್ಟು ಬೆಳೆದದ್ದರಿಂದ ಆತಂಕಕಾರಿ ವಾತಾವರಣ ಇನ್ನೂ ಪ್ರಬಲವಾಗಿದೆ. ಇಂಥ ದಮನಕಾರಿ ಪರಿಸ್ಥಿತಿಯನ್ನು ನಿಭಾಯಿಸಲು ನಮ್ಮ ಮುಂದೆ ಎರಡು ಮುಖ್ಯ ಮಾರ್ಗಗಳಿವೆ. ಒಂದನೆಯದಾಗಿ ಧರ್ಮಗಳ ಮಧ್ಯೆ ಸಾಮರಸ್ಯ ಮೂಡಿಸುವ ನಿರಂತರ ಪ್ರಕ್ರಿಯೆ. ಎರಡನೆಯದಾಗಿ ಪೊಲೀಸ್ ವ್ಯವಸ್ಥೆಯಲ್ಲಿ ತುರ್ತಾಗಿ ಆಗಬೇಕಾದ ಸುಧಾರಣೆಗಳು.

ಸಾಮರಸ್ಯ ಮೂಡಿಸಲಿಕ್ಕೆ ನಮ್ಮ ಬಳಿ ಶರಣ, ದಾಸ, ಸಂತ, ಸೂಫಿಸಂತ ಮತ್ತು ತತ್ತ್ವಪದಕಾರರ ಜ್ಞಾನಭಂಡಾರ ಮತ್ತು ಅವರು ಬದುಕಿದ ಪರಿ ಇವೆ. 'ಹೊಲೆಯ ಹೊರಗಿಹನೆ?' ಎಂದು ಕನಕದಾಸರು ಪ್ರಶ್ನಿಸಿದ್ದಾರೆ. ಹೊಲೆತನ ಇರುವುದು ವರ್ಣ ಮತ್ತು ಜಾತಿಗಳನ್ನು ಪ್ರತಿಪಾದಿಸುವವರ ಮನಸ್ಸಿನೊಳಗೆ ಎಂದು ಬಸವಾದಿ ಶರಣರು ಕೂಡ 12ನೇ ಶತಮಾನದಲ್ಲೇ ಘೋಷಿಸಿದ್ದಾರೆ. 'ನುಡಿ ಲೇಸು, ನಡೆ ಅಧಮವಾದಲ್ಲಿ ಬಿಡಿಸಲಾಗದ ಹೊಲೆ' ಎಂದು ಮಾದಾರ ಚೆನ್ನಯ್ಯನವರು ತಿಳಿಸಿದ್ದಾರೆ. 'ಜಾತಿ ಸಂಕರವಾದ ಬಳಿಕ ಕುಲವನರಸುವರೆ?' ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಆದರೆ ನಾವು ನಮ್ಮ ನಮ್ಮ ಶೂದ್ರ ಜಾತಿಗಳನ್ನೇ ಮುಂದುಮಾಡಿಕೊಂಡು ಹಿಂದುಳಿಯುತ್ತಿದ್ದೇವೆ; ಒಂಟಿಯಾಗುತ್ತಿದ್ದೇವೆ. 'ಹಿಂಡಗಲಿದ ಗೋವು ಹುಲಿಗಿಕ್ಕಿದ ಮೇವು' ಎಂದು ಕನಕದಾಸರು ಹೇಳಿದ್ದಾರೆ. ಇಂದು ಗೋಮುಖವ್ಯಾಘ್ರರಿಗೆ ಅಸಹಾಯಕರು ಮೇವು ಆಗುತ್ತಿದ್ದಾರೆ. ಅಸಹಾಯಕರು ಒಗ್ಗಟ್ಟಾದರೆ ಗೋಮುಖವ್ಯಾಘ್ರರು ಬಾಲಮುದುರಿಕೊಂಡು ಇರುತ್ತಾರೆ ಎಂದು ಕನಕದಾಸರು ಸೂಚಿಸಿದ್ದಾರೆ. 'ಇನ್ನೆಷ್ಟು ಕಾಲ ಮಲಗಿದ್ದರೂ ನಿನ್ನನೆಬ್ಬಿಸುವವರನ್ನೊಬ್ಬರನ್ನೂ ಕಾಣೆ' ಎಂದು ಕನಕದಾಸರು ಎಚ್ಚರಿಸಿದ್ದಾರೆ. ನಾವು ಒಗ್ಗಟ್ಟಾಗಬೇಕು ಎಂದು ಎಚ್ಚರಿಸುವವರು ಯಾರೂ ಇಲ್ಲ, ನಮಗೆ ನಾವೇ ಎಚ್ಚರಗೊಳ್ಳಬೇಕಿದೆ. ಕನಕದಾಸರ ಈ ಎಚ್ಚರಿಕೆಯ ಗಂಟೆ ನಮ್ಮ ಹೃದಯಕ್ಕೆ ತಟ್ಟುವುದೆ?

'ಮನುಷ್ಯ ಜಾತಿ ತಾನೊಂದೆ ವಲಂ' (ಮನುಷ್ಯ ಜಾತಿ ಒಂದೇ ಸತ್ಯ), 'ಸಬ್ ಕಾ ಮಾಲಿಕ್ ಏಕ ಹೈ, ಏಕ ಬನೋ ನೇಕ ಬನೋ' (ಎಲ್ಲರ ದೇವರು ಒಬ್ಬನೆ. ಒಂದಾಗಿರಿ ಪವಿತ್ರರಾಗಿರಿ), 'ಇವನಾರವ ಇವನಾರವ ಎಂದೆನಿಸದಿರಯ್ಯಾ. ಇವ ನಮ್ಮವ, ಇವ ನಮ್ಮವ ಎಂದೆನಿಸಯ್ಯಾ', 'ದೇವನೊಬ್ಬ ನಾಮ ಹಲವು', 'ಈ ಜಾತಿ ಯಾಕೊ, ಈ ಧರ್ಮವ್ಯಾಕೊ ಮೊದಲು ಮಾನವನಾಗು ಸಾಕು', 'ಬೋಧ ಒಂದೇ ಬ್ರಹ್ಮನಾದ ಒಂದೇ', 'ಸರ್ವರಿಗೂ ಸಮ ಬಾಳು, ಸರ್ವರಿಗೂ ಸಮಪಾಲು', 'ಜಾತಿ ವಿಜಾತಿ ಎನಬೇಡ, ದೇವನೊಲಿದಾತನೆ ಜಾತ' ಮುಂತಾದ ಹೇಳಿಕೆಗಳು ಮಹಾಪುರುಷರ ಉದಾತ್ತ ವಿಚಾರಗಳ ಪರಿಚಯ ಮಾಡಿಸುತ್ತವೆ. ಇದೀ ಮಾನವ ಕುಲ ಒಂದೇ ಎಂಬ 'ಒಳಗೊಳ್ಳುವ ಸಂಸ್ಕೃತಿ'ಯನ್ನು ನಿರ್ಮಿಸುತ್ತವೆ. ಆದರೆ ನಾವು 'ಹೊರಹಾಕುವ ಸಂಸ್ಕೃತಿ'ಯೆ ಪ್ರಬಲವಾಗಿರುವ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಚಿಂತನೆಗಳು ನಮ್ಮ ಹೃದಯವನ್ನು ತಟ್ಟದಂತೆ ನೋಡಿಕೊಳ್ಳುತ್ತಿದ್ದೇವೆ. ಆಗಾಗ ಆ ಮಹಾಪುರುಷರ ಬದುಕನ್ನು ಜಾಲಾಡಿಸುವ ಪ್ರಯತ್ನಗಳು ಕೂಡ ನಡೆಯುತ್ತಲೇ ಇರುತ್ತವೆ.

ಅದೇನೇ ಇದ್ದರೂ ಯಾವುದೇ ಒಂದು ಧರ್ಮ ಒಂದೇ ದಿನದಲ್ಲಿ ಜೀವ ತಳೆದಿರುವುದಿಲ್ಲ ಎಂಬ ಸತ್ಯವನ್ನು ನಾವು ಅರಿಯುವುದು ಅವಶ್ಯವಾಗಿದೆ. ಇನ್ನು ಆ ಧರ್ಮದ ಆಚರಣೆಗಳು ಎಲ್ಲ ಪ್ರದೇಶಗಳಲ್ಲಿ, ಎಲ್ಲ ಕಾಲಕ್ಕೂ ಒಂದೇ ತೆರನಾಗಿ ಇರುವುದಿಲ್ಲ. ಅವು ಇತರ ಧರ್ಮಗಳ ಜೊತೆಗಿನ ಕೊಡುಕೊಳ್ಳುವಿಕೆಯ ಜೊತೆ ಬೆಳೆಯುತ್ತವೆ. ಈ ಸತ್ಯವನ್ನು ಅರಿಯದವರು ಫ್ಯಾಸಿಸ್ಟ್ ಧೋರಣೆಯನ್ನು ತಳೆಯುತ್ತಾರೆ. ನಮ್ಮ ರಾಜ್ಯದ ವಿವಿಧ ಧರ್ಮಗಳ ಮತ್ತು ಜಾತಿಗಳ ಗಂಡು ಹೆಣ್ಣು ನಿಂತು ಮಾತನಾಡಲಿಕ್ಕೂ ಸಾಧ್ಯವಾಗದಂಥ ಪರಿಸ್ಥಿತಿಯನ್ನು ಕೋಮುವಾದಿಗಳು ತಂದೊಡ್ಡುತ್ತಿದ್ದಾರೆ. ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳು ಎಷ್ಟೋ ಸಲ ಅನಾಗರಿಕ ಯುದ್ಧಭೂಮಿಗಳಂತೆ ಕಾಣುತ್ತವೆ. ಇದು ಯಾವ 'ನೈತಿಕ ಪೊಲೀಸಗಿರಿ'? ಇವರಿಗೆ ಕುಮ್ಮಕ್ಕು ಕೊಟ್ಟವರು ಗೊತ್ತು. ಆದರೆ ಈ ನೀಚ ಹಕ್ಕನ್ನು ಚಲಾಯಿಸಲು ಅವರಿಗೆ ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆ ಏಳುವುದು ಸಹಜವಾಗಿದೆ.

ಈ ಅನಿಷ್ಟಗಳನ್ನು ತಹಬಂದಿಗೆ ತರಬೇಕಾದರೆ ದುಷ್ಕರ್ಮಿಗಳ ಪಿತೂರಿಗೆ ಸಂಬಂಧಿಸಿದಂತೆ ಎಲ್ಲ ಧರ್ಮ ಮತ್ತು ಜಾತಿಗಳವರಿಗೆ ತಿಳಿವಳಿಕೆ ಕೊಡುವುದು ಅವಶ್ಯವಾಗಿದೆ. ಯಾವುದೇ ಒಂದು ಧರ್ಮವನ್ನು ಎತ್ತಿ ಕಟ್ಟಿ ಅಥವಾ ಹೀಯಾಳಿಸಿ ತಿಳಿವಳಿಕೆ ಕೊಡಲು ಸಾಧ್ಯವಿಲ್ಲ. ಎಲ್ಲ ಧರ್ಮಗಳೊಳಗಿನ ಮಾನವೀಯ ತತ್ತ್ವಗಳನ್ನು ಎತ್ತಿ ಹಿಡಿಯುತ್ತಲೇ ಈ ಕಾರ್ಯ ಮಾಡಬೇಕಿದೆ. 'ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ' (ವಿಶ್ವದ ಎಲ್ಲೆಡೆಯಿಂದ ಉದಾತ್ತ ವಿಚಾರಗಳು ನಮ್ಮೆಡೆಗೆ ಬರಲಿ) ಎಂದು ಋಗ್ವೇದ ಹೇಳುತ್ತದೆ. 'ಓಂ ಶಾಂತಿಃ ಶಾಂತಿಃ ಶಾಂತಿಃ' ಎಂದು ಬೃಹದಾರಣ್ಯಕ ಉಪನಿಷತ್ ತಿಳಿಸುತ್ತದೆ. ಇವೆಲ್ಲವನ್ನು ಮರೆತು ನಮ್ಮ ಬಹುಸಂಸ್ಕೃತಿಯ ಸಮಾಜವನ್ನು ಉಳಿಸಿಕೊಳ್ಳಲು ಸಾಧ್ಯವೆ ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಿದೆ. ಒಂದು ದೇಶದ ಪರಂಪರೆಯನ್ನು ಅರಿಯದೆ ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಸಾಧ್ಯವಿಲ್ಲ. ಪೊಲೀಸ್ ಇಲಾಖೆಗಂತೂ ಇದು ಬಹಳ ಅವಶ್ಯವಾಗಿದೆ. ಒಂದೇ ಹಳ್ಳಿಯಲ್ಲಿ ಅಥವಾ ಒಂದೇ ಓಣಿಯಲ್ಲಿ ಆಶ್ಚರ್ಯ ಹುಟ್ಟಿಸುವಷ್ಟು ಧಾ[illegible] ವೈವಿಧ್ಯವಿದೆ. ಅಷ್ಟೇ ಅಲ್ಲ, ಒಂದೇ ಧರ್ಮ [illegible] ಜಾತಿಯಲ್ಲಿ ಕೂಡ ಭಾಷೆ, ಪ್ರಾದೇಶಿಕತೆ, ಆಹಾರ ಸ[illegible] ಸೇರಿದಂತೆ ವೈವಿಧ್ಯಗಳಿವೆ. ಒಂದೇ ಪ್ರದೇಶ ವಿವಿಧ [illegible] ಮತ್ತು ಧರ್ಮಗಳವರ ಕನ್ನಡ ಮುಂತಾದ ಭಾಷೆ[illegible] ಕೂಡ ವೈವಿಧ್ಯವಿದೆ. 'ಒಂದೇ ಕನ್ನಡ' ಎಂದು ಹೇಳು[illegible] ಕೂಡ ತಪ್ಪಾಗುತ್ತದೆ. ಹೀಗೆ ನಮ್ಮ ದೇಶ ಅನೇಕ ವೈವಿ[illegible] ಸಂಗಮವಾಗಿದೆ. ಇದನ್ನು ಗೌರವಿಸಿದಾಗಲೇ ಸಾಮ[illegible] ನೆಮ್ಮದಿಯನ್ನು ಸೃಷ್ಟಿಸಲು ಸಾಧ್ಯ. ಒಂಬತ್ತನೇ ಶತಮಾ[illegible] ಕವಿರಾಜ ಮಾರ್ಗದಲ್ಲಿ 'ಕಸವರವೆಂಬುದು [illegible] ಸೈರಿಸಲಾರ್ಪೊಡೆ ಪರ ವಿಚಾರಮಂ, ಧರ್ಮಮು[illegible]' (ಪರರ ವಿಚಾರ ಮತ್ತು ಧರ್ಮವನ್ನು ಗೌರವಿಸುವ ಮ[illegible] ಅಪರಂಜಿ) ಎಂಬ ಮಾತು ಬರುತ್ತದೆ. ಈ ಒ[illegible] ಸಾಲು ನಮ್ಮ ನಾಡಿನಲ್ಲಿ ನಡೆಯುವ ಕೋಮುಗಲಭೆಗ[illegible] ತಡೆಯುವ ಶಕ್ತಿ ಹೊಂದಿದೆ.

ಪೊಲೀಸರು ಹೀಗೆ ಸೂಕ್ಷ್ಮ ಸಂವೇದಿಗ[illegible] ಕಾರ್ಯನಿರ್ವಹಿಸುವ ಸಂಸ್ಕಾರ ಇಂದು ಹಿಂದೆಂದಿಗಿಂತ[illegible] ಹೆಚ್ಚಾಗಿದೆ. ವಿವಿಧ ಧರ್ಮಗಳ ಮೂಲಭೂತ[illegible] ಚಿಂತನೆಗಳು ಪೊಲೀಸರ ಮಧ್ಯೆ ಕೂಡ ಅ[illegible] ಸಂದರ್ಭದಲ್ಲಿ ಗಮನಿಸಿದ್ದೇನೆ. ಕೋಮುಗಲಭೆ ನ[illegible] ಸಂದರ್ಭದಲ್ಲಿ ದುಷ್ಕರ್ಮಿಯೊಬ್ಬ ಮಣ್ಣಿನ ಗಣಪತಿಯ[illegible] ಒಡೆದದ್ದನ್ನು ನೋಡಿದ ಪೊಲೀಸ್ ಕಾನ್‌ಸ್ಟೇಬಲ್ ಹುಚ್ಚನಂತೆ ಕೂಗಾಡಿದ್ದನ್ನು ಕಂಡಿದ್ದೇನೆ. ದುಷ್ಕರ್ಮಿಯ[illegible] ಹಿಡಿಯುವ ಪ್ರಯತ್ನವೇ ಆತನ ಪೊಲೀಸ್ ಧ[illegible] ಎಂಬುದನ್ನು ಮರೆತಾಗ ಇವೆಲ್ಲ ಸಂಭವಿಸುತ್ತವೆ. ಪೊಲೀ[illegible] ಯಾವುದೇ ಧರ್ಮದವರಿರಲಿ ಅವರ ಪೊಲೀಸ್ ಇಲ[illegible] ಸೇರಿದ ಮೇಲೆ ಅವರ ಧರ್ಮ ಸಹಜವಾಗಿಯೆ ಪೊಲ[illegible] ಧರ್ಮವಾಗಬೇಕಿದೆ. ಹಿಂದೂ ಪೊಲೀಸರು ಮತ್ತು ಮು[illegible] ಪೊಲೀಸರು ಎಂದಾಗದ ಹಾಗೆ ನೋಡಿಕೊಳ್ಳುವ[illegible] ಮತ್ತು ಅಂಥ ಭಾವನೆ ಬರದ ಹಾಗೆ ಪೊಲ[illegible] ಸಂಸ್ಕಾರವನ್ನು ಬೆಳೆಸುವುದು ಅವಶ್ಯವಾಗಿದೆ.

ಪೊಲೀಸ್ ಇಲಾಖೆಯಲ್ಲಿ ರಾಜಕಾರಣಿಗಳ ಪ್ರಭ[illegible] ಇದ್ದೇ ಇರುತ್ತದೆ. ಯಾರು ಎಷ್ಟೇ ಹೇಳಿದರೂ ಅ[illegible] ಸಹಜವೇ ಆಗಿದೆ. ಕೆಲ ಸಂದರ್ಭಗಳಲ್ಲಿ ಬಲಿಪಶು[illegible] ಶಿಕ್ಷೆಯಾಗುವಂಥ ಸ್ಥಿತಿ ಬಂದೊದಗುತ್ತದೆ. ಬಹಳ[illegible] ಕಡೆ ಬಡವರು, ದಲಿತರು ಮತ್ತು ಅಲ್ಪಸಂಖ್ಯಾತರು [illegible] ಶಿಕ್ಷೆಗೆ ಗುರಿಯಾಗುತ್ತಲೇ ಇರುತ್ತಾರೆ. ದಲಿತ, ಅಲ್ಪಸಂಖ[illegible] ವರ್ಗಗಳಿಂದ ಬಂದ ಪೊಲೀಸರು ಮತ್ತು ಹೆಣ್ಣುಮಕ್ಕ[illegible] ಮನೋಸ್ಥೈರ್ಯ ತುಂಬುವುದಕ್ಕಾಗಿ ಮಹಿಳಾ ಪೊಲೀಸ[illegible] ಪ್ರತಿಯೊಂದು ಠಾಣೆಯಲ್ಲಿ ಒಬ್ಬರಾದರೂ ಇರುವ[illegible] ಅವಶ್ಯವಾಗಿದೆ. ಕೆಲವೊಂದು ಸಲ ಸಹಜವಾಗಿ[illegible] ಪೊಲೀಸ್ ಠಾಣೆಗಳು ಮೇಲ್ಜಾತಿಯ ಸಿಬ್ಬಂದಿಯಿಂದ[illegible] ತುಂಬಿರುತ್ತವೆ. ಹೀಗೆ ಯಾವುದೇ ಒಂದು ಜಾತಿ[illegible] ಅಥವಾ ಧರ್ಮದ ಸಿಬ್ಬಂದಿಯಿಂದ ಠಾಣೆಗಳನ್ನು ತುಂ[illegible] ಬಾರದು. ಇಂಥ ಪರಿಸ್ಥಿತಿಯಲ್ಲಿ ಇತರೆ ಜಾತಿ ಮ[illegible] ಧರ್ಮಗಳ ಜನರು ವ್ಯವಸ್ಥೆಯ ಮೇಲೆ ಭರ[illegible] ಕಳೆದುಕೊಳ್ಳುವ ಸಾಧ್ಯತೆಗಳಿರುತ್ತವೆ.

ಕೆಲವೊಂದು ಐ.ಪಿ.ಎಸ್. ಅಧಿಕಾರಿಗಳು ಕಾನ್‌ಸ್ಟೇಬ[illegible] ಗಳಿಗೆ ಬಹುವಚನದಲ್ಲಿ ಸಮಾಧಾನದಿಂದ ಮಾತನಾ[illegible] ವುದನ್ನು ಮತ್ತು ತಿಳಿಹೇಳುವುದನ್ನೂ ನೋಡಿದ್ದೇನೆ. ಆ[illegible] ನಮ್ಮ ದೇಶದಲ್ಲಿ ಕೆಳದರ್ಜೆ ಪೊಲೀಸ್ ಸಿಬ್ಬಂದಿ [illegible] ಮೇಲ್ದರ್ಜೆಯವರು ಅವರ ಘನತೆಯನ್ನು ರಕ್ಷಿಸುವ ಹ[illegible] ಗೌರವಯುತವಾಗಿ ನಡೆದುಕೊಳ್ಳುವುದು ಬಹಳ ಕಡಿ[illegible] ನಾನು ಸುತ್ತಿದ 14 ದೇಶಗಳಲ್ಲಿ ಪೊಲೀಸರ ಸ್ಥಿತಿಗತಿಗ[illegible] ನಮಲ್ಲಿಗಿಂತ ಉತ್ತಮವಾಗಿದ್ದನ್ನು ಕಂಡಿದ್ದೇನೆ.


ಆಸ್ಟ್ರೇಲಿಯಾದ ಸಂಚಾರಿ ಪೊಲೀಸ್ ಕಾನ್‌ಸ್ಟೇಬ[illegible] ಆ ದೇಶದ ಪ್ರಧಾನಿಯನ್ನೇ ತಡೆದು ದಂಡ ಹಾಕಿ[illegible] ನಂತರ ಆ ಪೊಲೀಸನನ್ನು ಪ್ರಧಾನಿ ಕಚೇರಿಗೆ ಕ[illegible] ಗೌರವಿಸಲಾಯಿತು. ಚಿಕಾಗೋದಲ್ಲಿ ಎಫ್.ಬಿ.[illegible] ಪೊಲೀಸರು ಅಲ್ಲಿನ ಗವರ್ನರ್‌ನನ್ನು ಅವ್ಯವಹಾ[illegible] ಸಂಬಂಧಿಸಿದಂತೆ ಮಾತನಾಡುವ ಸಂದರ್ಭದಲ್ಲೇ ಹಿಡಿ[illegible] ಆತ ಶಿಕ್ಷೆಗೆ ಒಳಗಾಗುವಂತೆ ಮಾಡಿದರು. ಇಂಥ ದಿನಗಳ[illegible] ನಮ್ಮಲ್ಲಿ ಕಾಣಲು ಸಾಧ್ಯವೆ?

ಇನ್ನು ನಾಗರಿಕರ ಪಾಲ್ಗೊಳ್ಳುವಿಕೆಯ ವಿಚಾರ. ಪ್ರ[illegible] ಠಾಣೆಯಲ್ಲಿ ಆ ಭಾಗದ ವಿವಿಧ ಸಮಾಜಗಳ ಜನಾನುರ[illegible] ಹಿರಿಯರನ್ನು ಮತ್ತು ಮಹಿಳೆಯರನ್ನು ಒಳಗೊಂಡ ನಾಗರಿ[illegible] ಸಮಿತಿಗಳನ್ನು ರಚಿಸಬೇಕು. ಅವರು ಯಾವುದೇ ರಾಜಕೀ[illegible] ಹುದ್ದೆಗಳಲ್ಲಿ ಇರಬಾರದು. ಇದೆಲ್ಲ ಹಳೆಯ ವಿಚಾರವಾದರ[illegible] ಕ್ರಿಯಾಶೀಲ ನಾಗರಿಕ ಸಮಿತಿಗಳ ಅವಶ್ಯಕತೆ ಇ[illegible] ರಾಜಕೀಯ ಕೈವಾಡಗಳನ್ನು ಮತ್ತು ಭ್ರಷ್ಟಾಚಾರವ[illegible] ತಡೆಯಲು. ನಾಗರಿಕ ಸಮಿತಿಗಳ ಅವಶ್ಯಕತೆ ಬಹಳವಾಗಿದೆ.

ತಮ್ಮ ಮೇಲಿನ ಅಭಿಮಾನ ಮತ್ತು ನಂಬಿಕೆಯಿಂದಾಗಿ ಇಷ್ಟೆಲ್ಲ ಬರೆದಿರುವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸದ,



■ ರಂಜಾನ್ ದರ್ಗಾ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಭಯವೇ ಸನಾತನ ಧರ್ಮ




ಅತ್ಯಂತ ವೈಚಾರಿಕ ಮತ್ತು (ಮನೋ) ವೈಜ್ಞಾನಿಕ ಧರ್ಮವೆನಿಸಿಕೊಂಡಿರುವಂತಹ ಬೌದ್ಧ ಧರ್ಮವಾಗಲಿ, ಮಾಟ ಮಂತ್ರಾದಿಗಳನ್ನು, ದೆವ್ವ ದೇವರುಗಳನ್ನು ಸಾರಾಸಗಟಾಗಿ ತಳ್ಳಿ ಹಾಕುವ ಇಸ್ಲಾಂ ಧರ್ಮವಾಗಲಿ ಹೊರತಿಲ್ಲದಂತೆ ಎಲ್ಲಾ ಧರ್ಮಗಳಲ್ಲೂ, ಎಲ್ಲಾ ಜನಾಂಗಗಳಲ್ಲೂ ಅತೀಂದ್ರಿಯ ಶಕ್ತಿಗಳನ್ನು ನಂಬುವ ಪರಿಪಾಠವಿದೆ. ತಮಾಷೆ ಎಂದರೆ, ಯಾವುದೇ ಧಾರ್ಮಿಕ ಹಿನ್ನೆಲೆಯುಳ್ಳವರು ಅದೆಷ್ಟೇ ನವೀನ ತಂತ್ರಜ್ಞಾನದೊಂದಿಗೆ ನವೀಕೃತಗೊಳ್ಳುತ್ತಿರಲಿ, ಅನಾದಿಕಾಲದಿಂದ ಎಲ್ಲಾ ನಂಬುಗೆಗಳನ್ನು ಹುಟ್ಟು ಹಾಕಿದಂತಹ 'ಭಯ' ಎಂಬ ವಿಷಯವನ್ನು ಮಾತ್ರ ಅತ್ಯಂತ ಜೀವಂತವಾಗಿ, ಅದೇ ಯಥಾಸ್ಥಿತಿಯಲ್ಲಿ ಇರಿಸಿಕೊಂಡಿದ್ದಾರೆ. ಧರ್ಮ ಎಂದರೆ ಸ್ವಭಾವ, ಅಂತಃಸತ್ವ, ಆಂತರಿಕ ಗುಣಸ್ವಭಾವ ಎಂದು ಪರಿಗಣಿಸುವುದಾದರೆ ಭಯವೇ ನಮ್ಮ ಸನಾತನ ಧರ್ಮ ಎನ್ನಬಹುದು. ಅಂತೆಯೇ ಭಯವೆಂಬ ಅದೇ ಗುಣವೇ ಅತೀಂದ್ರಿಯ ಶಕ್ತಿಗಳ ಪರಿಕಲ್ಪನೆಗಳ ತಾಯಿ ಎಂತಲೂ ಎನ್ನಬಹುದು.

ಅತ್ಯಂತ ಹಳೆಯದಾದ ಮೆಸಪ್ರೊಟಮಿಯನರ "ಸುಮ್ಮ ಆಲು ಇನ ಮೆಲ್ಯೇ ಸಾಕಿನ್" ಎಂಬ ಶಕುನಗಳ ಕುರಿತಾದ ದಾಖಲಾಗಲಿ, ಅದೇರೀತಿ ಪ್ರಾಚೀನ "ಕಬಾಲ" ಎಂಬ ಹೀಬ್ರೂಗಳ ರಹಸ್ಯಾಚರಣೆಗಳ ಕೃತಿಯಾಗಲಿ, ಇನ್ನು ವೇದ ಸಂಪುಟಗಳ ಕಡೆ ನೋಡಿದರೆ ಅಥರ್ವವೇದವಾಗಲಿ, ತಾಂತ್ರಿಕಾಚರಣೆಗಳ ಕಡೆ ನೋಡಿದರೆ ಅನೇಕ ಸೂತ್ರಗಳ ಸಂಪುಟಗಳಾಗಲಿ; ಎಲ್ಲವೂ ಈ ಜಗತ್ತನ್ನು ಒಳಿತು ಮತ್ತು ಕೆಡುಕು ಎಂಬ ದ್ವಿ-ದಳವಾಗಿ ವಿಭಾಗಿಸಿ ಒಳಿತನ್ನು ರಕ್ಷಿಸಲು, ಕೆಡುಕನ್ನು ನಿವಾರಿಸಲು ಮಾಡುವಂತಹ ವಿಚಾರಗಳು ಮತ್ತು ತಂತ್ರಗಳೇ ಆಗಿವೆ. ಈ ಒಳಿತು ಮತ್ತು ಕೆಡಕುಗಳ ಗುಣಗಳನ್ನು ಅದೆಷ್ಟು ಗಾಢವಾಗಿ ಹೊಂದಿದ್ದಾರೆಂದರೆ ಈ ಎರಡನ್ನು ಬಿಟ್ಟರೆ ಮೂರನೆಯದನ್ನು ಯೋಚನೆಯೇ ಮಾಡದಷ್ಟು ಆಳವಾಗಿ ಒಗ್ಗಿಕೊಂಡುಬಿಟ್ಟಿದ್ದಾರೆ.

ದೇವರು ಎಂಬ ಶಕ್ತಿ

ದೇವರು ಎಂಬ ಪರಿಕಲ್ಪನೆಯೇ ಮೊಟ್ಟ ಮೊದಲಾಗಿ ಅತ್ಯಂತ ಅಸಮಂಜಸವಾದ; ವೈರುಧ್ಯಗಳಿಂದ ಕೂಡಿರುವ, ಎಲ್ಲಾ ಸುಳ್ಳು ಗುಣಗಳನ್ನು ಆರೋಪಿಸಿಕೊಳ್ಳಲ್ಪಟ್ಟಿರುವಂತಹದ್ದು. ಈಗಿನ ನವಯುಗದ ವೈಜ್ಞಾನಿಕ ಮನೋಭಾವದವರು ದೇವರು, ಆಚಾರವಿಚಾರಗಳನ್ನು



ವೈಜ್ಞಾನಿಕವಾಗಿ ನೋಡುವಂತಹ, ಗ್ರಹಿಸುವಂತಹ ವಾಡಿಕೆಯನ್ನು ರೂಢಿಸಿಕೊಳ್ಳುತ್ತಿದ್ದಾರೆ. ಅದಕ್ಕೆ ಕಾರಣವು ಬಹಳ ನೇರ ಮತ್ತು ಸರಳ. ದೇವರು ಎಂಬ ಅತ್ಯಂತ ಹಳೆಯ ಮತ್ತು ಗುಹ್ಯ ಸ್ವರೂಪದ ವಿಷಯವನ್ನು ನಿರಾಕರಿಸಿಬಿಟ್ಟರೆ ಇಡೀ ವಿಶ್ವವನ್ನು ತನ್ನ ಅಂಕೆಯಲ್ಲಿಟ್ಟುಕೊಂಡಿರುವಂತಹ ಆ ದೇವರಿಗೆ ತನ್ನಂತಹ ಹುಲು ಮಾನವನಿಗೆ ಏನು ಬೇಕಾದರೂ ಮಾಡಲು ಸಾಧ್ಯ ಎಂಬ ಭಯ.

ದೇವರು ಎಂಬುದು ಸುಳ್ಳು ಎಂಬುವುದಕ್ಕೆ ಅನೇಕ ವಿಷಯಗಳನ್ನು ಗಮನಿಸಬಹುದು.

1. ವಿವಿಧ ದೇಶಗಳಲ್ಲಿ, ವಿವಿಧ ಸಂಸ್ಕೃತಿಗಳಲ್ಲಿ, ವಿವಿಧ ಭಾಷೆ ಮತ್ತು ಪರಂಪರೆಗಳಲ್ಲಿ ದೇವರ ಹುಟ್ಟು, ಅದರ ಗುಣಗಳು, ಅದರ ಸ್ವಭಾವಗಳ ಬಗ್ಗೆ ವಿವಿಧ ರೀತಿಯ ವಿವರಣೆಗಳು ಸಿಗುತ್ತವೆ. ಹಾಗೆಯೇ ಆ ಎಲ್ಲಾ ವಿವರಣೆಗಳು ತಾಳೆಯಾಗಬೇಕೆಂದಿಲ್ಲ ಮತ್ತು ಪೂರಕವಾಗಿ ಇರಬೇಕೆಂದೇನಿಲ್ಲ.

2. ಪ್ರಾಚೀನ ರೋಮನ್, ಗ್ರೀಕ್, ಬ್ಯಾಬಿಲೋನಿಯನ್, ಮೆಸಪಟೋಮಿಯನ್, ಹೀಬ್ರೂ, ವೇದ ಮತ್ತು ಯಾವುದೇ ಬುಡಕಟ್ಟುಗಳು ಕಲ್ಪಿಸಿಕೊಂಡಿರುವ ದೇವರುಗಳೆಲ್ಲವೂ ವಿವಿಧ ಹೆಸರುಗಳಲ್ಲಿ ಮತ್ತು ವಿವಿಧ ಚಟುವಟಿಕೆಗಳಲ್ಲಿ ವ್ಯಕ್ತವಾಗುತ್ತವೆ. ಆದರೆ ಉಲ್ಲೇಖಿಸುವಾಗ ಮಾತ್ರ ಇಡೀ ಜಗತ್ತನ್ನು ಗಣಿಸುತ್ತದೆ. ಜೊತೆಗೆ ಅವರು ಹೇಳುವ ಜಗತ್ತು ಎಂದರೆ ಅವರ ಪರಿಮಿತಿಯಲ್ಲಿರುವಂತಹ ಭೌಗೋಳಿಕ ವ್ಯಾಪ್ತಿ ಮಾತ್ರವಲ್ಲದೇ ಅವರ ಕಲ್ಪನೆಗೆ ಸಿಗುವ ಜಗತ್ತಿನ ವಿಸ್ತಾರಕ್ಕೊಳಗಾಗುವ ಸೀಮೆಯದ್ದು. ಅಲ್ಲದೇ ಎಷ್ಟೋ ಕಾಲಘಟ್ಟಗಳ ನಂತರ ಅವರೇ ಅವರನ್ನು ನಿರಾಕರಿಸಿ ಮತ್ತೊಂದನ್ನು ಆರಾಧಿಸುವುದನ್ನು ರೂಢಿಸಿಕೊಂಡಿರುತ್ತಾರೆ. ಉದಾಹರಣೆಗೆ ವೇದಗಳಲ್ಲಿ ದೇವರು ಅನಿಸಿಕೊಂಡಿರುವ ಇಂದ್ರ, ಅಗ್ನಿ, ವರುಣ, ನಿರುತ್, ಯಮ ಮೊದಲಾದ ದೇವತೆಗಳನ್ನು ಇಂದು ವ್ಯಾಪಕವಾಗಿ ಪೂಜಿಸುವುದಿಲ್ಲ. ಕೃಷ್ಣ ರಾಮ, ಶಿವ, ಗಣೇಶ, ಸುಬ್ರಹ್ಮಣ್ಯ, ನ್ಯೂ ಬಾರ್ನ್ 'ಅಯ್ಯಪ್ಪ' ಇತ್ಯಾದಿ ದೇವರುಗಳು ಇಂದು ಪೂಜೆಗೊಳಗಾಗುತ್ತಿದ್ದಾರೆ. ಹಾಗಾದರೆ ಆಗ ಪೂಜಿಸುತ್ತಿದ್ದ ದೇವತೆಗಳೆಲ್ಲಾ ಏನಾದರೂ ಸತ್ತುಹೋದರೇ? ಹೊಸಬರು ಬಂದ ಕಾರಣದಿಂದ ಜಾಬ್ಲೆಸ್ ಆಗಿದ್ದಾರೆಯೇ ಅಥವಾ ನಿವೃತ್ತರಾಗಿದ್ದಾರೆಯೇ? ಹಾಗೇ ಒಪ್ಪಿಕೊಂಡರೂ ಪೌರಾಣಿಕ ಕಗ್ಗಗಳ ದೇವತೆಗಳ ನಂತರ ಹುಟ್ಟಿರುವ ದೇವರುಗಳು ಎಲ್ಲಿ? ಅವರೇಕೆ ಕಂಪ್ಯೂಟರ್ ಇತ್ಯಾದಿಗಳನ್ನು ಹೊಂದಿಲ್ಲ. ವಿಕಾಸವಾದವು ದೇವರ ವಿಷಯದಲ್ಲಿ ನಿಷ್ಕ್ರಿಯವೇ?

3. ದೇವರು ಸರ್ವಶಕ್ತ ಮತ್ತು ಸೃಷ್ಟಿಕರ್ತ ಎಂದು ಸಾಮಾನ್ಯ ವಾಗಿ ಮಾಡುವ ಗುಣಾರೋಪವೇ ಎಡವಟ್ಟಿನದಾಗಿರುತ್ತದೆ. ಏಕೆಂದರೆ ಸರ್ವಶಕ್ತನಾದವನಿಗೆ ಮತ್ತು ಸೃಷ್ಟಿಕರ್ತನಾದವನಿಗೆ ಸ್ವಲ್ಪವೂ ಕಾಮನ್‌ಸೆನ್ಸ್ ಇಲ್ಲದೇ ಕೆಟ್ಟದ್ದನ್ನು, ಕೆಡುಕಿನ ಶಕ್ತಿಗಳನ್ನು ಸೃಷ್ಟಿಸಿ ಅದರ ಮೇಲೆ ನಿಯಂತ್ರಣವನ್ನು ಹೊಂದಲಾರದೇ ಅದರ ಜೊತೆಗೆ ವೃಥಾ ಹೊಡೆದಾಡಿಕೊಂಡು ಸಮಯ, ಸಾಮರ್ಥ್ಯ, ಸಂಪನ್ಮೂಲಗಳನ್ನು ವ್ಯಯ ಮಾಡುತ್ತಿರುತ್ತಾನೆ.

4. ಒಳಿತಿನ ರಕ್ಷಕನಾಗಿರುವ, ಶಿಷ್ಟರ ಪಾಲಕನಾಗಿರುವ ಅವನು ಜಗತ್ತಿನ ಮೇಲೆ ನಿಯಂತ್ರಣವನ್ನು, ಅದರ ಸಂಪನ್ಮೂಲಗಳ ಮೇಲೆ ಅಧಿಕಾರವನ್ನು ಹೊಂದಿರುವುದಿಲ್ಲ ಎಂಬುದು ಹೇಗೆ ಸಾಬೀತಾಗುತ್ತದೆ ಎಂದರೆ, ದುಷ್ಟಶಕ್ತಿಯು ಕೂಡ ಸೃಷ್ಟಿಯ ಉತ್ಪತ್ತಿಗಳನ್ನು ಭುಂಜಿಸುತ್ತಾ ತನ್ನ ಪೋಷಣೆ ಮಾಡಿಕೊಳ್ಳುತ್ತಾ ದೈವಭಕ್ತರ ಮೇಲೆ ಅಥವಾ ಸ್ವಯಂ ದೇವರುಗಳ ಮೇಲೆಯೇ ಯುದ್ಧವನ್ನು ಮಾಡುವಷ್ಟು ಶಕ್ತಿಶಾಲಿಗಳಾಗಿರುತ್ತವೆ.

5. ಯಾವುದ್ಯಾವುದನ್ನು ದೇವರೆಂದು ಕರೆದಿದ್ದಾರೋ ಅವುಗಳನ್ನು ದೇವರಲ್ಲ ಎಂದಾಗಿ, ನಂತರ ಇನ್ಯಾವುದನ್ನೋ ದೇವರೆಂದು ಕರೆಯುವ ಪರಿಪಾಠವೂ ಕೂಡ ಆರಂಭವಾಗಿರುತ್ತದೆ. ಉದಾಹರಣೆಗೆ ಹಸುಗಳನ್ನು, ಮರಗಳನ್ನು ದೇವರೆಂದು ಪೂಜಿಸುವಂತಹ ನಂಬಿಕೆಗಳನ್ನು ಧಿಕ್ಕರಿಸಿ, ಹಾಗೆ ಮಾಡುತ್ತಿದ್ದ ಅವರು ಮೂಢರು ಎಂದು ನಿರೂಪಿಸಿ ತಾವೊಂದು ದೇವರ ಕಲ್ಪನೆಯನ್ನು ಕಟ್ಟಿಕೊಟ್ಟ ಪ್ರವಾದಿಗಳು ಇದ್ದಾರೆ. ಪ್ರಶ್ನೆ ಎಂದರೆ, ಆ ಪ್ರವಾದಿಗಳು ಅಲ್ಟಿಮೇಟ್ ಬುದ್ಧಿವಂತರು, ಜ್ಞಾನಿಗಳು ಎಂದು ಅವರು ಕಟ್ಟಿಕೊಟ್ಟಿರುವ ಪರಿಕಲ್ಪನೆಯನ್ನು ಹೇಗೆ ಒಪ್ಪುವುದು? ಅವರ ನಂತರ ಅನೇಕ ಕಾಲಘಟ್ಟಗಳಲ್ಲಿ ಅವರ ಕಾಲಘಟ್ಟದ ಬುದ್ಧಿವಂತಿಕೆ, ಗ್ರಹಿಕೆಗಳನ್ನು ಮೀರಿ ವಿಷಯಗಳು ಮತ್ತು ವಿಚಾರಗಳು ವಿಕಾಸವಾಗಿವೆ ಮತ್ತು ವಿಸ್ತಾರವಾಗಿವೆ.



ಇರಲಿ, ದೇವರು ಇಲ್ಲ, ದೇವರು ಎಂಬ ಪರಿಕಲ್ಪನೆಯು ಯಾವುದೇ ಕಾಲಕ್ಕೆ ವೈಚಾರಿಕವಾಗಿಯೂ, ವೈಜ್ಞಾನಿಕವಾಗಿಯೂ ಸಲ್ಲುವುದೇ ಇಲ್ಲ ಎಂಬುದಕ್ಕೆ ಅನೇಕ ರೀತಿಯ ತರಲೆ, ಆದರೆ ಭಾವುಕ ಭಕ್ತರು ಉತ್ತರಿಸಲು ಆಗದಂತಹ ಅನೇಕಾನೇಕ ಗಂಭೀರ ಪ್ರಶ್ನೆಗಳನ್ನು ಕೇಳುತ್ತಾ ಬಾಯಿಕಟ್ಟಬಹುದು. ಆದರೆ ವಿಷಯ ಇಲ್ಲಿ ಅದಲ್ಲ, ಜಗತ್ತಿನಲ್ಲಿರುವ ಒಳಿತು ಮತ್ತು ಕೆಡಕು ವಿದ್ಯಮಾನಗಳ ಮೇಲಿರುವ ಅಧಿಕಾರ ಮತ್ತು ನಿಯಂತ್ರಣ ಶಕ್ತಿ ಯಾರ ಕೈಯಲ್ಲಿದೆ ಮತ್ತು ಹೇಗಿದೆ ಎಂಬುದು ಮುಖ್ಯವಾದದ್ದು.

ಒಳಿತು ಮತ್ತು ಕೆಡಕುಗಳ ಮೇಲಿನ ಅಧಿಕಾರ

ಈ ಜಗತ್ತಿನಲ್ಲಿ ಕೆಟ್ಟ ಶಕ್ತಿ ಅಥವಾ ನೆಗೆಟಿವ್ ಎನರ್ಜಿ ಎಂಬುದನ್ನು ಯಾವಾಗ ಕಂಡುಕೊಂಡರೋ ಅಂದೇ ದೇವರ ಪರಿಕಲ್ಪನೆಯ ಸೋಲಿನ ಸರಣಿಯ ಮೊದಲ ಹೆಜ್ಜೆ ಪ್ರಾರಂಭವಾಯಿತು. ಅಂದೇ ದೇವರು ಎಂಬುವ ಶಕ್ತಿ ತಾನು ಸರ್ವಶಕ್ತ ಸರ್ವಜ್ಞ ಸೃಷ್ಟಿಕರ್ತ ಎಂಬ ಗುಣಾರೋಪದ ಬಿರುದುಗಳಿಗೆ ಅರ್ಹನಲ್ಲ ಎಂಬುದನ್ನು ಸಾಬೀತುಪಡಿಸಿದ.

ಆದರೆ, ತಮ್ಮ ಅಭಿಮಾನದ ನಾಯಕ ನಟ ಎಷ್ಟೇ ಕೆಟ್ಟ ಅಭಿನಯದ ಚಿತ್ರ ಮಾಡಿದರೂ ಒಮ್ಮೆಯಾದರೂ ನೋಡುವ ಅಭಿಮಾನಿ ದೇವರುಗಳು ಚಿತ್ರದ ಕಥೆಯನ್ನೋ, ನಿರ್ದೇಶಕನನ್ನೋ, ನಾಯಕಿಯನ್ನೋ, ಕ್ಯಾಮರಾ ಕೆಲಸವನ್ನೋ ಒಟ್ಟಾರೆ ನಾಯಕನ ಹೊರತಾಗಿ ಬೇರೆ ಯಾವುದನ್ನಾದರೂ ದೂರುವ ಪರಿಪಾಠದಂತೆ ದೇವರನ್ನು ಹೊರತಾಗಿಸಿ ದೂರಲು ಬೇರೆ ಬೇರೆ ವಿಷಯಗಳನ್ನೆಲ್ಲಾ ಸಂಶೋಧಿಸ ತೊಡಗಿದ್ದರು ನಮ್ಮ ಪುರಾತನರು. ಅದರ ಪ್ರತಿಫಲವೇ ಕರ್ಮ, ದೆವ್ವ, ದುಷ್ಟ ಶಕ್ತಿ, ಸೈತಾನ ಇತ್ಯಾದಿ. ಆದರೆ ದೊಡ್ಡ ತಮಾಷೆಯ ವಿಷಯವೆಂದರೆ ದೇವರಿಂದ ಅವನಿಗೆ ಕೊಟ್ಟಂತಹ ಬಿರುದುಬಾವಲಿಗಳನ್ನು ಕಿತ್ತುಕೊಳ್ಳಲಿಲ್ಲ. ಅವುಗಳನ್ನು, ಹಾಗೆಯೇ ಮುಂದುವರಿಸಿದರು. ಒಂದು ವೇಳೆ ದೇವರ ಕಾರ್ಯಕ್ಷಮತೆಯ ಆಧಾರದ ಮೇಲೆ ಅವನ ಬಿರುದು ಬಾವಲಿಗಳನ್ನು ಕೊಡುವುದು ಮತ್ತು ಹಿಂದಕ್ಕೆ ಪಡೆಯುವ ಕೆಲಸದಲ್ಲಿ ಭಕ್ತಜನರು ನಿಷ್ಠುರರಾಗಿದ್ದರೆ, ವಸ್ತುನಿಷ್ಠರಾಗಿದ್ದರೆ, ಕೂಲಿಗೆ ತಕ್ಕಂತೆ ಕಾಳು ಎಂಬಂತೆಯೋ, ಅಪಾತ್ರನಿಗೆ ದಾನ ಮಾಡಬಾರದು ಎಂಬ ನೀತಿಗೆ ಬದ್ಧವಾಗಿದ್ದರೆ ಇಷ್ಟು ಹೊತ್ತಿಗಾಗಲೇ ಇಡೀ ಪ್ರಪಂಚವೇ ವಸ್ತುನಿಷ್ಠರದಾಗಿರುತ್ತಿತ್ತು, ನಾಸ್ತಿಕ ಆಸ್ತಿಕ ಎಂಬ ವಿಂಗಡಣೆಯೇ ಇಲ್ಲದೇ ಹಿಂದೆ ಆಸ್ತಿಕರೆಂಬುವರು ಇದ್ದರಂತೆ ಎಂಬುದು ಬರಿಯ ಅಧ್ಯಯನದ ವಿಷಯವಾಗಿರುತ್ತಿತ್ತು, ನಮ್ಮ ಮಕ್ಕಳಿಗೆ ದೇವರ ಮತ್ತು ದೇವರ ಭಕ್ತರ ಕಾಮಿಕಲ್ ಜೋಕ್‌ಗಳನ್ನು ಕಾಮಿಡಿ ಟೈಂ ಷೋಗಳಲ್ಲಿ ಹೇಳಿಕೊಂಡು ನಗಬಹುದಾಗಿತ್ತು.

ಆದರೆ ದೇವರ ಅಸ್ತಿತ್ವದ ಬಗ್ಗೆ ಗಂಭೀರವಾಗಿ ಪ್ರಶ್ನೆಗಳನ್ನು ಎತ್ತಿದರೆ ಕೇಸುಗಳನ್ನು ಜಡಿಯುವ ಪರಿಸ್ಥಿತಿಯು ಇಂದಿಗೂ ಇರುವುದು ಏಕೆ? ಅವರನ್ನು ಧರ್ಮ ವಿರೋಧಿಗಳೆಂದು ಕರೆದು ದ್ವೇಷ ಸಾಧಿಸುವುದು ಏಕೆ? ನಾಸ್ತಿಕತೆಯನ್ನು ಬಿಂಬಿಸುವ ಲೇಖನಗಳನ್ನು ಬರೆಯುವಂತಹ ಲೇಖಕರನ್ನು ಒಂದೆಡೆ ಕೊಲ್ಲುತ್ತಾ ಬರುವಂತಹ ಬಾಂಗ್ಲಾ ಮತ್ತಿತರ ಭಾಗಗಳಲ್ಲಿರುವ ಮುಸ್ಲಿಂ ಉನ್ಮತ್ತರಾಗಲಿ, ಅಣುರೇಣು ತೃಣಕಾಷ್ಟವೂ ಅವನನುಜ್ಞೆಯಿಲ್ಲದೇ ನಡೆಯದು ಎಂಬ ಸರ್ವಶಕ್ತ ದೇವರನ್ನು ಬೈದರೆ ಅವನ ರಕ್ಷಣೆಗೆ ಪೊಲೀಸ್, ಕೋರ್ಟ್ ಮೆಟ್ಟಲೇರಿಕೊಂಡು ನಿಲ್ಲುವ ಹಿಂದೂತ್ವದ ಮೂರ್ಖರಾಗಲಿ ಯಾಕಷ್ಟು ಮತಿಹೀನರಾಗುತ್ತಾರೆಂದರೆ ಒಂದೇ ಒಂದು ಸ್ಪಷ್ಟವಾದ ಗ್ರಹಿಕೆಯೆಂದರೆ ಅವರ ಬ್ರೈನ್ ಮೆಕಾನಿಸಂನಲ್ಲಿ ರೀ ಇನ್‌ಸ್ಟಾಲ್, ಫಾರ್ಮ್ಯಾಟ್ ಮಾಡುವಂತಹ ಸೌಲಭ್ಯವನ್ನು ಹೊಂದಿಲ್ಲದಿರುವುದು.


ಅದು ಹಾಗಿರಲಿ, ಇದೇ ರೀತಿಯಲ್ಲಿಯೇ ಜನಸಾಮಾನ್ಯರೂ ಕೂಡ ಫಾರ್ಮ್ಯಾಟ್ ಮಾಡಿಕೊಳ್ಳುವ ಇರಾದೆ ಇಲ್ಲದವರಾಗಿರುವುದರಿಂದಲೇ ಪುರಾತನ ಧರ್ಮವಾದ ಭಯವನ್ನು ತಮ್ಮಲ್ಲಿರಿಸಿಕೊಂಡು ದೇವರು ಮತ್ತು ದೆವ್ವಗಳ ಪರಿಕಲ್ಪನೆಯನ್ನು ಜೀವಂತವಾಗಿರಿಸಿಕೊಂಡಿರುವುದು. ಅದರಿಂದಲೇ ಮಾಟ ಮಂತ್ರಗಳ ವಿಷಯಗಳೂ ಪ್ರಾಯೋಜಕತ್ವವನ್ನು ಪಡೆದಿರುವುದು. ಭಯಗೊಳ್ಳುವವರದ್ದು ಒಂದು ವಿಭಾಗವಾದರೆ, ಭಯಗೊಳಿಸುವವರದ್ದು ಇನ್ನೊಂದು ವಿಭಾಗ.

ಇವುಗಳದ್ದೇ ಕಾರುಬಾರುಗಳು ಪುರಾಣಗಳಲ್ಲಿ, ಜಾನಪದ ಕಥಾನಕಗಳಲ್ಲಿ, ತಾಂತ್ರಿಕ ಮತ್ತು ಮಾಂತ್ರಿಕಾಚರಣೆಗಳ ಪದ್ಧತಿಗಳಲ್ಲಿ ವಿಜೃಂಭಿಸಿರುವವು. ಅದೇ ಇಂದಿನ ನವಯುಗದಲ್ಲೂ ಮುಂದುವರಿದಿವೆ. ■

ಪೇಜಾವರ, ಮುಸ್ಲಿಮರು ಮತ್ತು ಕಲಬುರ್ಗಿ

ಉಡುಪಿ ಜಿಲ್ಲಾ ಮುಸ್ಲಿಂ ಪರ್ಯಾಯ ಸೌಹಾರ್ದ ಸಮಿತಿಯು ಪೇಜಾವರ ಮಠಾಧೀಶರ ಪರ್ಯಾಯ ಮಹೋತ್ಸವದ ಅಂಗವಾಗಿ ಜನವರಿ ಹತ್ತರಂದು ಹೊರೆಕಾಣಿಕೆ ಸಮರ್ಪಣೆ ಕಾರ್ಯಕ್ರಮ ಹಮ್ಮಿಕೊಂಡಿರುವುದು ಪತ್ರಿಕೆಗಳಲ್ಲಿ ಓದಿ ಸಂತಸವಾಯಿತು. ಹಾಗೆಯೇ ಜನವರಿ 17 ರಂದು ಪರ್ಯಾಯದ ಅಂಗವಾಗಿ ಮುಸ್ಲಿಮರಿಂದ ದೊಡ್ಡ ರಕ್ತದಾನ ಶಿಬಿರ ಸಹ ಈ ಸಮಿತಿ ಆಯೋಜನೆ ಮಾಡಿರುವುದು ಶ್ಲಾಘನೀಯ.

1992 ರಲ್ಲಿ ಡಿಸೆಂಬರ್ 6 ರಂದು ಇದೇ ಪೇಜಾವರ ಶ್ರೀಗಳು ಬಾಬ್ರಿ ಮಸೀದಿಯ ಗುಮ್ಮಟದ ಮೇಲೆ




ಸ್ಪೈಡರ್‌ಮ್ಯಾನ್ ತರಹ ಏರಿ ಹಿಂದುಳಿದ ಜಾತಿಯ ತಮ್ಮ ಪಡ್ಡೆ ಶಿಷ್ಯರನ್ನು ಪ್ರಚೋದಿಸಿ ಐತಿಹಾಸಿಕ ಮಸೀದಿಯನ್ನು ಬೀಳಿಸಲು ಮೊಟ್ಟಮೊದಲ ಗುದ್ದಲಿ ಪೆಟ್ಟು ಹಾಕಿದ್ದರು. ಜತೆಗೆ ಇತ್ತೀಚೆಗೆ ಕೆಲವು ಸಾರ್ವಜನಿಕ ವೇದಿಕೆಯಲ್ಲಿ ಭಾರತೀಯ ಮುಸ್ಲಿಮರು ಗೋಮಾಂಸ ಸೇವನೆ ತ್ಯಜಿಸಲಿ ಅಥವಾ ಪಾಕಿಸ್ತಾನಕ್ಕೆ ಹೋಗಲಿ. ಮುಖ್ಯಮಂತ್ರಿಗಳು ಮಸೀದಿಯ ಮುಂದೆ ಹಂದಿ ಮಾಂಸ ಸೇವಿಸಿ ತೋರಿಸಲಿ ಎಂದೆಲ್ಲಾ ಇದೇ ಸ್ವಾಮೀಜಿ ಸವಾಲು ಹಾಕಿದ್ದರು. ಆದರೂ ನಮ್ಮ ಉಡುಪಿಯ ಮುಸ್ಲಿಂ ಬಾಂಧವರು ಈ ಘೋರ ಕಹಿಘಟನೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳದೇ ಅದೇ ಪೇಜಾವರರ ಪರ್ಯಾಯಕ್ಕೆ ದೊಡ್ಡ ದೊಡ್ಡ ಹೊರೆ ಕಾಣಿಕೆ ಕೊಡುತ್ತಿರುವುದರ ಹಿಂದೆ ಇಲ್ಲಿಯ ಮುಸ್ಲಿಮರಲ್ಲಿ ಇರುವ ವಿಶಾಲ ಹೃದಯ ನಾವು ಗಮನಿಸಬೇಕಾಗಿದೆ.

ಇತ್ತೀಚೆಗೆ ಪೇಜಾವರರು ತಮ್ಮ ಪರ್ಯಾಯದ ಕೊನೆಯ ಹಂತದ ಪ್ರಚಾರಕ್ಕೆ ಧಾರವಾಡಕ್ಕೆ ಹೋಗಿದ್ದರು. ಅಲ್ಲಿ ಅವರಿಗೆ ನಾಲ್ಕು ತಿಂಗಳ ಹಿಂದೆ ಕೊಲೆಯಾದ ವಿಚಾರವಾದಿ ಡಾ.ಕಲಬುರ್ಗಿ ಕೊನೆಗೊಮ್ಮೆ ನೆನಪಾಗಿ ಅವರ ಮನೆಗೆ ಭೇಟಿ ಕೊಟ್ಟು, ಕಲಬುರ್ಗಿಯವರ ಕೊಲೆಗಾರರನ್ನು ತಕ್ಷಣ ಹಿಡಿಯಬೇಕೆಂದು ಪೊಲೀಸರಿಗೆ ಆಜ್ಞೆ ಕೊಡಿಸಿದರು.

ಈ ಸಂದರ್ಭದಲ್ಲಿ ನುರಿತ ಇತಿಹಾಸ ಸಂಶೋಧಕರೂ ಆಗಿದ್ದ ಡಾ.ಕಲಬುರ್ಗಿಯವರು ಉಡುಪಿ ಮಠಕ್ಕೆ ಕನಕದಾಸರು ಬಂದದ್ದು ನಿಜವೇ ಎಂಬ ಬಗ್ಗೆ ಸಂದೇಹ ವ್ಯಕ್ತಪಡಿಸಿದ್ದನ್ನು ಈಗ ನೆನಪಿಸಬೇಕಿದೆ. ಈಗಿನ ಧಾರವಾಡ ಜಿಲ್ಲೆಯ ಬಾಡ ಎಂಬಲ್ಲಿ ಹುಟ್ಟಿದ್ದ ಕನಕದಾಸರು ಕಾಲನಡಿಗೆಯಲ್ಲಿ ಘಟ ಘೋರ ಸಹ್ಯಾದ್ರಿ ಘಟ್ಟ ದಾಟಿ ಮುನ್ನೂರು ಮೈಲು ದೂರದ ಕರಾವಳಿಯ ಉಡುಪಿಗೆ ಹೋಗಿರಲಿಕ್ಕಿಲ್ಲ ಎಂಬುದು ಡಾ. ಕಲಬುರ್ಗಿಯವರ ಅಭಿಪ್ರಾಯವಾಗಿತ್ತು. ಆದರೂ ಉಡುಪಿ ಮಠದ ಇತಿಹಾಸದಲ್ಲಿ ಐನೂರು ವರ್ಷಗಳ ಹಿಂದೆ ವಾದಿರಾಜ ಸ್ವಾಮಿಗಳ ಸಮಯದಲ್ಲಿ ಕನಕದಾಸರು ಉಡುಪಿಗೆ ಬಂದಿದ್ದರು ಮತ್ತು ಅವರ ಭಕ್ತಿಗೆ ಮೆಚ್ಚಿ ಗರ್ಭಗುಡಿಯ ಗೋಡೆ ಮತ್ತು ಹೊರಗಿನ ಆವರಣದ ಗೋಡೆ ಎರಡನ್ನೂ ಒಡೆದು ಕೃಷ್ಣನ ಮೂರ್ತಿ ತಿರುಗಿ ನಿಂತಿತು ಎಂಬ ಕಟ್ಟುಕಥೆ ಹುಟ್ಟುಹಾಕಿ ಮುಗ್ಧ ಜನಸಾಮಾನ್ಯರನ್ನು ಯಾರು ಯಾವ ಕಾಲಘಟ್ಟದಲ್ಲಿ ಮಂಗ ಮಾಡಿದ್ದು ಎಂದು ಸಂಶೋಧನೆಯಾಗಬೇಕಿದೆ. ಈ ಬಗ್ಗೆ ವಿಚಾರವಾದಿ ಡಾ. ಭಾಸ್ಕರ್ ಮಯ್ಯ ಇವರು ಕೆಲವು ವಿಶ್ಲೇಷಣಾತ್ಮಕ ಲೇಖನಗಳನ್ನು ಬರೆದಿದ್ದರು.

ಉಡುಪಿ ದೇವಳದ ಮಹಿಮೆ ನಿಜವಾಗಿದ್ದರೆ ಕೃಷ್ಣನ ಕಲ್ಲಿನ ಮೂರ್ತಿ ತಿರುಗಿ ನಿಂತು ಮೇಸ್ತ್ರಿಯಂತೆ ಗೋಡೆ ಕೆತ್ತುವ ಬದಲು ದೇವರೇ ಸ್ವತಃ ಪ್ರತ್ಯಕ್ಷನಾಗಿ ಕನಕದಾಸರಿಗೆ ಸ್ಥಳದಲ್ಲಿಯೇ ಮುಕ್ತಿ ಕರುಣಿಸಿ ಹೀನ ಜಾತಿವಾದಿ ಸಮಾಜದಿಂದ ತನ್ನ ಶೂದ್ರ ಭಕ್ತನನ್ನು ಬಿಡುಗಡೆಗೊಳಿಸುತ್ತಿದ್ದನು ಮತ್ತೂ ಕೃಷ್ಣ ತನ್ನ ದೇವಾಲಯದಲ್ಲಿ ಆಗಲೂ ಇದ್ದ ಪಂಕ್ತಿ-ಭೇದ ನೋಡಿ ಆಗಿನ ಪರ್ಯಾಯ ಸ್ವಾಮಿಯನ್ನು ಖಂಡಿತಾ ಘೋರವಾಗಿ ಶಿಕ್ಷಿಸುತ್ತಿದ್ದನು. ಗರ್ಭಗುಡಿಯ ಕನಕನ ಕಿಂಡಿಗೆ "ನವಗ್ರಹ ಕಿಂಡಿ" ಎಂಬ ಬೇರೆ ಹೆಸರಿನಿಂದ ಸ್ವತಃ ಎಲ್ಲಾ ಉಡುಪಿ ಸ್ವಾಮಿಗಳು ಇಂದಿಗೂ ಕರೆಯುತ್ತಿರುವುದು ಆ ಕಿಂಡಿಯನ್ನು ಮೂಲ ಗುಡಿ ಕಟ್ಟುವಾಗಲೇ ರಚಿಸಲಾಗಿತ್ತು ಎಂಬುದಕ್ಕೆ ಸಾಕ್ಷಿ. ದೇವಳದ ಹೊರಗಿನ ಗೋಡೆಯ ಕಿಂಡಿ ಸಿಡಿಲು ಬಡಿದು ಉಂಟಾಗಿದ್ದು ಎಂದು ಅದೇ ಮಠದ ಒಬ್ಬ ಯತಿಗಳೇ ಹಿಂದೊಮ್ಮೆ ಹೇಳಿ ವಿವಾದ ಸೃಷ್ಟಿಸಿದ್ದರು. ಒಟ್ಟಾರೆ ಕನಕದಾಸರಿಗೂ ಉಡುಪಿ ಮಠಕ್ಕೂ ಸಂಬಂಧವಿಲ್ಲ ಎಂದು



ಡಾ.ಕಲಬುರ್ಗಿ ಹೇಳಿದ್ದು ಸರಿಯಿರಬಹುದು. ಇದನ್ನು ಎಲ್ಲಾ ಮಾಧ್ವ ಬ್ರಾಹ್ಮಣರೇ ಒಳಗಿಂದೊಳಗೆ ಒಪ್ಪುತ್ತಾರೆ!

-ಹರೀಶ್ ಎಂ. ಆರ್, ಉಡುಪಿ

ವಿಜ್ಞಾನ, ಕುಜ್ಞಾನ ಮತ್ತು ಅಜ್ಞಾನ

ಇತ್ತೀಚೆಗೆ ವಿಜ್ಞಾನಕ್ಕೆ ಕುಜ್ಞಾನದ ಹೊದಿಕೆ ತೊಡಿಸುವ ಸಂಘಪರಿವಾರದವರ ವ್ಯಾಟ್ಸಅಪ್ ಕುತಂತ್ರಗಳನ್ನು ಬಯಲಿಗೆಳೆಯುವ ಲೇಖನ ಮಾಲೆ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದು ತುಂಬಾ ಸಮಯೋಚಿತವಾಗಿದೆ. ಯಾಕೆಂದರೆ ಆಧುನಿಕ ವಿಜ್ಞಾನಗಳ ಫಾರ್ಮುಲಾ ಗೊತ್ತಿತ್ತು ಎಂಬ ವಿತಂಡವಾದಕ್ಕೆ, ಹಾಗೂ ನಮ್ಮ ಎಲ್ಲಾ ಹಳೆಯ ಕಂದಾಚಾರಗಳಿಗೆ ಈಗ ಹೊಸದಾಗಿ ವಿಜ್ಞಾನದ ಲೇಪನ ಕೊಡುವ ಸಂಘಿಗಳ ಶಬ್ದಜಾಲಕ್ಕೆ 'ಕುಜ್ಞಾನ' ಎಂಬ ಹೊಸ ಶಬ್ದ ಹುಟ್ಟಿ ಕನ್ನಡ ನಿಘಂಟು ಸೇರಿರುವುದು ಸಮಂಜಸವಾಗಿದೆ. ಕುಜ್ಞಾನ ಎಂಬುದು ಸುಜ್ಞಾನ ಮತ್ತು ವಿಜ್ಞಾನ ಈ ಎರಡೂ ಶಬ್ದಗಳಿಗೆ ವಿರುದ್ಧಾರ್ಥ ಕೊಡುವ ಸರಿಯಾದ ಶಬ್ದವಾಗಿದೆ. ಕುಜ್ಞಾನಕ್ಕಿಂತ ಅಜ್ಞಾನವೇ ಮೇಲು ಎನ್ನಬಹುದು. ಕಾರಣ ಅಜ್ಞಾನದಿಂದ ಕೇವಲ ಒಬ್ಬ ವ್ಯಕ್ತಿಗೆ ವೈಯಕ್ತಿಕ ನಷ್ಟವಾದರೆ ಕುಜ್ಞಾನದಿಂದ ಇಡೀ ವಿದ್ಯಾವಂತ ಸಮಾಜಕ್ಕೆ ಅಪಾಯವಿದೆ. ನಮ್ಮ ಪೂರ್ವಜರು ವಿಜ್ಞಾನದಲ್ಲಿ ಅಷ್ಟೊಂದು ಮುಂದುವರಿದಿದ್ದು ನಿಜವಾಗಿದ್ದರೆ ಆವರು ತಮ್ಮ ಈ ಮಹಾ ಆವಿಷ್ಕಾರಗಳ ಫಾರ್ಮುಲಾವನ್ನು ತಾಳೆ ಗ್ರಂಥಗಳಲ್ಲಿ ಬರೆದಿಟ್ಟು ಅಥವಾ ತಮ್ಮ ಕುಟುಂಬದ ಮುಂದಿನ ಪೀಳಿಗೆಗೆ ಹಾಗೂ ಶಿಷ್ಯವೃಂದಕ್ಕೆ ಕಲಿಸಿ ತಲತಲಾಂತರವಾಗಿ ಜ್ಞಾನ ಹರಿಸುವಂತೆ ಮಾಡದೇ ಅದನ್ನು ಮುಚ್ಚಿಟ್ಟು ನಾಶವಾಗಲು ಬಿಟ್ಟಿದ್ದು ಯಾಕೆ?

ಮಂಗಳೂರಿನ ಗೌಡರ ಬಿಜಿಎಸ್ ವಿದ್ಯಾಸಂಸ್ಥೆಯಲ್ಲಿ ಮೊನ್ನೆ ಡಿಸೆಂಬರ್ 30 ರಂದು ಅಧ್ಯಾತ್ಮ ಮತ್ತು ವಿಜ್ಞಾನ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡುತ್ತಾ ಮಂಗಳೂರು ವಿವಿ ಕುಲಪತಿ ಪ್ರೊ.ಕೆ.ಭೈರಪ್ಪ "ಪ್ರಧಾನಿ ನರೇಂದ್ರ ಮೋದಿ ವೈದಿಕ ವಿಜ್ಞಾನಕ್ಕೆ ಒತ್ತು ನೀಡುತ್ತಿರುವುದು ಉತ್ತಮ ಬೆಳವಣಿಗೆ. ಭಾರತೀಯ ವಿಜ್ಞಾನವು ಅಧ್ಯಾತ್ಮಿಕ ತಳಹದಿ ಹೊಂದಿದ್ದು ಪುಷ್ಪಕ ವಿಮಾನ, ಕ್ಷಿಪಣಿ ನಿರ್ಮಾಣ, ಅಣು ವಿಜ್ಞಾನ ಪುರಾಣಕಾಲದಲ್ಲಿಯೇ ಇತ್ತು. ನ್ಯೂಟನ್ ಗುರುತ್ವಾಕರ್ಷಣಾ ತತ್ವ ಕಂಡುಹಿಡಿಯುವ ಎರಡು ಸಾವಿರ ವರ್ಷ ಮೊದಲೇ ಭಾರತೀಯರು ಈ ನಿಯಮ ಸಾದರಪಡಿಸಿದ್ದರು" ಎಂದೆಲ್ಲಾ ಹೆಮ್ಮೆ ವ್ಯಕ್ತ ಪಡಿಸಿದರು.

ಕುಲಪತಿಗಳ ಈ ಅವೈಜ್ಞಾನಿಕ ಮನೋಭಾವ ಸಭಿಕರನ್ನು ದಂಗುಬಡಿಸಿತು. ಒಂದು ವಿಶ್ವವಿದ್ಯಾಲಯದ ಕುಲಪತಿ ಸ್ಥಾನದಲ್ಲಿರುವವರು ಹೀಗೆಲ್ಲಾ ವೈದಿಕ ಕುವಿಜ್ಞಾನವನ್ನು ಸಮರ್ಥಿಸುತ್ತಾ ಹೋದರೆ ಇಂತಹ ವಿಶ್ವವಿದ್ಯಾಲಯಗಳಲ್ಲಿ ಕಲಿಯುತ್ತಿರುವ ಮುಂದಿನ ಪೀಳಿಗೆಯಲ್ಲಿ ಎಂತಹ ಮನೋಭೂಮಿಕೆ ಸೃಷ್ಟಿಯಾಗಬಹುದು ಯೋಚಿಸಿ? (ಒಬ್ಬ ಭೈರಿಗೆ ಭೈರಪ್ಪ ಸಾಲದೆಂದು ಈಗ ಇನ್ನೊಬ್ಬ ಭೈರಪ್ಪ ವಕ್ಕರಿಸಿದ್ದಾರೆ).

ಸರಕಾರದ ಜಾತ್ಯತೀತ ಶಿಕ್ಷಣ ನೀತಿಗನುಗುಣವಾಗಿ ಮಂಗಳೂರು ವಿಶ್ವ ವಿದ್ಯಾಲಯದ ಕ್ಯಾಂಪಸ್ಸಿನಲ್ಲಿ ಹಿಂದೆಂದೂ ಧಾರ್ಮಿಕ ಸಮಾರಂಭ ನಡೆದೇ ಇರಲಿಲ್ಲ. ಆದರೆ ಈಗಿನ ಕುಲಪತಿಗಳು ಬಂದಮೇಲೆ ಮೊಟ್ಟ ಮೊದಲ ಬಾರಿಗೆ ಕಳೆದ ಸೆಪ್ಟಂಬರಿನಲ್ಲಿ ವಿವಿ ಕ್ಯಾಂಪಸ್ಸಿನಲ್ಲಿ ಗಣೇಶೋತ್ಸವ ನಡೆಸಲಾಯಿತು. ಕರಾವಳಿಯಲ್ಲಾ ಹಿಂದೂತ್ವಾ ಲ್ಯಾಬ್ ಆಗಿರುವುದು ನಿಜ, ಕರಾವಳಿಯ ಪೊಲೀಸ್ ಇಲಾಖೆಯಲ್ಲಿಯೂ ಸಂಘ ಪರಿವಾರದವರು ತುಂಬಿರುವುದು ನಿಜ. ಆದರೆ ವೈಜ್ಞಾನಿಕ ಮನೋಭಾವದ ಭಾವೀ ಪ್ರಜೆಗಳನ್ನು ನಿರ್ಮಿಸುವ ಹೊಣೆ ಹೊತ್ತಿರುವ ಕರಾವಳಿಯ ಶಿಕ್ಷಣ ಕ್ಷೇತ್ರ ಮತ್ತು ವಿಶ್ವವಿದ್ಯಾಲಯ ಸಹ ಈಗ ಹಿಂದೂತ್ವದ



ಲ್ಯಾಬ್ ಆಗಿ ಪರಿವರ್ತನೆ ಆಗುತ್ತಿರುವುದು ಭವಿಷ್ಯದ ದೃಷ್ಟಿಯಿಂದ ತುಂಬಾ ಅಪಾಯಕಾರಿಯಾಗಿ ಕಾಣುತ್ತಿದೆ.

ಮೊನ್ನೆ ಬುಧವಾರ ಕಾಲೇಜು ವಿದ್ಯಾರ್ಥಿಗಳ ಒಂದು ಸಮಾರಂಭದಲ್ಲಿ ನಮ್ಮ ಮಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳೇ ಸ್ವತಃ ಈ ಕುಜ್ಞಾನದ ಪ್ರತಿಪಾದಕರಾಗಿ ಅವತಾರವೆತ್ತಿದ್ದು ಕಂಡು ಈ ಕುಜ್ಞಾನದ ವಿಷ ಬೇರು ಎಷ್ಟು ಆಳವಾಗಿ ಹರಡಿದೆ ಎಂಬುದರ ಅಂದಾಜು ನಮಗೆ ಕೊಟ್ಟಿತು.


ಅಲ್ಲಿ ಮುಖ್ಯ ಅತಿಥಿಯಾಗಿ ಬಂದಿದ್ದ ಒಕ್ಕಲಿಗರ ಆದಿ ಚುಂಚನಗಿರಿ ಮಹಾಮಠದ ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿ ಸಹ ಈ ವೈದಿಕ ಕುವಿಜ್ಞಾನ ಸಮರ್ಥಿಸುತ್ತಾ ಮಾತನಾಡಿದ್ದು ನೋಡಿ ಸಭಿಕರಿಗೆ ಆಘಾತವಾಯಿತು. ನಮ್ಮ ಪೂರ್ವಜರಿಗೆ ಪುರಾಣಕಾಲದಲ್ಲಿಯೇ ಈಗಿನ ಎಲ್ಲಾ

ನಮ್ಮ ರಾಜ್ಯದ ಶಿಕ್ಷಣ ಸಚಿವರು ಮತ್ತು ಮುಖ್ಯಮಂತ್ರಿಗಳು ಇದನ್ನು ಗಮನಿಸಿರುವರೇ?


-ರಾಮಕೃಷ್ಣ ಎ ಶಿಲ್ಲೆ, ಮಂಗಳೂರು

ಪುರಾಣಕತೆಗಳೆಲ್ಲ ಕಾಲ್ಪನಿಕ ಅಜ್ಜಿ ಕತೆಗಳು

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಬನ್ನಂಜೆ ಗೋವಿಂದಾಚಾರ್ಯರ 80 ನೇ ಹುಟ್ಟುಹಬ್ಬದ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಾ ಉಡುಪಿಯ ಪೇಜಾವರ ಶ್ರೀಗಳು "ಶೂದ್ರ ತಪಸ್ವಿ



ಶಂಭೂಕನ ವಧೆಯಲ್ಲಿ ವೈದಿಕ ಪುರೋಹಿತಶಾ
ಕೈವಾಡ ಇಲ್ಲವೇ ಇಲ್ಲ, ರಾಮ ಜಾತಿಭೇದ ಮಾಡುತ್ತಿ
ಎಂಬುದಕ್ಕೆ ಸಾಕ್ಷಿ ರಾವಣ ಬ್ರಾಹ್ಮಣನಾಗಿದ್ದರೂ
ಅವನನ್ನು ಕೊಂದದ್ದು. ಶಂಭೂಕ ಮತ್ತು ರಾವಣ
ಕೆಟ್ಟ ಉದ್ದೇಶದಿಂದ ತಪಸ್ಸು ಮಾಡಿದ್ದರಿಂದ
ಇಬ್ಬರನ್ನೂ ವಧಿಸಬೇಕಾಯಿತು" ಎಂದು ಶಂ
ವಧೆಯನ್ನು ಸಮರ್ಥಿಸಿದರು.




ಹಾಗಾದರೆ ಶಂಭೂಕನ ತಪಸ್ಸಿಗೆ ಯಾವ ಕೆಟ್ಟ ಉ
ಇತ್ತು ಎಂದು ಸ್ವಾಮೀಜಿ ಹೇಳಬಲ್ಲರೇ? ದ
ಜನಾಂಗದ ಶೂದ್ರನೊಬ್ಬ ಮುಕ್ತಿ ಹೊಂದಲು ಬಯ
ಕೆಟ್ಟ ಉದ್ದೇಶವೇ? ಇಲ್ಲಿಯ ಮೂಲ ಬುಡ
ಜನಾಂಗದವನೊಬ್ಬ ತನ್ನ ತಂದೆಯ ಒಡೆತನದಲ್ಲಿ
ದ್ದು ಅರಣ್ಯದಲ್ಲಿ ಯಾವ ಜೀವಿಗಳಿಗೂ ಸ್ವಲ್ಪವೂ ತೊ
ಮಾಡದೇ ತನ್ನಷ್ಟಕ್ಕೆ ತಾನೇ ತಪಸ್ಸು ಮಾಡಿದರೆ ಅ
ಪ್ರಶ್ನಿಸಲು ಹೊರಗಿನಿಂದ ಬಂದ ಆರ್ಯ ವೈದಿ
ಅಧಿಕಾರವೆಲ್ಲಿತ್ತು? ರಾಮ ಶಂಭೂಕನನ್ನು ಕೊಂದ ಕೂ
ಒಬ್ಬ ಬ್ರಾಹ್ಮಣನ ಸತ್ತು ಕೊಳೆತುಹೋಗಿದ್ದ ಮ
ಮತ್ತೆ ಜೀವಂತವಾದನು ಎಂಬ ಕಟ್ಟುಕಥೆ ಕಟ್ಟಿ
ಸಮಾಜದ ತಲೆಗೆ ತಿಕ್ಕಿದವರು ಆರ್ಯ ಪುರೋ
ಶಾಹಿಯೇ ತಾನೇ.

ಆದರೂ ತಪಸ್ವಿ ಶಂಭೂಕನ ವಧೆಯಲ್ಲಿ ವ
ಪುರೋಹಿತರ ಕೈವಾಡವಿಲ್ಲ ಎಂದು ಪೇಜಾವರರು
ವಿತಂಡವಾದ ಮಾಡುತ್ತಿರುವುದು ಖೇದಕರ. (ಹೋದ
ಹೈಸ್ಕೂಲು ಮಕ್ಕಳಂತೆ ಸವಾಲು ಎಸೆದು ಪರಾರಿಯ
ವುದು ಈ ಸ್ವಾಮೀಜಿಯ ಹಳೆಯ ಚಾಳಿ)

ರಾವಣ ಮತ್ತು ಶಂಭೂಕ ಇಬ್ಬರನ್ನೂ ಒಂದೇ ತಕ್ಕ
ಲ್ಲಿಟ್ಟು ತೂಗುವ ಪೇಜಾವರ ಶ್ರೀಗಳು ಈ ಕೆ
ಪ್ರಶ್ನೆಗಳಿಗೆ ಉತ್ತರಿಸಬಲ್ಲರೇ? ರಾವಣ ದುಷ್ಟನಾಗಿ
ಅವನನ್ನು ಕೊಂದದ್ದಕ್ಕೆ ರಾಮನಿಗೆ ಬ್ರಹ್ಮಹತ್ಯೆ ದ
ತಗುಲಿತಂತೆ ಮತ್ತು ಅದರ ಪರಿಹಾರಕ್ಕೆ ರಾಮನು ಅಶ್ವ
ಯಾಗ ಮಾಡಿದನು. ಆದರೆ ಯಾವುದೇ ತಪ್ಪು ಮಾ
ಮುಗ್ಧ ತಪಸ್ವಿ ಶಂಭೂಕನ ಕೊಲೆಯ ಪಾಪ ಪರಿ
ರಾಮ ಯಾಕೆ ಯಾವುದೇ ಯಜ್ಞ ಮಾಡಲಿಲ್ಲ? ರಾ
ದೃಷ್ಟಿಯಲ್ಲಿ ನಿರುಪದ್ರವಿ ಶಂಭೂಕನಿಗಿಂತ ದುಷ್ಟ ರಾ
ಹೇಗೆ ಹೆಚ್ಚು ಪವಿತ್ರನಾದ?

ದ್ರೋಣಾಚಾರ್ಯನೆಂಬ ಬ್ರಾಹ್ಮಣನನ್ನು ಅರ್ಜು
ಕೊಂದದ್ದಕ್ಕೆ ನಂತರ ಪಾಂಡವರು ಸಹ ಅಶ್ವಮೇಧ
ಮಾಡುತ್ತಾರೆ. ಆದರೆ ಕುರುಕ್ಷೇತ್ರದಲ್ಲಿ ತಮ್ಮ ಸ್ವಂತ ಹಿ
ಕಿರಿಯ ಸಂಬಂಧಿಕರನ್ನು ಮತ್ತು ಲಕ್ಷಾಂತರ ಶೂದ್ರ
ಪಾಂಡವರು ಕೊಂದದ್ದಕ್ಕೆ ಅವರಿಗೆ ಯಾವ ದೋಷ
ತಗುಲಿಲ್ಲವೇ? ಕುರುಕ್ಷೇತ್ರ ಯುದ್ಧದ ತರುವಾಯ ಚಾ
ಎಂಬ ಋಷಿಯು ಧರ್ಮರಾಯನ ಜೂಜುಕೋ
ಬುದ್ಧಿಯೇ ಲಕ್ಷಾಂತರ ಜೀವಿಗಳ ಮರಣಕ್ಕೆ ನೇರ ಕಾ
ವಾದುದನ್ನು ನೆನಪಿಸಿದನು ಎಂದು ಕುಪಿತ
ಚಾರ್ವಾಕನನ್ನು ಜೀವಂತ ಸುಡಿಸಿದನು. ಋಷಿಯ
ಚಾರ್ವಾಕನ ಕೊಲೆಯಿಂದ ಧರ್ಮರಾಯನಿಗೆ
ಬ್ರಹ್ಮಹತ್ಯೆ ದೋಷ ತಗುಲಲಿಲ್ಲ?

ಪರಶುರಾಮ ಕೋಟ್ಯಾಂತರ ಮುಗ್ಧ ಕ್ಷತ್ರಿ
ಹೆಂಗಸರನ್ನು ಮಕ್ಕಳನ್ನು ಕೊಂದದ್ದಕ್ಕೆ ಅವನಿಗೆ
ಯಾವ ದೋಷವೂ ತಗುಲಲಿಲ್ಲ? ಇಂತಹ ಅ
ಭರಿತ ಅಜ್ಜಿಕಥೆಗಳನ್ನು ನಂಬುವ ಪೇಜಾವರರು ಸ
ಪೀಠ ಬೇರೆ ಏರಲಿರುವರಂತೆ! ಇಂತಹ ತರ್ಕವಿ
ಕಾಲ್ಪನಿಕ ಪುರಾಣ ಕಥೆಗಳಲ್ಲಿಯ ರಾಮ ಮತ್ತು
ಎಂಬ ಎರಡು ಶೂದ್ರ ಜಾತಿಯ ಪಾತ್ರಗಳನ್ನು ದೈವತ್ವಕ್ಕೆ
ಅವುಗಳ ಪೂಜೆಗೆ ಬ್ರಾಹ್ಮಣ ಮಠಗಳನ್ನು ಸ್ಥಾಪಿಸಿ ಅವ





ಪೂಜೆಯ ಅಧಿಕಾರವನ್ನು ಒಂದೇ ಮಠದಲ್ಲಿ ವಾಸಿಸುವ ಎರಡು ಬ್ರಾಹ್ಮಣ ಸ್ವಾಮಿಗಳ ನಡುವೆ ಕೇವಲ ಸಾಂಕೇತಿಕವಾಗಿ ಬದಲಿಸುವ ಪರ್ಯಾಯ ವಿಧಿಗೆ ಇಷ್ಟೊಂದು ಪ್ರಾಮುಖ್ಯತೆ ಬೇಕೆ?

ಉಡುಪಿ ಮಠದವರು ನೂರಾರು ವರ್ಷಗಳಿಂದ ಸಮಾಜಸೇವೆಗಾಗಿ ಒಂದೇ ಒಂದು ಪೈಸೆ ಖರ್ಚು ಮಾಡಿಲ್ಲ. ಹಾಗಿದ್ದರೂ ಇಂತಹ ಮಠದ ಉತ್ಸವಕ್ಕೆ ತೆರಿಗೆದಾರರ ಹಣದಲ್ಲಿ ಸರಕಾರವೇ ಅಧಿಕೃತ ರಾಯಭಾರ ಮಾಡುತ್ತಿರುವುದು ಆಶ್ಚರ್ಯ.

ವೈದಿಕ ಸ್ವಾಮೀಜಿಗಳು ತಮ್ಮ ಜಾತಿಯವರು ದೇವರಿಗಿಂತಲೂ ಮೇಲು ಎಂದು ತೋರಿಸಲು ಈಗಲೂ ಪುರಾಣಕತೆಗಳನ್ನು ಹೇಗೆ ತಿರುಚುತ್ತಾರೆ ಎಂಬುದಕ್ಕೆ ಇಲ್ಲಿದೆ ಇನ್ನೊಂದು ತಾಜಾ ಉದಾಹರಣೆ. ವಾಲ್ಮೀಕಿ ರಾಮಾಯಣದ ಪ್ರಕಾರ ವಿಶ್ವಾಮಿತ್ರನ ಆಣತಿಯಂತೆ ರಾಮನು ಕಲ್ಲಾಗಿದ್ದ ಅಹಲ್ಯೆಯ ಮೇಲೆ ತನ್ನ ಪಾದ ಊರಿದಾಗ ಅಹಲ್ಯೆ ಶಾಪ ಕಳೆದು ಜೀವಂತವಾಗುತ್ತಾಳೆ. ಆದರೆ ಈಗ ಪೇಜಾವರರ ಸಹಿತ ಎಲ್ಲಾ ವೈದಿಕರು ಈ ಮೂಲಕಥೆಯನ್ನು ತಿರುಚಿ ಅಹಲ್ಯೆ ಬ್ರಾಹ್ಮಣಳಾಗಿದ್ದರಿಂದ ಅವಳ ಮೇಲೆ ಕೆಳಜಾತಿಯ ಕ್ಷತ್ರಿಯ ರಾಮನು ಕಾಲು ಇಡುವುದು ಧರ್ಮಕ್ಕೆ ವಿರುದ್ಧವಾಗಿತ್ತು. ಹಾಗಾಗಿ ರಾಮನು ಅಹಲ್ಯೆಯ ಕಲ್ಲಿನ ಮೇಲೆ ತನ್ನ ಕಾಲು ಇಡದೇ ಕೇವಲ ಕೈಮಾತ್ರ ಇಟ್ಟು ಅವಳನ್ನು ಸಜೀವಗೊಳಿಸಿದನಂತೆ. ಕಾರಣ ಒಂದು ವೇಳೆ ರಾಮ ಆ ಕಲ್ಲಿನ ಮೇಲೆ ಕಾಲು ಇಟ್ಟಿದ್ದರೆ ಅವನಿಗೆ ಬ್ರಾಹ್ಮಣರನ್ನು ತುಳಿದ ಘೋರ ಪಾಪ ತಗುಲಿ ರಾಮನೂ ನರಕಕ್ಕೆ ಹೋಗಬೇಕಾಗುತ್ತಿತ್ತಂತೆ! ಹೀಗಿದೆ ಪುರಾಣದ ತಿರುಚಾಟ.

ಇತರ ಎಲ್ಲಾ ಧರ್ಮಗಳು ತತ್ವನೀತಿಗಳ ಅಡಿಪಾಯದ ಮೇಲೆ ನಿಂತಿದ್ದರೆ ಹಿಂದೂ ಧರ್ಮ ಮಾತ್ರ ಕೇವಲ ಅಜ್ಜಿ ಕಥೆಯ ಅಡಿಪಾಯದ ಮೇಲೆ ನಿಂತಿರುವುದು ನಿಜ ಎಂಬುದಕ್ಕೆ ಉಡುಪಿ ವೈಷ್ಣವರೇ ಸಾಕ್ಷಿ. ಇವರ ಪುರಾಣ ಕತೆಗಳೆಲ್ಲಾ ಕಾಲ್ಪನಿಕ ಅಜ್ಜಿ ಕತೆಗಳೆಂದು ಸಾಮಾನ್ಯ ಜನರಿಗೆ ಮನದಟ್ಟಾದಾಗ ಹಿಂದೂ ಧರ್ಮದ ಅವಸಾನ ಖಂಡಿತ.

-ಆರ್.ಬಿ.ಶೇಣಾವ, ಮಂಗಳೂರು

ಮೋದಿಯ ಭಕ್ತರೂ, ವಿದೇಶಾಂಗ ನೀತಿಯೂ

ಪ್ರಧಾನಿ ಮೋದಿ ಇತ್ತೀಚೆಗೆ ಕಾಬೂಲ್‌ನಿಂದ ಡೆಲ್ಲಿಗೆ ಬರುವಾಗ ಲಾಹೋರ್‌ನಲ್ಲಿ ಪಾಕಿಸ್ತಾನದ ಪ್ರಧಾನಿ ನವಾಜ್ ಶರೀಫರನ್ನು ಭೆಟ್ಟಿ ಆಗಿದ್ದನ್ನು ಬಿಜೆಪಿ ಮತ್ತು ಕೆಲ ಮಾಧ್ಯಮಗಳು ಅತೀ ರಂಜಿತವಾಗಿ ವರ್ಣಿಸುತ್ತಿವೆ. ಇತ್ತೀಚಿನ ದಿನಗಳವರೆಗೂ ಅಸಹನೆಯಿಂದ ಬಿಜೆಪಿಯ ಬಹುಸಂಖ್ಯಾತ ತುಷ್ಟೀಕರಣವನ್ನು ಒಪ್ಪಲಾರದವರು ಪಾಕಿಸ್ತಾನಕ್ಕೆ ಹೋಗಿ ಎನ್ನುತ್ತಿದ್ದವರು, ದಾವೂದ್, ಜುಲ್ಫಿಕರ್ ಲಕ್ವಿ, ಮೆಮೊನ್‌ರ ಕೃತ್ಯಗಳ ಕುರಿತಾಗಿ ಪ್ರಚಂಡ ಭಾಷಣ ಮಾಡುತಿದ್ದವರು ಈಗ ಹೊಸ ರಾಗ ಶುರು ಮಾಡಿದ್ದಾರೆ.

ರಾಜನೊಬ್ಬ ತನಗೆ ತಿಳಿದಂತೆ ನೆರೆ ರಾಷ್ಟ್ರದೊಂದಿಗೆ ಯುದ್ಧ-ಶಾಂತಿ ನಡೆಸುವ ಯುಗ ಮುಗಿದಿದೆ. ಅಣ್ವಸ್ತ್ರ ಹೊಂದಿರುವ, ಭಯೋತ್ಪಾದಕತೆಯಲ್ಲಿ ತೊಡಗಿಸಿಕೊಂಡಿರುವ, ಸಶಕ್ತ ಪ್ರಜಾಪ್ರಭುತ್ವವೇ ಇರದ ನೆರೆ ರಾಷ್ಟ್ರದೊಂದಿಗಿನ ವಿದೇಶನೀತಿಯನ್ನು ಈ ರೀತಿಯಾಗಿ ಅಪಕ್ವತೆಯಿಂದ, ಪ್ರಚಾರಪ್ರಿಯತೆಯಿಂದ ನಿಭಾಯಿಸಿರುವುದು ವಿಷಾದನೀಯ.

ಎಲ್ಲಕ್ಕಿಂತ ಹೆಚ್ಚಾಗಿ, ಪ್ರಧಾನಿಯ ಈ ಹೊಸ ನಾಟಕೀಯತೆಯಿಂದ ವಿಶ್ವ ಸಂಸ್ಥೆಯಲ್ಲಿ ಭಾರತಕ್ಕೆ ಆರನೇ ನಂಬರ್‌ನ ಸ್ಥಾನ ಸಿಕ್ಕು ಭಾರತ ಸೂಪರ್ ಪವರ್ ಆಗಲು ಸಹಾಯ ಆಗುವುದೆಂಬ ಸಮರ್ಥನೆಗಳು ನಗೆಗೇಡಿನ ಸಂಗತಿ. ವಾಜಪೇಯಿ ಅವರ ಆಡಳಿತ ಇದ್ದಾಗ ಈ ರೀತಿಯ ಸೂಪರ್‌ಪವರ್ ಭ್ರಮೆ ಯನ್ನು ಸೃಷ್ಟಿಸಲಾಗಿತ್ತು. ಸೂಪರ್ ಪವರ್ ಭ್ರಮೆಗಳಿಗಿಂತ, ಕೀಳು ಪ್ರಚಾರಪ್ರಿಯತೆಗಿಂತಲೂ, ಸಂವಿಧಾನದ ನಿಜ ಆಶಯಗಳ ನೆಲಗಟ್ಟಿನಲ್ಲಿ, ಬುದ್ಧ-ಬಸವರು ಬೋಧಿಸಿದ ಸಮಾನತೆ ಸಹಬಾಳ್ವೆಯ ಆಧಾರದಲ್ಲಿ ಭಾರತ ಸೂಪರ್ ನಾಗರಿಕತೆಯಾಗಬೇಕಿದೆ.

-ಡಾ. ಉದಯಕುಮಾರ್ ನಾಯಕ್, ಬೆಳಗಾವಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರಿಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಸುಳ್ಳು ಪ್ರಚಾರ ನನಗಿಷ್ಟವಿಲ್ಲ: ರಚಿತಾ ರಾಮ್

ಮೊದಲ ಸಿನಿಮಾದಲ್ಲೇ ಸ್ಟಾರ್ ಪಟ್ಟ ಗಿಟ್ಟಿಸಿಕೊಂಡ ಕೀರ್ತಿ ರಚಿತಾ ರಾಮ್ ಅವರದ್ದು. ಮೊದಲು ದರ್ಶನ್ ಬ್ಯಾನರ್‌ಗಷ್ಟೇ ಸೀಮಿತವಾಗಿದ್ದವರು, ಆನಂತರ ಅಲ್ಲಿಂದ ಆಚೆ ಬಂದು ಬೇರೆ ಸಿನಿಮಾಗಳಲ್ಲೂ ನಟಿಸಿದರು. ಈಗ ಅದೇ ಅವರಿಗೆ ಮುಳುವಾಗಿದೆ. ಈ ಕುರಿತು ವಿವಾದವೂ ಎದ್ದಿದೆ. ಈ ಕುರಿತು ರಚಿತಾ ಮಾತಾಡಿದ್ದು ಇಲ್ಲಿದೆ.

ದರ್ಶನ್ ನಟನೆಯ 'ಬುಲ್‌ಬುಲ್' ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಟ್ಟವರು ರಚಿತಾ ರಾಮ್. ಮೊದಲ ಸಿನಿಮಾದಲ್ಲೇ ರಚಿತಾಗೆ ಸ್ಟಾರ್ ಪಟ್ಟ ಸಿಕ್ಕಿತು. ಆನಂತರ ಪಾಪ್ಯುಲರ್ ನಟರ ಜತೆಯೇ ತೆರೆ ಹಂಚಿಕೊಂಡರು. ಈ ಮಧ್ಯೆ ವಿವಾದಕ್ಕೆ ಕಾರಣವಾದರು. ದರ್ಶನ್ ಜತೆ ನಟಿಸಿದ್ದರಿಂದ ಪುನೀತ್ ಅಭಿಮಾನಿಗಳು ಇವರ ಸಿನಿಮಾ ನೋಡುವುದಿಲ್ಲ ಅನ್ನುವ ಅರ್ಥದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಗುಲ್ಲೆಬ್ಬಿಸಲಾಗಿತ್ತು. ರಚಿತಾ ಜತೆ ನಟಿಸದಂತೆ ಪುನೀತ್‌ಗೂ ಅವರ ಅಭಿಮಾನಿಗಳು ಕೇಳಿಕೊಂಡರು. ಈ ಗಲಾಟೆ ಇಲ್ಲಿಗೆ ನಿಲ್ಲುವಂತೆ ಕಾಣುತ್ತಿಲ್ಲ. ಸಿನಿಮಾ ಪ್ರಚಾರಕ್ಕೋ ಅಥವಾ ಸ್ಟಾರ್‌ವಾರ್ ಸಮಸ್ಯೆಯಿಂದಾಗಿಯೋ ರಚಿತಾ ಮತ್ತೆ ಸುದ್ದಿಗೆ ಬಂದಿದ್ದಾರೆ. ಈ ಕುರಿತು ಇಲ್ಲಿ ರಚಿತಾ ಖಡಕ್ಕಾಗಿಯೇ ಮಾತಾಡಿದ್ದಾರೆ.

** ಮತ್ತೆ ಸಾಮಾಜಿಕ ಜಾಲತಾಣದಲ್ಲಿ ಸುದ್ದಿಗೆ ಬಂದಿದ್ದೀರಿ. 'ಚಕ್ರವ್ಯೂಹ'ದಲ್ಲಿ ನಟಿಸಿದ್ದೀರಿ ಅನ್ನುವ ಕಾರಣಕ್ಕೆ ಸದ್ದು ಮಾಡುತ್ತಿದ್ದೀರಿ. ಇದೆಲ್ಲ ಏನು?*

ನನಗೂ ಗೊತ್ತಾಗುತ್ತಿಲ್ಲ. ಎಲ್ಲ ಕಲಾವಿದರ ಬಗ್ಗೆ ನನಗೆ ಅಭಿಮಾನವಿದೆ. ನಾನು ಯಾರ ಗುಂಪಿನ ನಾಯಕಿಯೂ ಅಲ್ಲ ಅಂತ ಪದೇಪದೇ ಹೇಳುತ್ತಿದ್ದೇನೆ. ಆದರೂ ಯಾಕೆ ಆ ರೀತಿ ಅಭಿಮಾನಿಗಳು ಮಾತಾಡುತ್ತಾರೋ ಗೊತ್ತಿಲ್ಲ.

** ಇದು ಸಿನಿಮಾ ಪ್ರಚಾರಕ್ಕಾಗಿ ನಡೆಯುತ್ತಿರುವ ವಿವಾದ ಅನ್ನುವ ಮಾತಿದೆ. ಇದಕ್ಕೆ ನೀವು ಏನು ಹೇಳುತ್ತೀರಿ?*

ಇದನ್ನು ನಾನು ವಿವಾದ ಅಂತ ಕರೆಯುವುದೇ ಇಲ್ಲ. ಕೆಲವರು ಫೇಸ್‌ಬುಕ್‌ನಲ್ಲಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ. ಅದು ಅವರ ವೈಯಕ್ತಿಕ ಅಭಿಪ್ರಾಯ. ಅವರ ಭಾವನೆಯನ್ನು ನಾನೂ ಗೌರವಿಸುತ್ತೇನೆ. ಹಾಗಂತ ನಾನು ಇದರ ಭಾಗ ಆಗಲಾರೆ. ಕಲಾವಿದೆಯಾಗಿ ನನ್ನ ಕೆಲಸ ಮಾಡುತ್ತಲೇ ಇರುತ್ತೇನೆ. ಇದು ಖಂಡಿತಾ ಪ್ರಚಾರಕ್ಕೆ ಆಗುವಂಥದ್ದು ಅಲ್ಲ. ನನಗೆ ಅಂತಹ ಪ್ರಚಾರವೂ ಬೇಕಿಲ್ಲ.

** ದರ್ಶನ್ ಗುಂಪಿನವರು ಅಂತ ಯಾಕೆ ಗುರುತಿಸಿಕೊಂಡಿದ್ದೀರಿ?*

ಪದೇ ಪದೇ ನಾನು ಹೇಳುತ್ತಲೇ ಬಂದಿದ್ದೇನೆ. ನಾನು ಯಾವುದೇ ಗುಂಪಿಗೆ ಸೇರಿದವಳಲ್ಲ. ಯಾಕೆ ಆ ರೀತಿ ಬಿಂಬಿಸುತ್ತಿದ್ದಾರೋ ಗೊತ್ತಿಲ್ಲ. ನಾನು ಕೇವಲ ನಟಿ. ನನ್ನ ಕೆಲಸವನ್ನು ನಾನು ಅಚ್ಚುಕಟ್ಟಾಗಿ ಮಾಡುತ್ತಿದ್ದೇನೆ. ಇನ್ನೊಂದು ಸಲ ಕೇಳಿಕೊಳ್ಳುತ್ತಿದ್ದೇನೆ. ನನ್ನನ್ನು ಕಲಾವಿದೆಯಂತೆ ಕಾಣಿರಿ. ಯಾರ ಗುಂಪಿಗೂ ಸೇರಿಸಬೇಡಿ. ಕನ್ನಡದ ನಾಯಕಿಯರನ್ನು ಉಳಿಸಿಕೊಳ್ಳಬೇಕಾದವರು ನೀವೆ.

** 'ರಣವಿಕ್ರಮ' ಸಿನಿಮಾದಲ್ಲಿ ಪುನೀತ್ ಜತೆ ನಟಿಸುವುದಿಲ್ಲವೆಂದು ಏಕೆ ಹೇಳಿದಿರಿ?*


ಸಿನಿಮಾದಲ್ಲಿ ನಟಿಸಲ್ಲ ಅಂತ ಎಲ್ಲಿಯೂ ಹೇಳಿಲ್ಲ. ಆ ಸಮಯದಲ್ಲಿ ನಾನು ಬೇರೆ ಸಿನಿಮಾದಲ್ಲಿ ನಟಿಸುತ್ತಿದ್ದೆ. ಡೇಟ್ಸ್ ಪ್ರಾಬ್ಲಮ್ ಆಗುತ್ತಿತ್ತು. ಯಾರಿಗೂ ತೊಂದರೆ ಕೊಡಬಾರದು ಅನ್ನುವ ಉದ್ದೇಶ ನನ್ನದಾಗಿತ್ತು. ಹಾಗಾಗಿ ನಾನು ಆ ಸಮಸ್ಯೆಯನ್ನು ಹೇಳಿಕೊಂಡೆ. ಸಿನಿಮಾ ತಂಡದವರಿಗೂ ಅದು ಅರ್ಥ ಆಯಿತು. ಅದಕ್ಕಾಗಿ ಬಿಟ್ಟೆ. ನಾನು ಒಪ್ಪಿಕೊಂಡು ಡೇಟ್ ಸಮಸ್ಯೆ ಆಗಿದ್ದರೆ ಅದು ಮತ್ತೊಂದು ರೀತಿಯಲ್ಲಿ ವಿವಾದ ಆಗುತ್ತಿತ್ತು.

** ಸದ್ಯ ಸಾಮಾಜಿಕ ಜಾಲತಾಣದಲ್ಲಿ ಎದ್ದಿರುವ ಸಮಸ್ಯೆಯ ಬಗ್ಗೆ ಏನು ಹೇಳುತ್ತೀರಿ?*

ಭಾವನೆಗಳನ್ನು ಹಂಚಿಕೊಳ್ಳಿ. ಆದರೆ ಯಾರಿಗೂ ಹರ್ಟ್ ಮಾಡಬೇಡಿ. ಕೆಲವರು ಬೇಕು ಅಂತಾನೇ ಇಂತಹ ಕೆಲಸ ಮಾಡುತ್ತಾರೆ. ನಾನು ತಲೆಕೆಡಿಸಿಕೊಳ್ಳುವುದಿಲ್ಲ. ನೆಗ್ಲೆಟ್ ಮಾಡುತ್ತೇನೆ. ಅವರ ಮಾತಿಗೆ ಪ್ರತಿಕ್ರಿಯೆ ಕೊಟ್ಟರೆ ಅವರು ಮತ್ತೊಂದು ಮಾತಾಡುತ್ತಾರೆ. ಎಲ್ಲರೂ ಕನ್ನಡ ಸಿನಿಮಾಗಳನ್ನು ನೋಡಿರಿ. ಕನ್ನಡದ ಕಲಾವಿದರನ್ನು ಪ್ರೋತ್ಸಾಹಿಸಿ ಅನ್ನುತ್ತೇನೆ.

** ನಾಯಕಿಯರು ಮಾತ್ರ ಟಾರ್ಗೆಟ್ ಆಗುತ್ತಿದ್ದಾರೆ ಅಂತ ಅನಿಸುತ್ತಿಲ್ಲವಾ?*

ಹಾಗಂತ ಹೇಳುವುದು ಕಷ್ಟ. ವಿವಾದಕ್ಕೆ ಹೆಣ್ಣು ಗಂಡು ಅಂತೇನೂ ಇಲ್ಲ. ಕೆಲವೊಂದು ಸಲ ನಮ್ಮಿಂದಲೂ ತಪ್ಪಾಗಿರಬಹುದು. ಆದರೆ ಹೆಚ್ಚು ಸುದ್ದಿ ಆಗುವುದು ನಾಯಕಿಯೇ. ಆನಂತರ ತಪ್ಪು ಒಪ್ಪುಗಳು ಗೊತ್ತಾಗುತ್ತವೆ. ಎಲ್ಲರೂ ಸುಮ್ಮನಾಗುತ್ತಾರೆ. ಮೊದಲೇ ಅದನ್ನು ಅರ್ಥ ಮಾಡಿಕೊಳ್ಳಬೇಕು.




** ಈ ರೀತಿ ಸಮಸ್ಯೆಯಲ್ಲಿ ಸಿಲುಕಿಕೊಂಡಾಗ ಕಲಾವಿದರ ಸಂಘ ಮಧ್ಯೆ ಪ್ರವೇಶ ಮಾಡುವುದಿಲ್ಲವಾ?*

ವಿವಾದಗಳು, ಮನಸ್ತಾಪಗಳು ಬಂದಾಗ ಖಂಡಿತಾ ಅವರು ಬಂದಿದ್ದಾರೆ. ಧೈರ್ಯ ತುಂಬಿದ್ದಾರೆ. ಸೀರಿಯಸ್ ವಿಷಯ ಅಲ್ಲದಿದ್ದಾಗ ಅವರಾದರೂ ಏನು ಮಾಡುತ್ತಾರೆ? ■

ಕರಾವಳಿಯ ಪೊಲೀಸ್ ಇಲಾಖೆಯನ್ನು ಒಳಗಿನಿಂದ ಸ್ವಚ್ಛಗೊಳಿಸಬೇಕಿದೆ

ಪ್ರತಿ ವರ್ಷದಂತೆ ಈ ವರ್ಷವೂ ಡಿಸೆಂಬರ್ 1 ರಿಂದ 31 ರವರೆಗೆ ನಮ್ಮ ರಾಜ್ಯದಲ್ಲಿ ಪೊಲೀಸ್ ಇಲಾಖೆ ಅಪರಾಧ ತಡೆ ಮಾಸ ಆಚರಿಸುತ್ತಿದ್ದರೂ ನಮ್ಮ ಕರಾವಳಿಯಲ್ಲಿ ಪೊಲೀಸರ ಎದುರಿನಲ್ಲಿಯೇ ಸಂಘ ಪರಿವಾರದವರು ಗೂಂಡಾಗಿರಿ ನಡೆಸಿ 'ದಿಲ್ವಾಲೆ' ಹಿಂದಿ ಚಿತ್ರದ ಪ್ರದರ್ಶನ ತಡೆದಾಗ ಪೊಲೀಸರು ಮಾತ್ರ ಅಪರಾಧ ತಡೆಯಲಿಲ್ಲ. ಹಾಗಾದರೆ ಪೊಲೀಸರು ಸ್ವಯಂಪ್ರೇರಿತರಾಗಿ ಅಪರಾಧ ತಡೆದು ಸಂತ್ರಸ್ತರಿಗೆ ರಕ್ಷಣೆ ಕೊಡಲು ಕಾನೂನಿನಲ್ಲಿ ಅಸ್ಪದವಿಲ್ಲವೇ? ಪೊಲೀಸರ ಈ ವರ್ತನೆಯಿಂದ ಅಪರಾಧ ತಡೆ ಮಾಸ ಆಚರಣೆ ಅರ್ಥ ಕಳೆದುಕೊಂಡಿತು.



ವಿದ್ಯಾ ದಿನಕರ್

ಇನ್ನೊಂದು ಮುಖ್ಯ ಅಂಶವೆಂದರೆ ಮಂಗಳೂರಿನ ಎಲ್ಲ ದೊಡ್ಡ ಮಾಲ್‌ಗಳಲ್ಲಿ ಮತ್ತು ಥಿಯೇಟರುಗಳಲ್ಲಿ ಕೆಲಸ ಮಾಡುವ ನೌಕರರೆಲ್ಲಾ ಹಿಂದೂತ್ವ ಸಂಘಟನೆಗಳು ಅನಧಿಕೃತವಾಗಿ ನಡೆಸುವ ಪ್ಲೇಸ್ಮೆಂಟ್ ಏಜನ್ಸಿಗಳ ಮೂಲಕ ಕೆಲಸ ಪಡೆದವರು. ಪ್ರತಿ ತಿಂಗಳು ಈ ಎಲ್ಲಾ ನೌಕರರು ಹಿಂದೂತ್ವ ಏಜನ್ಸಿಗಳಿಗೆ ತಮ್ಮ ಸಂಬಳದ ನಿರ್ದಿಷ್ಟ ಭಾಗ ಕಮಿಷನ್ ಆಗಿ ಕೊಡಲೇಬೇಕಾಗುತ್ತದೆ. ಈ ಹಿಂದೂತ್ವ ಸಂಘಟನೆಗಳು ಸೆಕ್ಯುರಿಟಿ ಏಜನ್ಸಿಗಳನ್ನು ಸಹ ನಡೆಸುತ್ತಿದ್ದು ಎಲ್ಲಾ ಮಾಲ್‌ಗಳಲ್ಲಿ ಹಾಗೂ ದೊಡ್ಡ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಬಿಹಾರ ಮತ್ತು ನೇಪಾಳ ಮೂಲದ ಗಾರ್ಡುಗಳೆಲ್ಲಾ ನೇಮಕವಾಗಿರುವುದು ಅಚ್ಚ ಕನ್ನಡಿಗರ ಹಿಂದೂತ್ವ ಸೆಕ್ಯುರಿಟಿ ಏಜನ್ಸಿಗಳಿಂದಲೇ. ನಿಜವಾಗಿ ಈ ಕನ್ನಡಿಗರ ಏಜನ್ಸಿಗಳಿಗೆ ಉತ್ತರ ಭಾರತೀಯ ಹಿಂದಿ ಅಭಿಮಾನ ಹುಟ್ಟಲು ಮೂಲಕಾರಣ ಈ ಬಡ ಉತ್ತರ ಭಾರತೀಯರು ಮತ್ತು ನೇಪಾಳಿಗಳು ತಿಂಗಳಿಗೆ ಕೇವಲ ನಾಲ್ಕು ಸಾವಿರ ಸಂಬಳ ಪಡೆದು ಎಂಟು ಸಾವಿರದ ರಸೀದಿಗೆ ಸಹಿ ಮಾಡುತ್ತಾರೆ. ಅಂದರೆ ಕೇಸರಿ ಏಜನ್ಸಿಗೆ ಪ್ರತಿಯೊಬ್ಬ ಹಿಂದಿವಾಲ ಗಾರ್ಡ್‌ನಿಂದ ಪ್ರತಿ ತಿಂಗಳು 50% ಕಮಿಷನ್ ಸಿಕ್ಕ ಹಾಗಾಯಿತು. ಇದುವೇ ಹಿಂದೂತ್ವ ಸಂಘಟನೆಗಳ ಹಿಂದೂ-ಹಿಂದಿ-ಹಿಂದುಸ್ತಾನ್ ಅಭಿಮಾನದ ಒಳಗುಟ್ಟು.

ಹೀಗೆ ಎಲ್ಲಾ ಮಾಲ್‌ಗಳಲ್ಲಿ ಮತ್ತು ಥಿಯೇಟರುಗಳಲ್ಲಿ ಇಂಚುಇಂಚಿಗೂ ಹಿಂದೂತ್ವ ಏಜನ್ಸಿಗಳಿಂದಲೇ ನೇಮಕವಾಗಿರುವ ಪಡ್ಡೆಗಳು ನೌಕರರಾಗಿ ವಿರಾಜಿಸಿದ್ದಾರೆ. ಹಾಗಾಗಿ 'ದಿಲ್ವಾಲೆ' ಚಿತ್ರ ಪ್ರದರ್ಶನ ನಿಲ್ಲಿಸಿದ ಕೇಸರಿ ಗೂಂಡಾಗಳ ವಿರುದ್ಧ ಥಿಯೇಟರ್ ಮಾಲೀಕರು ಪೊಲೀಸರಲ್ಲಿ ಲಿಖಿತ ದೂರು ದಾಖಲಿಸಿ ತಮ್ಮಲ್ಲಿ ಕೆಲಸ ಮಾಡುತ್ತಿರುವ ನೌಕರರ ವೈರತ್ವ ಗಳಿಸಿದರೆ ಮುಂದೆ ಥಿಯೇಟರ್ ನಡೆಸಲು ಹೇಗೆ ಸಾಧ್ಯ? ಇದೀ ವರ್ಷ ಅವೇ ಹಿಂದೂತ್ವ ಏಜನ್ಸಿಯಿಂದ ಬಂದ ನೌಕರರೊಂದಿಗೆ ಕೆಲಸ ಮಾಡುವ ಅನಿವಾರ್ಯತೆ ಥಿಯೇಟರ್ ಮಾಲಿಕರಿಗೆ ಇದೆ ತಾನೇ.

ಮಾಲ್‌ಗಳಿಗೆ ಅಥವಾ ಥಿಯೇಟರುಗಳಿಗೆ ಅನ್ಯ ಧರ್ಮೀಯರ ಜೋಡಿ ಬಂದಾಗ ಕೇಸರಿ ಸಂಘಟನೆಗಳಿಗೆ ತಕ್ಷಣ ಫೋನ್‌ನಲ್ಲಿ ಸುದ್ದಿ ಮುಟ್ಟಿಸಿ ಅನೈತಿಕ ರೌಡಿಗಿರಿಗೆ ಕೇಸರಿ ಗೂಂಡಾಗಳನ್ನು ಕರೆಯುವವರು ಇವೇ ನೌಕರರು. ಮೇಲಾಗಿ ಮಂಗಳೂರಿನ ಪೊಲೀಸ್ ಇಲಾಖೆ ಸಹ ಸಂಘಿ ಏಜಂಟುಗಳಿಂದಲೇ ತುಂಬಿರುವುದು 'ಕೋಬ್ರಾಪೋಸ್ಟ್' ಕುಟುಕಿನಲ್ಲಿ ಬಹಿರಂಗಗೊಂಡಿದೆ. ಹಾಗಾಗಿ ಯಾವ ಹುತ್ತದಲ್ಲಿ ಯಾವ ಹಾವಿದೆ ಎಂದು ಗೊತ್ತಿಲ್ಲದಿರುವಾಗ ಮಾಲ್‌ನಲ್ಲಿಯ ಥಿಯೇಟರ್‌ನವರಿಗೆ ಯಾರ ವಿರುದ್ಧವೂ ತಾವಾಗಿಯೇ ಲಿಖಿತ ಪೊಲೀಸ್ ದೂರು ದಾಖಲಿಸಿ ಜನರನ್ನು ಎದುರು ಹಾಕಿಕೊಂಡು ವ್ಯವಹಾರ ಮಾಡುವುದು ಕಠಿಣವಾಗುತ್ತದೆ.

ಇದನ್ನಾದರೂ ಅರ್ಥ ಮಾಡಿಕೊಂಡು ಪೊಲೀಸರು 'ದಿಲ್ವಾಲೆ' ಚಿತ್ರದ ಥಿಯೇಟರ್ ಮಾಲಕರ ಲಿಖಿತ ದೂರಿಗೆ ಕಾಯದೇ ಸ್ವಯಂಪ್ರೇರಿತರಾಗಿ ಕೇಸರಿ ಗೂಂಡಾಗಳ ವಿರುದ್ಧ ಕೇಸ್ ದಾಖಲಿಸಿ ಕ್ರಮ ಕೈಗೊಳ್ಳಬೇಕಿತ್ತು, ಆದರೂ ಅವರು ನಿಷ್ಕ್ರಿಯರಾಗಿದ್ದರು. ಕೊನೆಗೆ ವಿದ್ಯಾ ದಿನಕರ್ ಎಂಬ ಸಾಮಾಜಿಕ ಕಾರ್ಯಕರ್ತೆ ಲಿಖಿತ ದೂರು ದಾಖಲಿಸಿದ ಮೇಲಷ್ಟೇ ಪೊಲೀಸರು ಸಕ್ರಿಯರಾಗಿದ್ದು. ಮಂಗಳೂರಿನ ಬಜರಂಗಿ ಮುಖಂಡ ಶರಣ್ ಪಂಪೆಲ್ ಮುಂದುವರಿದ ಕೊಟ್ಟಾರಿ ಜಾತಿಯವನಾಗಿದ್ದರೂ ದಳದ ಹೆಚ್ಚಿನ ಕಾಲಾಳುಗಳು ಹಿಂದುಳಿದ ಬಿಲ್ಲವರಾಗಿದ್ದಾರೆ. ಆದರೆ ಈಗ ತಮ್ಮನ್ನು ಬಹಿರಂಗವಾಗಿ ವಿರೋಧಿಸುತ್ತಿರುವ ಸಾಮಾಜಿಕ ಕಾರ್ಯಕರ್ತೆ ವಿದ್ಯಾ ದಿನಕರ್ ಬಿಲ್ಲವರಾಗಿರುವುದು ಬಜರಂಗಿಗಳಿಗೆ ಮತ್ತು ಖಾಕಿಯಡಿ ಕಾವಿ ಉಟ್ಟಿರುವ ಪೊಲೀಸರಿಗೆ ಖಾರ ತಿಕ್ಕಿದಂತೆ ಆಗಿದೆ. ಹಾಗಾಗಿ ಕರಾವಳಿಯ ಪೊಲೀಸ್ ಇಲಾಖೆಯನ್ನು ಮೊಟ್ಟಮೊದಲು ಒಳಗಿನಿಂದ ಸ್ವಚ್ಛಗೊಳಿಸುವ ಅವಶ್ಯಕತೆಯಿದೆ.

-ವಿರುಪ್ಪ ಬಿ.ಎನ್. ಮಂಗಳೂರು

ರೀಮೇಕ್ ಹಿಂದೆ ಬಿದ್ದ ಪುನೀತ್



ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ರೀಮೇಕ್ ಸಿನಿಮಾಗಳ ಹಿಂದೆ ಬಿದ್ದಿದ್ದಾರೆ. 'ಹುಡುಗ್ರು', 'ಯಾರೇ ಕೂಗಾಡಲಿ' ಹೀಗೆ ಸಾಲು ಸಾಲು ರೀಮೇಕ್ ಚಿತ್ರಗಳನ್ನು ಮಾಡಿರುವ ಇವರು, ಈಗ ಅಜಿತ್ ನಟನೆಯ 'ವೇದಾಲಮ್' ಸಿನಿಮಾದ ಕನ್ನಡದ ಅವತರಣಿಕೆಯಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ. ಈ ಚಿತ್ರವನ್ನು 'ವಿಕ್ಟರಿ' ಖ್ಯಾತಿಯ ನಂದಕಿಶೋರ್ ನಿರ್ದೇಶಿಸಲಿದ್ದಾರೆ.

'ವೇದಾಲಮ್' ತಮಿಳಿನ ಸೂಪರ್ ಹಿಟ್ ಚಿತ್ರ. ಮೂವತ್ತು ಕೋಟಿಯಲ್ಲಿ ನಿರ್ಮಾಣವಾದ ಈ ಚಿತ್ರವು ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿಯಾಗಿ ಗೆದ್ದಿತ್ತು, ನಿರ್ಮಾಪಕರಿಗೆ ನೂರು ಕೋಟಿ ತಂದುಕೊಟ್ಟಿತ್ತು. ಹೀಗಾಗಿ ಈ ಚಿತ್ರವನ್ನು ಪುನೀತ್ ಒಪ್ಪಿಕೊಂಡಿದ್ದಾರೆ ಎನ್ನಲಾಗುತ್ತಿದೆ. ತಮಿಳು ಮತ್ತು ತೆಲುಗಿನ ಖ್ಯಾತ ನಿರ್ಮಾಪಕ ರತ್ನಂ ಈ ಸಿನಿಮಾಗೆ ಹಣ ಹೂಡುತ್ತಿದ್ದಾರೆ. 'ವೇದಾಲಮ್'ನಲ್ಲೂ ಇವರು ಹಣ ಹೂಡಿದ್ದರು. ಹೀಗಾಗಿ ಕನ್ನಡ ಸಿನಿಮಾ ಮಾಡಲು ಮುಂದೆ ಬಂದಿದ್ದಾರೆ. ಅಂದುಕೊಂಡಂತೆ ನಡೆದರೆ, ಈ ಸಿನಿಮಾ ಸೆಟ್ಟೇರಲು ಇನ್ನೂ ನಾಲ್ಕೈದು ತಿಂಗಳು ಬೇಕು. ಈಗಿನಿಂದಲೇ ಚಿತ್ರವು ಸುದ್ದಿಗೆ ಬಂದಿದೆ.

ನಾಯಕನ ಪಾತ್ರ ಮಾಡಲು ಪುನೀತ್ ಒಪ್ಪಿಗೆ ಸೂಚಿಸಿದರೂ, ನಿರ್ದೇಶಕರು ಮಾತ್ರ ಈ ಸುದ್ದಿಯನ್ನು ಬಿಟ್ಟುಕೊಡುತ್ತಿಲ್ಲ. "ಸದ್ಯ ಮಾತುಕತೆ ಹಂತದಲ್ಲಿದೆ. ಎಲ್ಲವೂ ಪಕ್ಕಾ ಆದ ನಂತರ ಹೇಳುತ್ತೇನೆ" ಅನ್ನುವುದು ನಂದಕಿಶೋರ್ ಮಾತು. ಏನೇ ಆಗಲಿ ಪುನೀತ್ ಮಾತ್ರ ರೀಮೇಕ್ ಚಿತ್ರಗಳ ಹಿಂದೆ ಬಿದ್ದಿರುವುದಂತೂ ಸುಳ್ಳಲ್ಲ.

ಚೌಕಬಾರ ಆಟದಲ್ಲಿ ಅಚ್ಯುತ್

ದಿನವೊಂದಕ್ಕೆ ಲಕ್ಷಾಂತರ ರೂಪಾಯಿ ಸಂಭಾವನೆ ಪಡೆಯುವ ಅಚ್ಯುತ್ ಕುಮಾರ್, ಕತೆ ಹಿಡಿಸಿದರೆ ಉಚಿತವಾಗಿಯೂ ನಟಿಸಬಲ್ಲರು ಅನ್ನುವುದಕ್ಕೆ ಈ ಕಿರುಚಿತ್ರ ಸಾಕ್ಷಿ. ನೀನಾಸಂ ಪದವೀಧರ ರಾಘು ಶಿವಮೊಗ್ಗ 'ಚೌಕಬಾರ' ಎಂಬ ಕಿರುಚಿತ್ರವನ್ನು ನಿರ್ದೇಶಿಸಿದ್ದಾರೆ. ಈ ಚಿತ್ರದಲ್ಲಿ ಅಚ್ಯುತ್ ಕುಮಾರ್ ಸಂಭಾವನೆ ತೆಗೆದುಕೊಳ್ಳದೇ ನಟಿಸಿದ್ದಾರೆ. ಕಾರಣ, 'ಚೌಕಬಾರ' ಕತೆ ಮತ್ತು ನಿರ್ದೇಶಕ ರಾಘು ಪ್ರತಿಭೆ ಕಂಡು.



ಮನಸಿನ ತುಮುಲಗಳ ಸುತ್ತ ಹೆಣೆದಿರುವ ಈ ಕತೆಯಲ್ಲಿ ಹಲವು ವಿಶೇಷತೆಗಳಿವೆ. ಅಲ್ಲದೇ ಹೆಸರಾಂತ ನಟರೇ ಈ ಕಿರುಚಿತ್ರಕ್ಕಾಗಿ ಬಣ್ಣ ಹಚ್ಚಿದ್ದಾರೆ. ಅಚ್ಯುತ್ ಅವರದ್ದು ವಿಭಿನ್ನ ಪಾತ್ರ. ಅಲ್ಲದೇ ತಾರಾಗಣದಲ್ಲಿ ಶರತ್ ಲೋಹಿತಾಶ್ವ, ಅಶ್ವಿನಿ ಗೌಡ, ನಂದಿನಿ, ಮಂಜುನಾಥ್ ಹೆಗಡೆ, ಕಿರಣ್ ನಾಯಕ ಮೊದಲಾದವರು ಇದ್ದಾರೆ. 'ಮದರಂಗಿ', 'ಪ್ರೀತಿ ಪ್ರೇಮ' ಸೇರಿದಂತೆ ಹಲವು ಧಾರಾವಾಹಿಗಳನ್ನು ನಿರ್ದೇಶಿಸಿರುವ ರಾಘು ಶಿವಮೊಗ್ಗ, ಇದೇ ಮೊದಲ ಬಾರಿಗೆ ಇಂಥದ್ದೊಂದು ಪ್ರಯತ್ನಕ್ಕೆ ಕೈಹಾಕಿದ್ದಾರೆ. ಹಲವರ ಬೆಂಬಲವೂ ಇವರಿಗೆ ಸಿಕ್ಕಿದೆ.

ಜನವರಿ 13ಕ್ಕೆ ಈ ಕಿರುಚಿತ್ರವನ್ನು ಥಿಯೇಟರ್‌ಗೆ ತರುತ್ತಿದ್ದಾರೆ ನಿರ್ದೇಶಕರು. ಇಪ್ಪತ್ತೆರಡು ನಿಮಿಷದ ಈ ಕಿರುಚಿತ್ರವು ಇಟಿಎಮ್ ಮಾಲ್‌ಗಳಲ್ಲಿ ಬಿಡುಗಡೆ ಆಗುತ್ತಿದೆ. ಮತ್ತೊಂದು ವಿಶೇಷತೆ ಅಂದರೆ, ಈ ಕಿರುಚಿತ್ರವು ನೀನಾಸಂ ಸತೀಶ್ ಬ್ಯಾನರ್‌ನಲ್ಲಿ ನಿರ್ಮಾಣ ಆಗಿದೆ.



ಯಶ್‌ಗಾಗಿ 3 ಸಿನಿಮಾ ಬಿಟ್ಟ ರಾಧಿಕಾ

ಯಶ್ ಮತ್ತು ರಾಧಿಕಾ ಪಂಡಿತ್ ಪ್ರೇಮಿಗಳು ಅನ್ನುವ ಮಾತು ಆಗಾಗ್ಗೆ ಸಿನಿಮಾರಂಗದಲ್ಲಿ ಕೇಳಿಬರುತ್ತಲೇ ಇರುತ್ತದೆ. ಅನುಮಾನ ಬರುವ ರೀತಿಯಲ್ಲೇ ಅವರಿಬ್ಬರೂ ನಡೆದುಕೊಳ್ಳುತ್ತಿದ್ದಾರೆ. ಇದಕ್ಕೆ ಇನ್ನಷ್ಟು ಪುಷ್ಟಿಕೊಡುವಂತಹ ಸುದ್ದಿಯೊಂದು ಸದ್ಯ ಗಾಂಧಿನಗರದಲ್ಲಿ ಗಿರಕಿ ಹೊಡೆಯುತ್ತಿದೆ. ಯಶ್‌ಗಾಗಿ ರಾಧಿಕಾ ಮೂರು ಸಿನಿಮಾಗಳಿಂದ ದೂರ ಉಳಿದಿದ್ದಾರೆ. ಅವೆಲ್ಲ ಸ್ಟಾರ್ ನಟರ ಚಿತ್ರಗಳು ಅನ್ನುವುದು ವಿಶೇಷ.

ಮೂರ್ನಾಲ್ಕು ತಿಂಗಳಿಂದ ರಾಧಿಕಾ ಖಾಲಿ ಕೂತಿದ್ದಾರೆ. ಅವರ ಕೈಯಲ್ಲಿರುವುದು ಪುನೀತ್ ನಟನೆಯ 'ದೊಡ್ಮನೆ ಹುಡುಗ' ಸಿನಿಮಾ ಮಾತ್ರ. ಆದರೂ ಅವರು ಹೊಸ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಿಲ್ಲ. ಉಪೇಂದ್ರನಂತಹ ರಿಯಲ್‌ಸ್ಟಾರ್ ಚಿತ್ರವನ್ನೂ ಅವರು ನಿರಾಕರಿಸಿದ್ದಾರೆ. ಕಾರಣ, ಯಶ್ ಸಿನಿಮಾ ಎನ್ನಲಾಗುತ್ತಿದೆ.

ಯಶ್ ಅವರ ಹೊಸ ಸಿನಿಮಾ ಸದ್ಯದಲ್ಲೇ ಸೆಟ್ಟೇರಲಿದೆ. ಈ ಸಿನಿಮಾಗೆ ರಾಧಿಕಾ ನಾಯಕಿ. ಶೂಟಿಂಗ್ ಡೇಟ್ ಎರಡು ತಿಂಗಳಾದರೂ ನಿಕ್ಕಿ ಆಗದ ಕಾರಣ, ರಾಧಿಕಾ ಯಾವುದೇ ಸಿನಿಮಾ ಒಪ್ಪಿಕೊಂಡಿಲ್ಲ. ಡೇಟ್ ಕ್ಲಾಶ್ ಆಗುವುದು ಕೂಡ ಅವರಿಗೆ ಬೇಕಿಲ್ಲವಂತೆ.

ವಿವಾದವಿಲ್ಲದೇ ತಮ್ಮ ಕೆರಿಯರ್ ಅನ್ನು ರೂಪಿಸಿಕೊಂಡ ನಟಿ ರಾಧಿಕಾ. ದರ್ಶನ್, ಸುದೀಪ್ ಹೊರತಾಗಿ ಬಹುತೇಕ ಸ್ಟಾರ್ ನಟರ ಜತೆ ತೆರೆ ಹಂಚಿಕೊಂಡ ಹೆಗ್ಗಳಿಕೆ ಇವರದ್ದು. ಇದನ್ನೇ ಮುಂದುವರೆಸಿಕೊಂಡು ಹೋಗುತ್ತಾರಂತೆ. ಹೀಗಾಗಿ ಕಾದು ಸಿನಿಮಾ ಮಾಡುತ್ತಾರಂತೆ.

ಹಾಡೋದನ್ನ ಬಿಡಲ್ಲ ಅಂದ ವೆಂಕಟ್



ವೆಂಕಟ್ ಹಾಡಿರುವ ಹಾಡು ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಸದ್ದು ಮಾಡುತ್ತಿದೆ. ಅದರಲ್ಲೂ 'ಪರಪಂಚ' ಚಿತ್ರಕ್ಕಾಗಿ ಹಾಡಿರುವ "ಹುಟ್ಟಿದ ಊರನು ಬಿಟ್ಟು ಬಂದಮೇಲೆ" ಗೀತೆಯಂತೂ ಮೂರು ಲಕ್ಷಕ್ಕೂ ಹೆಚ್ಚು ಲೈಕ್ಸ್ ಪಡೆದಿದೆ. ಆದರೂ ಸಂಗೀತ ವಲಯದಲ್ಲಿ ಅಪಸ್ವರ ಕೇಳಿ ಬರುತ್ತಿದೆ. ರಾಗ ತಾಳ ಜ್ಞಾನವೂ ಗೊತ್ತಿಲ್ಲದ ವೆಂಕಟ್‌ನಿಂದ ಸಿನಿಮಾ ಸಂಗೀತಕ್ಕೆ ಅಪಮಾನ ಆಗುತ್ತಿದೆ. ಹೊರ ರಾಜ್ಯದ ಸಂಗೀತ ಪ್ರೇಮಿಗಳು, ಕನ್ನಡ ಸಿನಿಮಾದಲ್ಲಿ ವೆಂಕಟ್ ಹಾಡಿದ ಗೀತೆಗಳನ್ನು ಕೇಳಿದರೆ ಏನಂದುಕೊಂಡಾರು? ಅನ್ನುವ ಚರ್ಚೆಯೂ ಶುರುವಾಗಿದೆ.

ಈ ನಡುವೆ ವೆಂಕಟ್ ಹಲವು ಚಿತ್ರಗಳಿಗೆ ಹಾಡುವುದಕ್ಕೆ ರೆಡಿ ಆಗಿದ್ದಾರೆ. ತಮ್ಮದೇ ನಿರ್ದೇಶನದ 'ಪೋರ್ಕಿ ಹುಚ್ಚ ವೆಂಕಟ್' ಸಿನಿಮಾದಲ್ಲೂ ಹಾಡಿದ್ದಾರೆ. ಅಲ್ಲದೇ ಕಿರುಚಿತ್ರಗಳಿಗೂ ಹಾಡಿ ಮುಗಿಸಿದ್ದಾರೆ. ಹಲವು ಸಂಗೀತ ನಿರ್ದೇಶಕರು ವೆಂಕಟ್ ಡೇಟ್‌ಗಾಗಿ ಕಾಯುತ್ತಿದ್ದಾರೆ.

"ನೀವು ಚಿತ್ರಸಂಗೀತಕ್ಕೆ ಅಪಮಾನ ಮಾಡುತ್ತಿಲ್ಲವೇ?" ಎಂಬ ಪ್ರಶ್ನೆಯನ್ನು ವೆಂಕಟ್ ಮುಂದೆ ಇಟ್ಟರೆ, ಅವರು "ನಾನು ಗಾಯಕ ಅಂತ ಯಾವತ್ತೂ ಹೇಳಿಲ್ಲ, ನನ್ನಿಂದ ಯಾರಿಗಾದರೂ ಅಪಮಾನ ಆಗುತ್ತಿದ್ದರೆ ಕ್ಷಮೆ ಕೇಳುತ್ತೇನೆ. ಆದರೆ, ಯಾರೇ ಹೇಳಿದರೂ ನಾನು ಹಾಡುವುದನ್ನು ನಿಲ್ಲಿಸುವುದಿಲ್ಲ. ಈ ಹಾಡು ನನ್ನ ಉಸಿರು ನಿಲ್ಲುವ ತನಕ ಇದ್ದೇ ಇರುತ್ತದೆ" ಅಂತಾರೆ.

ಕವಿರಾಜ್ ಕರೆಯುತ್ತಿದ್ದಾರೆ ಬನ್ನಿ

ಚಿತ್ರಸಾಹಿತಿ ಕವಿರಾಜ್ ನಿರ್ದೇಶನದಲ್ಲಿ 'ಮದುವೆಯ ಮಮತೆಯ ಕರೆಯೋಲೆ' ಚಿತ್ರ ಮೂಡಿಬಂದಿದೆ. ಚಿತ್ರವು ಈ ವಾರ ರಾಜ್ಯಾದ್ಯಂತ ಬಿಡುಗಡೆ ಆಗುತ್ತಿದೆ. ಇದು ಇವರ ಚೊಚ್ಚಲು ಸಿನಿಮಾ ಆಗಿದ್ದರಿಂದ ನಿರೀಕ್ಷೆಯಂತೂ ಮೂಡಿದೆ.



ನಾನಾ ಕಾರಣಗಳಿಂದಾಗಿ ಸಿನಿಮಾ ಕುತೂಹಲ ಮೂಡಿಸಿದೆ. ದರ್ಶನ್ ಬ್ಯಾನರ್‌ನಲ್ಲಿ ಮೂಡಿಬಂದಿರುವ ಚಿತ್ರದಲ್ಲಿ ಹೊಸ ಹುಡುಗನಿಗೆ ನಾಯಕಪಟ್ಟ ಕಟ್ಟಲಾಗಿದೆ. ಸಿನಿಮಾದ ಕತೆಯೇ ವಿಶೇಷವಾಗಿದೆ. ಇಡೀ ಫ್ಯಾಮಿಲಿ ನೋಡುವಂತಹ ಸಿನಿಮಾವನ್ನು ಕಟ್ಟಿಕೊಟ್ಟಿದ್ದಾರಂತೆ ಕವಿರಾಜ್. ಚಿತ್ರದ ಕತೆನೇ ಹೀರೊ ಅನ್ನುವುದು ಮತ್ತೊಂದು ವಿಶೇಷ. ಎಮೋಷನ್ಸ್ ಮತ್ತು ಕಾಮಿಡಿಯನ್ನು ಬಲು ಸೊಗಸಾಗಿ ಮಿಕ್ಸ್ ಮಾಡಿದ್ದಾರಂತೆ ನಿರ್ದೇಶಕರು. ಹೀಗಾಗಿ ಇಡಿ ಚಿತ್ರ ಕಾಮಿಡಿಯಾಗಿಯೇ ತೆರೆದುಕೊಳ್ಳುತ್ತದೆ.

ಈ ಸಿನಿಮಾದ ಮೂಲಕ ಸೂರಜ್ ಎಂಬ ಹೊಸ ಹುಡುಗನನ್ನು ಸ್ಯಾಂಡಲ್‌ವುಡ್‌ಗೆ ಪರಿಚಯಿಸಲಾಗುತ್ತಿದೆ. ಈವರೆಗೂ ನೋಡದೇ ಇರುವ ಅಮೂಲ್ಯರನ್ನು ಇಲ್ಲಿ ಕಾಣಬಹುದು. ಈ ಚಿತ್ರದಲ್ಲಿ ಅವರು ಒಂದು ಸ್ಟೆಪ್ ಮುಂದೆ ಹೋಗಿದ್ದಾರೆ. ತುಂಬಾ ಮೆಚ್ಯೂರ್ಡ್ ಆಗಿ ಕಾಣಿಸಿದ್ದಾರೆ. ಅನಂತ್ ನಾಗ್ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಅವರದ್ದು ಕೃಷ್ಣೇ ಗೌಡ ಎಂಬ ಪಾತ್ರ. ಮತ್ತೊಂದು ಪ್ರಮುಖ ಪಾತ್ರವನ್ನು ಅಚ್ಯುತ್ ಕುಮಾರ್ ನಿರ್ವಹಿಸಿದ್ದಾರೆ.

ವಿ.ಹರಿಕೃಷ್ಣ ಸಂಗೀತ ನಿರ್ದೇಶನದಲ್ಲಿ ಹಾಡುಗಳು ಮೂಡಿಬಂದಿದ್ದು, ಬಹುತೇಕ ಹಾಡುಗಳು ಹಿಟ್ ಲಿಸ್ಟ್‌ನಲ್ಲಿವೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com